

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಫೆಬ್ರವರಿ 19 ಸೋಮವಾರ 2024

ಸಂಪುಟ: 44 | ಸಂಚಿಕೆ: 302 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ದೆಹಲಿಯಲ್ಲಿ ಬಿಜೆಪಿ ರಾಷ್ಟ್ರೀಯ ಸಮಾವೇಶ

ಬಿಜೆಪಿ 370, ಎನ್‌ಡಿಎ 400 ಸ್ಥಾನ ಮೋದಿ ಟಾರ್ಗೆಟ್

ರಾಷ್ಟ್ರ ನೀತಿಗಾಗಿ ಕೆಲಸ ಮಾಡುತ್ತಿದ್ದೇನೆ: ಪ್ರಧಾನಿ ಮೋದಿ



ದೆಹಲಿಯಲ್ಲಿ ಭಾನುವಾರ ಬಿಜೆಪಿ ರಾಷ್ಟ್ರೀಯ ಸಮಾವೇಶ ನಡೆಯಿತು. ಪ್ರಧಾನಿ ಮೋದಿ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಕೇಂದ್ರ ಸಚಿವರಾದ ರಾಜನಾಥಸಿಂಗ್, ಅಮಿತ್ ಶಾ ಇನ್ನಿತರರಿದ್ದರು.

ನವದೆಹಲಿ, ಫೆ.18– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ 370 ಸ್ಥಾನಗಳಲ್ಲಿ ಗೆಲುವು ಸಾಧಿಸುವುದರೊಂದಿಗೆ ಎನ್‌ಡಿಎ 400 ಕ್ಷೇತ್ರಗಳಲ್ಲಿ ಗೆಲ್ಲಬೇಕು. ಈ ಗುರಿ ತಲುಪಲು ಕಾರ್ಯಕರ್ತರು ಶ್ರಮಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.

ದೆಹಲಿಯಲ್ಲಿ ಬಿಜೆಪಿ ರಾಷ್ಟ್ರೀಯ ಸಮಾವೇಶದಲ್ಲಿ ಪಾಲ್ಗೊಂಡು ಮಾತನಾಡಿದ ಪ್ರಧಾನಿ ಮೋದಿ, ಲೋಕಸಭೆ ಚುನಾವಣಾ ಪ್ರಚಾರದ ವೇಳೆ ಕಾರ್ಯಕರ್ತರು ಸೇರಿದಂತೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವಂತೆ ಪಕ್ಷದ ನಾಯಕರಿಗೆ ಕಿವಿಮಾತು ಹೇಳಿದರು.

2047 ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಮಾಡಲು ರಾಷ್ಟ್ರವು ಈಗ ದೊಡ್ಡ ಕನಸು ಮತ್ತು ನಿರ್ಣಯಗಳನ್ನು ಮಾಡಬೇಕಾಗಿದೆ. ಮುಂದಿನ ಐದು ವರ್ಷಗಳು ನಿರ್ಣಾಯಕವಾಗಲಿವೆ. ವಿಕಸಿತ ಭಾರತದ ಕಡೆಗೆ ಒಂದು ದೊಡ್ಡ ಜಿಗಿತವನ್ನು ತೆಗೆದುಕೊಳ್ಳಬೇಕಾಗಿದೆ. ಬಿಜೆಪಿಯು ಪ್ರಬಲ ಸಂಖ್ಯೆಯಲ್ಲಿ ಅಧಿಕಾರಕ್ಕೆ ಮರಳುವುದನ್ನು ಖಚಿತಪಡಿಸಿಕೊಳ್ಳುವುದು ಮೊದಲ ●8ನೇ ಪುಟಕ್ಕೆ

ಲೋಕಸಭಾ ಚುನಾವಣೆ ಮಹಾಭಾರತದ ಯುದ್ಧದಂತೆ

ನವದೆಹಲಿ, ಫೆ.18– ಮುಂಬರುವ ಲೋಕಸಭೆ ಚುನಾವಣೆಯನ್ನು ಮಹಾಭಾರತ ಯುದ್ಧಕ್ಕೆ ಹೋಲಿಸಿರುವ ಗೃಹ ಸಚಿವ ಅಮಿತ್ ಶಾ ಅವರು, ಪ್ರಧಾನಿ

ಅಮಿತ್ ಶಾ ವಿಶ್ಲೇಷಣೆ

ನರೇಂದ್ರ ಮೋದಿ ಅವರು ದೇಶದ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಬಿಜೆಪಿಯನ್ನು ಮುನ್ನಡೆಸುತ್ತಿದ್ದರೆ ಕಾಂಗ್ರೆಸ್ ನೇತೃತ್ವದ "ಇಂಡಿಯಾ ಮೈತ್ರಿಕೂಟ ಕುಟುಂಬ ರಾಜಕಾರಣ ಮತ್ತು ಭ್ರಷ್ಟಾಚಾರದಿಂದ ತುಂಬಿದೆ ಎಂದು ಟೀಕಿಸಿದರು. ಬಿಜೆಪಿ ರಾಷ್ಟ್ರೀಯ ಸಮಾವೇಶದಲ್ಲಿ ಮಾತನಾಡಿದ ಅಮಿತ್ ಶಾ, ಕುಟುಂಬ ರಾಜಕಾರಣ ಮತ್ತು ತುಷ್ಟೀಕರಣವನ್ನು ಗುರಿಯಾಗಿಸಿಕೊಂಡು ಇಂಡಿಯಾ ಮೈತ್ರಿಕೂಟದ ಪ್ರತಿಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಿದರು. ಮಹಾಭಾರತ ಯುದ್ಧದಲ್ಲಿ ಕೌರವರು ಮತ್ತು ಪಾಂಡವರು ಎಂಬ ಎರಡು ಪಾಳಯಗಳಿದ್ದಂತೆ ಇಂದು ಚುನಾವಣೆಗೂ ಮುನ್ನ ಎರಡು ಪಾಳೆಯಗಳಿವೆ. ಅದರಲ್ಲಿ ಒಂದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ, ಇನ್ನೊಂದು ಕಾಂಗ್ರೆಸ್ ನೇತೃತ್ವದ ಇಂಡಿಯಾ ಮೈತ್ರಿಕೂಟ ಎಂದು ಹೇಳಿದರು. ●8ನೇ ಪುಟಕ್ಕೆ

ಮದುವೆ ದಿಬ್ಬಣದ ಟಿಟಿ ವಾಹನ ಲಾರಿಗೆ ಡಿಕ್ಕಿ

ಮೈಸೂರಿನ ಇಬ್ಬರು ಸೇರಿ ಮೂವರ ದುರ್ಮರಣ

● 7 ಮಂದಿಗೆ ಗಾಯ, ಮಹಿಳೆ ಸ್ಥಿತಿ ಗಂಭೀರ ● ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಭೀಕರ ಅಪಘಾತ



ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಭೈರಪಟ್ಟಣ ಚಾಮುಂಡೇಶ್ವರಿ ವೈದ್ಯಕೀಯ ಕಾಲೇಜು ಬಳಿ ಸಂಭವಿಸಿದ ಭೀಕರ ಅಪಘಾತದಲ್ಲಿ ನಜ್ಜುಗುಜ್ಜಾಗಿರುವ ಟಿಟಿ ವಾಹನ.

ಮಂಡ್ಯ, ಫೆ.18(ಮೋಹನ್ ರಾಜ್)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಶುಕ್ರವಾರ ತಡರಾತ್ರಿ ಸಂಭವಿಸಿದ ಭೀಕರ ಅಪಘಾತದಲ್ಲಿ ಧಾರವಾಡ ಮೂಲದ ಮಹಿಳೆ ಹಾಗೂ ಮೈಸೂರಿನ ಇಬ್ಬರು ಸೇರಿ ಮೂವರು ಸಾವನ್ನಪ್ಪಿದ್ದು, ಏಳು ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ.

ಹಾವೇರಿಯಿಂದ ಮೈಸೂರಿಗೆ ಬರುತ್ತಿದ್ದ ಟೆಂಪೋ ಟ್ರಾವೆಲರ್(ಟಿಟಿ), ಚನ್ನಪಟ್ಟಣ ಹೊರವಲಯದ ಭೈರಪಟ್ಟಣ ಚಾಮುಂಡೇಶ್ವರಿ ವೈದ್ಯಕೀಯ ಕಾಲೇಜು ಬಳಿ ಶುಕ್ರವಾರ ಮಧ್ಯರಾತ್ರಿ 1.30ರ ಸುಮಾರಿಗೆ ಮುಂದೆ ಸಾಗುತ್ತಿದ್ದ ಲಾರಿಗೆ ಡಿಕ್ಕಿ ಹೊಡೆದು, ಪಲ್ಟಿಯಾದ ಪರಿಣಾಮ ಮೈಸೂರು ತಾಲೂಕು, ದೇವಲಾಪುರ ಸಮೀಪದ ಸೋಮೇಶ್ವರಪುರ ನಿವಾಸಿ ಸೋಮಲಿಂಗಪ್ಪ(70), ಹುಣಸೂರು ತಾಲೂಕು ಕರಿಮುದ್ದನಹಳ್ಳಿ ನಿವಾಸಿ ಶಿವಲಿಂಗಪ್ಪ(66) ಹಾಗೂ ವಧುವಿನ ಸಂಬಂಧಿಯಾದ ಧಾರವಾಡ ನಿವಾಸಿ ರಾಜೇಶ್ವರಿ ದೇಸಾಯಿ(56) ಮೃತಪಟ್ಟಿದ್ದಾರೆ.

ಮೈಸೂರು ಮೂಲದ ಟಿಟಿ ವಾಹನದ ಚಾಲಕ ಪ್ರಸನ್ನ, ಕುಮಾರಸ್ವಾಮಿ, ನಿತಿನ್, ಲಕ್ಷ್ಮಿ, ಚೂಡಾರತ್ನ, ಲೀಲಾವತಿ ಮತ್ತು ನಮ್ರತಾ ಸೇರಿದಂತೆ ಏಳು ಮಂದಿ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇವರಲ್ಲಿ ಚೂಡಾರತ್ನ ಅವರ ಸ್ಥಿತಿ ಚಿಂತಾಜನಕವಾಗಿದೆ. ಇವರು ಹಾವೇರಿಯಲ್ಲಿ ಫೆ.16ರಂದು ನಡೆದ ಮೈಸೂರಿನ ಕುಮಾರಸ್ವಾಮಿ ಪುತ್ರನ ವಿವಾಹ ಸಮಾರಂಭದಲ್ಲಿ ಪಾಲ್ಗೊಂಡು ವಾಪಸ್ಸಾಗುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಮೈಸೂರು ತಾಲೂಕು ದಾಸನಕೊಪ್ಪಲು ಗೇಟ್ ಬಳಿಯ ಟ್ರೆಂಡ್ಸ್ ಅಪಾರ್ಟ್‌ಮೆಂಟ್ ನಿವಾಸಿ ಕುಮಾರಸ್ವಾಮಿ ಅವರು ಫೆ.15ರಂದು ಟಿಟಿ ವಾಹನ ಬಾಡಿಗೆ ಪಡೆದು ಸಂಬಂಧಿಕರೊಂದಿಗೆ ಹಾವೇರಿಗೆ ತೆರಳಿದ್ದರು. ಫೆ16ರಂದು ಮದುವೆ ಮುಗಿದ ಬಳಿಕ ಒಟ್ಟು 14 ಮಂದಿ ಟಿಟಿ ವಾಹನದಲ್ಲಿ ಪ್ರಯಾಣಿಸುತ್ತಿದ್ದರು. ●8ನೇ ಪುಟಕ್ಕೆ

ವಿಳಂಬ ಧೋರಣೆ ಬಿಡಿ, ರೈತರ ಬೇಡಿಕೆಗಳನ್ನು ಒಪ್ಪಿಕೊಳ್ಳಿ

ಸರ್ಕಾರಕ್ಕೆ ರೈತ ನಾಯಕ ದಲ್ಲೇವಾಲ್



ನವದೆಹಲಿಯಲ್ಲಿ ರೈತರ ಪ್ರತಿಭಟನೆಯ ದೃಶ್ಯ.

ನವದೆಹಲಿ, ಫೆ.18– ಕೇಂದ್ರ ಸರ್ಕಾರ ವಿಳಂಬ ಧೋರಣೆಯನ್ನು ಅನುಸರಿಸುವುದನ್ನು ಬಿಡಬೇಕು ಹಾಗೂ ರೈತರ ಬೇಡಿಕೆಗಳನ್ನು 2024 ರ ಲೋಕಸಭಾ ಚುನಾವಣೆಗೆ ನೀತಿ ಸಂಹಿತೆ ಜಾರಿಯಾಗುವುದಕ್ಕೂ ಮುನ್ನ ಈಡೇರಿಸಬೇಕು ಎಂದು ರೈತ ನಾಯಕ ಜಗ್ಜಿತ್ ಸಿಂಗ್ ದಲ್ಲೇವಾಲ್ ಕೇಂದ್ರ ಸಚಿವರೊಂದಿಗಿನ ಸಭೆಗೂ ಮುನ್ನ ಹೇಳಿದ್ದಾರೆ.



ಮುಂದಿನ ತಿಂಗಳು ಲೋಕಸಭಾ ಚುನಾವಣೆಗೆ ದಿನಾಂಕಗಳು ಘೋಷಣೆಯಾಗುವ ಸಾಧ್ಯತೆ ಇದೆ. ಕೇಂದ್ರ ಸಚಿವರು ಹಾಗೂ ರೈತ ಮುಖಂಡರೊಂದಿಗಿನ ಸಭೆ ಆರಂಭವಾಗಿದೆ. ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ, ಸಾಲ ಮನ್ನಾ ಸೇರಿದಂತೆ ಹಲವು ಬೇಡಿಕೆಗಳನ್ನು ರೈತ ಮುಖಂಡರು ಕೇಂದ್ರ ಸರ್ಕಾರದ ಮುಂದಿಟ್ಟಿದ್ದಾರೆ.

ಪಂಜಾಬ್–ಹರ್ಯಾಣಗಳ ಗಡಿ ಪಾಯಿಂಟ್‌ಗಳಾದ ಶಂಭು ಹಾಗೂ ಖನೌರಿಗಳಲ್ಲಿ ಸಾವಿರಾರು ರೈತರು ಪ್ರತಿಭಟನೆ ನಡೆಸುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸಚಿವರೊಂದಿಗೆ ಈ ಸಭೆ ನಡೆಯುತ್ತಿದೆ. ಈ ಹಿಂದೆ ಫೆಬ್ರವರಿ 8, 12 ಮತ್ತು 15 ರಂದು ಸಚಿವರು ಮತ್ತು ರೈತ ಮುಖಂಡರು ಭೇಟಿಯಾಗಿದ್ದರು ಆದರೆ ಮಾತುಕತೆಗಳು ನಿರ್ಣಾಯಕ ಘಟ್ಟ ತಲುಪಿರಲಿಲ್ಲ. ನೀತಿ ಸಂಹಿತೆ ●8ನೇ ಪುಟಕ್ಕೆ

ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಕನಿಷ್ಠ 20 ಕ್ಷೇತ್ರಗಳಲ್ಲಿ ಗೆಲುವು ಖಚಿತ

ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ವಾಸ



ಮಳವಳ್ಳಿ ತಾಲೂಕು ಮಂಚನಹಳ್ಳಿಯಲ್ಲಿ ಕನಕದಾಸರ ಪುತ್ಥಳಿ ಅನಾವರಣ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗ್ರಾಮಸ್ಥರು ಸನ್ಮಾನಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಇನ್ನಿತರರು ಚಿತ್ರದಲ್ಲಿದ್ದಾರೆ.

ಮಳವಳ್ಳಿ, ಫೆ.18– 'ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಕನಿಷ್ಠ 20 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವುದು ಖಚಿತ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭಾನುವಾರ ಹೇಳಿದ್ದಾರೆ.

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕು ಮಂಚನಹಳ್ಳಿಯಲ್ಲಿ ಕನಕದಾಸರ ಪುತ್ಥಳಿ ಅನಾವರಣಗೊಳಿಸಿ, ಕನಕದಾಸರ ಭವನ ಕಟ್ಟಡದ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಭಾಗವಹಿಸುವ ಮುನ್ನ ಸುದ್ದಿಗಾರರೊಂದಿಗೆ ಮುಖ್ಯಮಂತ್ರಿಗಳು ಮಾತನಾಡಿದರು.

ಲೋಕಸಭಾ ಚುನಾವಣೆ ಎದುರಿಸಲು ನಾವು ಸಿದ್ಧರಾಗಿದ್ದೇವೆ. ಬಿಜೆಪಿ ಮುಖಂಡರು ಬರೀ ಬುರುಡೆ ಬಿಡುತ್ತಿದ್ದಾರೆ. ಬಿಜೆಪಿಯ ಸುಳ್ಳುಗಳನ್ನು ಜನ ನಂಬುವುದಿಲ್ಲ. ಜನ ಈ ಬಾರಿ ಕಾಂಗ್ರೆಸ್ ಪಕ್ಷಕ್ಕೆ ಆಶೀರ್ವಾದ ಮಾಡುತ್ತಾರೆಂದು ವಿಶ್ವಾಸ ವ್ಯಕ್ತಪಡಿಸಿದರು.

ಇದೇ ವೇಳೆ ಸಿಎಂ, ಡಿಸಿಎಂ ಕೂಡ ಲೋಕಸಭಾ ಚುನಾವಣೆಗೆ ಸ್ಪರ್ಧೆ ಮಾಡಲಿ ಎಂದು ಸಚಿವ ಮಹದೇವಪ್ಪ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಸ್ಥಳೀಯ ಮಟ್ಟದಲ್ಲಿ ಯಾರಿಗೆ ಒಲವು ಇರುತ್ತದೆಯೋ ಅವರು ಅಭ್ಯರ್ಥಿ ಆಗುತ್ತಾರೆ. ಸ್ಥಳೀಯರು ಯಾರ ಹೆಸರು ಹೇಳುತ್ತಾರೋ ಅವರಿಗೆ ಟಿಕೆಟ್ ಕೊಡುತ್ತೇವೆ. ಮಹದೇವಪ್ಪ ಅವರ ಹೆಸರು ಹೇಳಿದರೆ ಮಹದೇವಪ್ಪಗೆ, ಬೇರೆಯವರ ಹೆಸರು ಹೇಳಿದರೆ ಬೇರೆಯವರಿಗೆ ಟಿಕೆಟ್ ಕೊಡುತ್ತೇವೆಂದು ಹೇಳಿದರು. ಮೈಸೂರಿನಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ನಟ ಡಾಲಿ ಧನಂಜಯ ಸ್ಪರ್ಧೆ ವಿಚಾರಕ್ಕೆ ಪ್ರತಿಕ್ರಿಯಿಸಿ ನನಗೆ ಆ ಬಗ್ಗೆ ಗೊತ್ತಿಲ್ಲ. ಅದರ ಬಗ್ಗೆ ಚರ್ಚೆ ಆಗಿಲ್ಲ ನನಗೆ ಗೊತ್ತೂ ಇಲ್ಲ ಎಂದು.

ಮಾಜಿ ಪ್ರಧಾನಿ ಹೆಚ್‌ಡಿಡಿ ಆಸ್ಪತ್ರೆಯಿಂದ ಡಿಸ್ಚಾರ್ಜ್

ಬೆಂಗಳೂರು, ಫೆ.18– ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಸುಸ್ತು, ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದ ಹೆಚ್‌ಡಿಡಿ ಅವರು ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದರು. ಕಳೆದ ಎರಡು ದಿನಗಳಿಂದ ಹೆಚ್‌ಡಿಡಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಡಾ. ಸತ್ಯನಾರಾಯಣ ಮೈಸೂರು ನೇತೃತ್ವದ ತಂಡದಿಂದ ದೇವೇಗೌಡರಿಗೆ ಚಿಕಿತ್ಸೆ ನೀಡಿದೆ. ಇದೀಗ ಅವರ ಆರೋಗ್ಯದಲ್ಲಿ ಸುಧಾರಣೆ ಕಂಡು ಬಂದ ಹಿನ್ನೆಲೆಯಲ್ಲಿ ಇಂದು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಸದ್ಯ ಪದ್ಮನಾಭನಗರದ ಮನೆಗೆ ಹೆಚ್‌ಡಿಡಿ ತೆರಳಿ ವಿಶ್ರಾಂತಿ ಪಡೆದುಕೊಳ್ಳಲಿದ್ದಾರೆ.



ಕಾಂಗ್ರೆಸ್‌ನಲ್ಲಿದ್ದ ಮಾಜಿ ಸಿಎಂ ಸೇರಿ ಎಲ್ಲರನ್ನೂ ಸಿದ್ದರಾಮಯ್ಯ ಬಿಜೆಪಿಗೆ ಕಳಿಸುತ್ತಿದ್ದಾರೆ



ಹಾಸನ, ಫೆ.18– ನಾವು ಬಿಜೆಪಿ ಜೊತೆ ವಿಲೀನ ಆಗುತ್ತೇವೆ ಎಂದು ಹೇಳುವ ಸಿದ್ದರಾಮಯ್ಯ ಅವರು ಏನು ಮಾಡುತ್ತಿದ್ದಾರೆ? ಕಾಂಗ್ರೆಸ್‌ನಲ್ಲಿರುವ ಮಾಜಿ ಮುಖ್ಯಮಂತ್ರಿ ಸೇರಿ ಎಲ್ಲರನ್ನು ಬಿಜೆಪಿಗೆ ಕಳುಹಿಸುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಹೇಳಿದರು. ಬಿಜೆಪಿ ಜೊತೆ ಜೆಡಿಎಸ್ ಮೈತ್ರಿ ಆಗಿಲ್ಲ, ವಿಲೀನವಾಗಿದೆ. ರಾಜ್ಯದಲ್ಲಿರುವುದು ಒಂದೇ ವಿರೋಧ ಪಕ್ಷ, ಸೋಲಿನ ಭಯ ಶುರುವಾಗಿದೆ ಎಂದು ಸಿದ್ದರಾಮಯ್ಯ ಹೇಳಿಕೆ ನೀಡಿದ್ದರು.

ಈ ಬಗ್ಗೆ ಹಾಸನ ತಾಲೂಕಿನ ಮಾರನಾಯಕನಹಳ್ಳಿಯಲ್ಲಿ ಮಾತನಾಡಿದ ಕುಮಾರಸ್ವಾಮಿ, ನಾವು ವಿಲೀನ ಆಗುತ್ತೇವೆ ಅಂತಾ ಹೇಳುತ್ತಿದ್ದೀರಲ್ಲ, ನೀವು ಏನ್ ಮಾಡುತ್ತಿದ್ದೀರಿ ಕಾಂಗ್ರೆಸ್‌ನಲ್ಲಿದ್ದವರನ್ನು ಟೆಂಟ್, ಗಳಗಳ ಸಮೇತ ಕಿತ್ತು ಕಳಿಸುತ್ತಿದ್ದೀರಿ. ಕಾಂಗ್ರೆಸ್‌ನಲ್ಲಿದ್ದ ಮಾಜಿ ಸಿಎಂ ಸೇರಿ ಎಲ್ಲರನ್ನೂ ಬಿಜೆಪಿಗೆ ಕಳಿಸುತ್ತಿದ್ದೀರಿ ಎಂದರು.

ಬಿಜೆಪಿ ಜೊತೆ ಮೈತ್ರಿ ಮಾಡಿಕೊಳ್ಳಲು ದೇವೇಗೌಡರೇ ಹೇಳಿ ಕಳುಹಿಸಿದ್ದಾರೆ ಅಂತ ನೀವು ಹೇಳುತ್ತಿದ್ದೀರಿ. ಏತಕ್ಕೆ ಹೋಗಲು ದೇವೇಗೌಡರು ಹೇಳಿದರು? ಅವರ 60 ವರ್ಷ ರಾಜಕೀಯ ಜೀವನದಲ್ಲಿ ಕಾಂಗ್ರೆಸ್ ನಂಬಿ, ಕಾಂಗ್ರೆಸ್ ಸಂಕಷ್ಟದಲ್ಲಿದ್ದಾಗ ಧ್ವನಿಗೂಡಿಸಿ ಕೆಲಸ ಮಾಡಿದ್ದರು. 2018ರಲ್ಲಿ ನಿಮ್ಮ ಜೊತೆ ಸಂಬಂಧ ಬೆಳೆಸಿದ್ದೆವಲ್ಲ? ನೀವು ಕೊಟ್ಟ ಕೊಡುಗೆ ಏನು? ಎಂದು ಪ್ರಶ್ನಿಸಿದರು. ●8ನೇ ಪುಟಕ್ಕೆ

V.K. GOLD
ಗಿರವಿ ಚಿನ್ನಾಭರಣ ಖರೀದಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಮ್ಮ ಕಂಪನಿಯ ಹಣದಿಂದ ಬಿಡಿಸಿ ಉಳಿದ ಹಣವನ್ನು ಕೊಡುತ್ತೇವೆ
(T&C)
ಒಂದು ಗ್ರಾಂ ಚಿನ್ನಕ್ಕೆ 6200
8867564400

ಬಂಡೀಪುರದಲ್ಲಿ 612 ಪಾಯಿಂಟ್‌ನಲ್ಲಿ ಕ್ಯಾಮರಾ ಟ್ರ್ಯಾಪ್ ಬಳಸಿ

ಪ್ರಾಣಿ ಗಣತಿ ಆರಂಭ

- **ಮೊದಲ ಹಂತದಲ್ಲಿ 305 ಪಾಯಿಂಟ್‌ನಲ್ಲಿ ಗಣತಿ ಪೂರ್ಣ**
- **ಪ್ರತಿವರ್ಷವೂ ನಡೆಸುವ ಆಂತರಿಕ ಪ್ರಾಣಿ ಸಮೀಕ್ಷೆ**



ಅರಣ್ಯ ಪ್ರದೇಶದಲ್ಲಿ ಕ್ಯಾಮರಾ ಟ್ರ್ಯಾಪ್ ಅಳವಡಿಸಿರುವುದು.

● ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಫೆ.18 – ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಕ್ಯಾಮರಾ ಟ್ರ್ಯಾಪ್ ಬಳಸಿ ಹುಲಿ ಸೇರಿದಂತೆ ಪ್ರಾಣಿಗಳ ಆಂತರಿಕ ಗಣತಿ ಕಾರ್ಯ ಆರಂಭಿಸಲಾಗಿದ್ದು, ಮೊದಲ ಹಂತದಲ್ಲಿ 305 ಪಾಯಿಂಟ್‌ಗಳಲ್ಲಿ ಗಣತಿ ಪೂರ್ಣಗೊಳಿಸಲಾಗಿದೆ.

ಅಖಿಲ ಭಾರತ ಮಟ್ಟದಲ್ಲಿ ಪ್ರತಿ ನಾಲ್ಕು ವರ್ಷಕ್ಕೊಮ್ಮೆ ಹುಲಿ ಗಣತಿ ನಡೆಯುತ್ತದೆಯಾದರೂ, ಪ್ರತಿ ಅರಣ್ಯ ಪ್ರದೇಶದಲ್ಲೂ ವರ್ಷಕ್ಕೊಮ್ಮೆ ಕ್ಯಾಮರಾ ಟ್ರ್ಯಾಪ್ ಬಳಸಿ ಪ್ರಾಣಿ ಸಮೀಕ್ಷೆ ನಡೆಸಲಾಗುತ್ತದೆ. ಅದರ ಭಾಗವಾಗಿ ಬಂಡೀಪುರದಲ್ಲಿ ಸಮೀಕ್ಷೆ ಆರಂಭಿಸಲಾಗಿದ್ದು, ಹುಲಿ, ಆನೆ, ಚಿರತೆ, ಕಾಡೆಮ್ಮೆ, ಕಡವೆ, ಜಿಂಕೆ ಸೇರಿದಂತೆ ಮಾಂಸಾಹಾರಿ ಹಾಗೂ ಸಸ್ಯಾಹಾರಿ ಪ್ರಾಣಿಗಳ ಗಣತಿ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಪ್ರಾಣಿಗಳ ಅಂಕಿ ಅಂಶವನ್ನು ನಿಖರವಾಗಿ ದಾಖಲೀಕರಿಸುವ ನಿಟ್ಟಿನಲ್ಲಿ ಸಿಬ್ಬಂದಿಗಳು ಕ್ಯಾಮರಾ ಟ್ರ್ಯಾಪ್ ಮೂಲಕ ಸಮೀಕ್ಷಾ ಕಾರ್ಯದಲ್ಲಿ ತೊಡಗಿದ್ದು, ಕ್ಯಾಮರಾದಲ್ಲಿ ಸೆರೆಯಾದ ಪ್ರಾಣಿಗಳ ಚಿತ್ರಗಳನ್ನು ಸುರಕ್ಷಿತವಾಗಿ ಕ್ರೋಢೀಕರಿಸುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ.


ಎರಡು ಹಂತದಲ್ಲಿ ಸಮೀಕ್ಷೆ: ರಾಜ್ಯದ ಮೊದಲ ಹುಲಿ ಸಂರಕ್ಷಿತ ಪ್ರದೇಶವಾದ ಬಂಡೀಪುರ ಅಭಯಾರಣ್ಯವು 1036 ಚದರ ಕಿ.ಮೀ ವಿಸ್ತೀರ್ಣ ಹೊಂದಿದ್ದು, ಅವುಗಳಲ್ಲಿ 2 ಚಕಿಮೀ ಪ್ರದೇಶವನ್ನು ಒಂದು ಗ್ರಿಡ್ ಆಗಿ ಗುರುತಿಸಿ ನಿಗದಿತ ಸ್ಥಳದಲ್ಲಿ ಕ್ಯಾಮರಾ ಟ್ರ್ಯಾಪ್ ಅಳವಡಿಸಿ ಪ್ರಾಣಿ ಸಮೀಕ್ಷೆ ಕೈಗೊಳ್ಳಲಾಗಿದೆ. 13 ವಲಯ ಹಾಗೂ 3 ಉಪ ವಿಭಾಗಗಳಾಗಿ ಬಂಡೀಪುರ ಅರಣ್ಯವನ್ನು ವಿಭಾಗಿಸಲಾಗಿದ್ದು, ಸಮೀಕ್ಷೆಗೆ ಒಟ್ಟು 612 ಪಾಯಿಂಟ್‌ನಲ್ಲಿ ತಲಾ ಎರಡರಂತೆ 1224 ಕ್ಯಾಮರಾ ಟ್ರ್ಯಾಪ್ ಅವಶ್ಯಕತೆ ಇದೆ. ಆದರೆ, ಬಂಡೀಪುರದಲ್ಲಿ 800 ಕ್ಯಾಮರಾ ಟ್ರ್ಯಾಪ್‌ಗಳಿದ್ದು, ಈ ಹಿಂದಿನಿಂದಲೂ ಎರಡು ಹಂತದಲ್ಲಿ ಸಮೀಕ್ಷೆ ನಡೆಸಲಾಗಿದೆ. ●8ನೇ ಪುಟಕ್ಕೆ

ಕಳೆದ ವರ್ಷದಲ್ಲಿ ದಾಖಲಾದ ಪ್ರಾಣಿಗಳ ಸಂಖ್ಯೆ

ಪ್ರತಿ ವರ್ಷ ನಡೆಸುವ ಆಂತರಿಕ ಸಮೀಕ್ಷೆಯಲ್ಲಿ ಅರಣ್ಯ ಸಂಪತ್ತಿನ ಸದೃಢತೆ ಗೊತ್ತಾಗಲಿದೆ. ಕಳೆದ ವರ್ಷ ಬಂಡೀಪುರ ಅರಣ್ಯದಲ್ಲಿ 41 ಸಾವಿರ ಜಿಂಕೆ, 5500 ಕಾಡೆಮ್ಮೆ(ಕಾಟಿ), 7500 ಕಡವೆ(ಸಾಂಬರ್), 1116 ಆನೆ, 191 ಹುಲಿ ಸೇರಿದಂತೆ ಇನ್ನಿತರ ಪ್ರಾಣಿಗಳು ವಾಸಿಸುತ್ತಿರುವುದು ದಾಖಲಾಗಿತ್ತು. ಈ ವರ್ಷದ ಸಮೀಕ್ಷೆಯಲ್ಲಿ ಎಲ್ಲಾ ಪ್ರಾಣಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗಲಿದೆ ಎಂಬ ವಿಶ್ವಾಸವಿದೆ.

ಪ್ರಾಣಿಗಳ ನಿಖರ ಮಾಹಿತಿ ಆಂತರಿಕ ಸಮೀಕ್ಷೆ

2006ರಿಂದ ಪ್ರತಿ ವರ್ಷ ಆಲ್ ಇಂಡಿಯಾ ಟೈಗರ್ ಎಸ್ಟಿಮೇಷನ್ ನಡೆಸಲಾಗುತ್ತಿದ್ದು, ಬಂಡೀಪುರದಲ್ಲಿ ಕಳೆದ ಸಾಲಿನ ಎಸ್ಟಿಮೇಷನ್‌ನಲ್ಲಿ 191 ಹುಲಿಗಳಿರುವುದು ಪತ್ತೆಯಾಗಿದೆ. ಇದೀಗ ಆಂತರಿಕ ಗಣತಿ ನಡೆಸಲಾಗುತ್ತಿದ್ದು, 1036 ಚ.ಕಿ.ಮೀ ವಿಸ್ತೀರ್ಣದ ಅರಣ್ಯ ಪ್ರದೇಶದಲ್ಲಿ 2 ಚದರ ಕಿ.ಮೀ ವ್ಯಾಪ್ತಿಯನ್ನು ಒಂದು ಗ್ರಿಡ್ ಆಗಿ ಗುರುತಿಸಲಾಗಿದೆ. ಒಂದೊಂದು ಗ್ರಿಡ್‌ಗೆ ಒಂದು ಜೋಡಿ ಕ್ಯಾಮರಾ ಟ್ರ್ಯಾಪ್ ಅಳವಡಿಸಲಾಗಿದೆ. ಎರಡು ಹಂತದಲ್ಲಿ ಕ್ಯಾಮರಾ ಟ್ರ್ಯಾಪ್ ಸಮೀಕ್ಷೆ ನಡೆಸಲಾಗುತ್ತಿದೆ. ಥರ್ಮಲ್ ಸೆನ್ಸಾರ್ ಕ್ಯಾಮರಾ ಇದಾಗಿದ್ದು, ಯಾವುದೇ ಪ್ರಾಣಿ ಸಂಚರಿಸಿದರೂ ಅವುಗಳ ದೇಹದ ಉಷ್ಣಾಂಶದಿಂದ ಕ್ಲಿಕ್ ಆಗುತ್ತದೆ. ಕ್ಯಾಮರಾದಲ್ಲಿ ಸಂಗ್ರಹವಾದ ಚಿತ್ರಗಳನ್ನು ಕ್ಯಾಟ್ ಟ್ರ್ಯಾಕ್ ಸಾಫ್ಟ್‌ವೇರ್‌ನಲ್ಲಿ ಹಾಕುವುದರಿಂದ ಹುಲಿ ಗಣತಿಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಇದರಲ್ಲಿ ಹುಲಿಗಳ ಫೋಟೋಗಳು ಪಟ್ಟೆಗಳ ಆಧಾರದ ಮೇಲೆ ಅಂಕಿ ಅಂಶವನ್ನು ನಿಖರವಾಗಿ ತೋರಿಸುತ್ತವೆ. ಈ ಸಾಫ್ಟ್‌ವೇರ್‌ನಲ್ಲಿ ದಾಖಲಾಗುವ ಅಂಕಿ ಅಂಶ ಶೇ.99 ಖಚಿತ ಮಾಹಿತಿಯಾಗಿದೆ. ಈ ಕ್ಯಾಮರಾಗಳನ್ನು 25 ದಿನ ಕಾಡಲ್ಲಿರಿಸಲಾಗುತ್ತದೆ. ಕೆಲವು ಪ್ರಾಣಿಗಳು ಹಗಲಿನ ವೇಳೆ, ಮತ್ತೆ ಕೆಲವು ಪ್ರಾಣಿಗಳು ರಾತ್ರಿ ವೇಳೆ ಸಂಚರಿಸುವುದರಿಂದ ನಮ್ಮ ಕಾಡಲ್ಲಿ ಏನೇನು ಪ್ರಾಣಿಗಳಿವೆ ಎನ್ನುವ ಮಾಹಿತಿ ಕ್ಯಾಮರಾ ಟ್ರ್ಯಾಪ್‌ನಿಂದ ಖಚಿತಗೊಳ್ಳುತ್ತದೆ.



– ಡಾ.ಪಿ.ರಮೇಶ್ ಕುಮಾರ್, ನಿರ್ದೇಶಕರು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ.



ಇಂದು ಡಿ.ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನೆಗೆ ಶಂಕುಸ್ಥಾಪನೆ



ಮೈಸೂರು, ಫೆ.18–ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕರ್ನಾಟಕ ಸಂಭ್ರಮ–50ರ ಸವಿನೆನಪಿಗೆ 'ಡಿ.ದೇವರಾಜ ಅರಸು ಪ್ರತಿಮೆ ಪ್ರತಿಷ್ಠಾಪನೆ' ಶಂಕುಸ್ಥಾಪನಾ ಸಮಾರಂಭವನ್ನು ಫೆ.19ರಂದು ಬೆಳಗ್ಗೆ 9.30 ಗಂಟೆಗೆ ಸಿದ್ಧಾರ್ಥನಗರದ ನೂತನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತಿಯಲ್ಲಿ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಎಚ್.ಸಿ.ಮಹದೇವಪ್ಪ ಶಂಕುಸ್ಥಾಪನೆ ಮಾಡಲಿದ್ದು, ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಅಧ್ಯಕ್ಷತೆ ವಹಿಸಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ ಎಸ್.ತಂಗಡಗಿ, ಪಶುಸಂಗೋಪನೆ ಹಾಗೂ ರೇಷ್ಮೆ ಸಚಿವ ಕೆ.ವೆಂಕಟೇಶ್ ಉಪಸ್ಥಿತಿ ಇರಲಿದೆ.

ಮುಖ್ಯ ಅತಿಥಿಗಳಾಗಿ ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್ ಪ್ರಸಾದ್ ಹಾಗೂ ಸುಮಲತಾ ಅಂಬರೀಶ್ ಭಾಗವಹಿಸುವರು. ಶಾಸಕರಾದ ಕೆ.ಹರೀಶ್ ಗೌಡ, ಜಿ.ಟಿ.ದೇವೇಗೌಡ, ರವಿಶಂಕರ್.ಡಿ, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ಟಿ.ಎಸ್.ಶ್ರೀವತ್ಸ ಹಾಗೂ ವಿಧಾನಪರಿಷತ್‌ನ ಸದಸ್ಯರಾದ ಮರಿತಿಬ್ಬೇಗೌಡ, ಎಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧುಜಿ.ಮಾದೇಗೌಡ ಸಮಾರಂಭದ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ನವದೆಹಲಿಯ ಭಾರತ ಮಂಟಪಂನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಅಧಿವೇಶನದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರೊಂದಿಗೆ ಮೈಸೂರು ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮಂಡ್ಯ ಜಿಲ್ಲಾಧ್ಯಕ್ಷ ಇಂದ್ರೇಶ್, ಚಾ.ನಗರ ಲೋಕಸಭಾ ಕ್ಷೇತ್ರದ ಪ್ರಭಾರಿ ಫಣೀಶ್, ರಾಜ್ಯ ಎಸ್‌ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕೃಷ್ಣನಾಯಕ್, ರಾಜ್ಯ ಕಾರ್ಯಾಲಯದ ಕಾರ್ಯದರ್ಶಿ ವಿಶ್ವನಾಥ್ ಪಾಲ್ಗೊಂಡಿದ್ದರು.

ಮೂಲಸೌಕರ್ಯಗಳಿಗೆ ಒತ್ತು ನೀಡದ ಬಜೆಟ್

ಜೆಡಿಎಸ್ ರಾಜ್ಯ ವಕ್ತಾರ ರವಿಚಂದ್ರೇಗೌಡ ಆರೋಪ



ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ರಾಜ್ಯ ವಕ್ತಾರ ರವಿಚಂದ್ರೇಗೌಡ ಮಾತನಾಡಿದರು.

ಮೈಸೂರು,ಫೆ.18(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯ ವಿಧಾನಸಭೆಯಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಯಾವುದೇ ಮೂಲಸೌಕರ್ಯಗಳಿಗೆ ಒತ್ತು ನೀಡಿಲ್ಲ ಎಂದು ಜೆಡಿಎಸ್ ರಾಜ್ಯ ವಕ್ತಾರ ಎನ್.ಆರ್. ರವಿಚಂದ್ರೇಗೌಡ ಬೇಸರ ವ್ಯಕ್ತಪಡಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಜೆಟ್‌ನಲ್ಲಿ ಬಂಡವಾಳ ವೆಚ್ಚವನ್ನು 55,374 ಕೋಟಿ ರೂ.ಗಳಿಗೆ ಸೀಮಿತಗೊಳಿಸಲಾಗಿದೆ. ಸಾಲವೂ ಏರಿಕೆ ಆಗಿದೆ. ಐದು ಗ್ಯಾರಂಟಿಗಳಿಗಾಗಿ 58 ಸಾವಿರ ಕೋಟಿ ತೆಗೆದಿಡಬೇಕಾಗಿರುವ ಹಿನ್ನೆಲೆಯಲ್ಲಿ ರಾಜ್ಯದ ಅಭಿವೃದ್ಧಿಗೆ ಹಣ ಸಾಲುತ್ತಿಲ್ಲ. ಜೊತೆಗೆ ಒಟ್ಟು 90 ಮಂದಿಗೆ ಸಂಪುಟ ದರ್ಜೆ ಸ್ಥಾನಮಾನ ನೀಡಲಾಗಿದೆ. ಇವುಗಳಿಂದಾಗಿ ರಾಜ್ಯಕ್ಕೆ ಆರ್ಥಿಕ ಹೊರೆಯುಂಟಾಗಿದೆ ಎಂದು ದೂರಿದರು. ಮೈಸೂರಿನ ಚಾಮುಂಡಿಬೆಟ್ಟದ ಪ್ರಾಧಿಕಾರ, ದಸರಾ ಪ್ರಾಧಿಕಾರ, ಮೈಸೂರಿಗೆ ಮೆಟ್ರೋ, ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಈ ಬಜೆಟ್‌ನಲ್ಲಿಯೂ ಕನಸಾಗಿಯೇ ಉಳಿದಿದೆ ಎಂದರು.

> "ಕೇಂದ್ರ ಸರ್ಕಾರ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹಾಗೂ ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿ ಅವರಿಗೆ ಭಾರತರತ್ನ ಪ್ರಶಸ್ತಿ ಘೋಷಿಸಬೇಕು. –ರವಿಚಂದ್ರೇಗೌಡ

ಸುದ್ದಿಗೋಷ್ಠಿಯಲ್ಲಿ ಇನ್ನಿತರ ಪದಾಧಿಕಾರಿಗಳಾದ ಪಿ.ಎಸ್.ರಾಜಶೇಖರ ಮೂರ್ತಿ, ಫಾಲ್ಕನ್ ಬೋರೇಗೌಡ, ಆರ್.ಮುದ್ದುರಾಜ್, ಯುವ ಜನತಾ ದಳದ ರಾಮು, ಎಸ್.ಪ್ರಕಾಶ್ ಪ್ರಿಯದರ್ಶನ್ ಉಪಸ್ಥಿತರಿದ್ದರು.



ಅರ್ಕ ಮಹಾಗಣಪತಿ ಪ್ರತಿಷ್ಠಾಪನ ಅಂಗವಾಗಿ ಏರ್ಪಡಿಸಿದ್ದ ಯಕ್ಷಗಾನ ಕಾರ್ಯಕ್ರಮವನ್ನು ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗಡೆ ಅವರು ಉದ್ಘಾಟಿಸಿದರು. ಅರ್ಕಧಾಮದ ಸಂಸ್ಥಾಪಕರಾದ ರಾಧಾ ಯೋಗಿ ಶ್ರೀನಿವಾಸ್ ಅರ್ಕ, ಧಾರ್ಮಿಕ ಚಿಂತಕ, ಚಲನಚಿತ್ರ ನಿರ್ದೇಶಕ ಸಿದ್ದೇಗೌಡ ಜಿಬಿಎಸ್ ಹಾಗೂ ಲಕ್ಷ್ಮಿ ನಾರಾಯಣ ಇನ್ನಿತರರು ಈ ವೇಳೆ ಉಪಸ್ಥಿತರಿದ್ದರು.

ಡಾ.ಹೆಚ್.ಹನುಮಂತಪ್ಪನವರಿಗೆ ಹೈದರಾಬಾದ್‌ನ ರಾಷ್ಟ್ರೀಯ ಚರ್ಮರೋಗ ತಜ್ಞರ ಸಮ್ಮೇಳನದ ಅಧ್ಯಕ್ಷತೆ

ಮೈಸೂರು, ಫೆ.18–ಹೈದರಾಬಾದ್‌ನಲ್ಲಿ ಫೆ.22ರಿಂದ 25ರವರೆಗೆ ನಡೆಯಲಿರುವ ರಾಷ್ಟ್ರೀಯ ಚರ್ಮರೋಗ ತಜ್ಞರ ಸಮ್ಮೇಳನದ ವೈಜ್ಞಾನಿಕ ವಿಚಾರ ಗೋಷ್ಠಿಯೊಂದರಲ್ಲಿ ಹಿರಿಯ ಚರ್ಮರೋಗ ತಜ್ಞರು, ಮೈಸೂರು ಮೆಡಿಕಲ್ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆಯ ಮಾಜಿ ನಿರ್ದೇಶಕರು ಮತ್ತು ಡೀನ್ ಡಾ.ಹೆಚ್.ಹನುಮಂತಪ್ಪನವರು ಅಧ್ಯಕ್ಷತೆ ವಹಿಸಲಿದ್ದಾರೆ. ಇವರು ಈವರೆಗೂ ರಾಷ್ಟ್ರೀಯ, ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ಅನೇಕ ಅತಿಥಿ ಉಪನ್ಯಾಸಗಳನ್ನು ನೀಡಿದ್ದಾರೆ. ಅಲ್ಲದೆ ಅನೇಕ ವೈಜ್ಞಾನಿಕ ಪ್ರಬಂಧಗಳನ್ನು ಮಂಡಿಸಿದ್ದಾರೆ. ಜೊತೆಗೆ ಹಲವು ವಿಚಾರಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ಇವರು ರಾಷ್ಟ್ರೀಯ ಮಕ್ಕಳ ಚರ್ಮರೋಗ ತಜ್ಞರ ಸಂಘದ ಅಧ್ಯಕ್ಷರೂ ಆಗಿದ್ದರು.



ಡಾ.ಹೆಚ್.ಹನುಮಂತಪ್ಪ

ಚಾಮರಾಜನಗರ ವೃತ್ತದ ಸಿಸಿಎಫ್ ಆಗಿ ಟಿ.ಹೀರಾಲಾಲ್ ನೇಮಕ




ಮೈಸೂರು, ಫೆ.18(ಎಂಟಿವೈ)– ಚಾಮರಾಜನಗರ ವೃತ್ತ ಸಿಸಿಎಫ್ ಆಗಿ ಹಿರಿಯ ಐಎಫ್‌ಎಸ್ ಅಧಿಕಾರಿ ಟಿ.ಹೀರಾಲಾಲ್ ಅವರನ್ನು ನಿಯೋಜಿಸಲಾಗಿದೆ. ಪ್ರಸ್ತುತ ಬಳ್ಳಾರಿ ವೃತ್ತದ ಸಿಸಿಎಫ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಹೀರಾಲಾಲ್ ಅವರನ್ನು ಚಾಮರಾಜನಗರ ವೃತ್ತದ ಸಿಸಿಎಫ್ ವೃತ್ತಕ್ಕೆ ವರ್ಗಾವಣೆ ಮಾಡಲಾಗಿದ್ದು, ಚಾಮರಾಜನಗರ ವೃತ್ತದಲ್ಲಿ ಸಿಸಿಎಫ್ ಆಗಿದ್ದ ಕೆ.ಚಂದ್ರಶೇಖರ್ ನಾಯಕ್ ಅವರನ್ನು ಬಳ್ಳಾರಿ ವೃತ್ತಕ್ಕೆ ವರ್ಗಾಯಿಸಲಾಗಿದೆ. ಟಿ.ಹೀರಾಲಾಲ್ ಅವರು ಈ ಹಿಂದೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ (ಸಿಎಫ್)ರಾಗಿ, ಮೈಸೂರು ವೃತ್ತದ ಸಿಸಿಎಫ್ ಆಗಿಯೂ ಸೇವೆ ಸಲ್ಲಿಸಿದ್ದರು.

ಆನ್‌ಲೈನ್‌ನಲ್ಲಿ ಮದುವೆಯೂ ಆಯ್ತು; ಈಗ ಮ್ಯಾರೇಜ್ ಸರ್ಟಿಫಿಕೇಟ್ ಸಹ ಸಿಗುತ್ತೆ!

ಸಬ್ ರಿಜಿಸ್ಟ್ರಾರ್ ಕಚೇರಿಗೆ ಅಲೆಯಬೇಕಿಲ್ಲ, ಮಧ್ಯವರ್ತಿ ಹಾವಳಿ ಇಲ್ಲವೇ ಇಲ್ಲ, ಲಂಚವನ್ನಂತೂ ಕೊಡಬೇಕಿಲ್ಲ

●ಬಾಪುಲಿಂಗರಾಜ್ ಅರಸ್

- ಮನೆಯಲ್ಲೇ ಕುಳಿತು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು
- ಕಾವೇರಿ ತಂತ್ರಾಂಶದಲ್ಲಿ ಹೊಸ ಸಾಫ್ಟ್‌ವೇರ್ ಸಿದ್ಧವಾಗಿದೆ
- ವ್ಯಾಜ್ಯ ತಪ್ಪುತ್ತದೆ, ಯಾವ ಕಾನೂನು ತೊಡಕು ಇರಲ್ಲ
- ಮೈಸೂರು ಸೇರಿ ತಿಂಗಳಾಂತ್ಯಕ್ಕೆ ಕರ್ನಾಟಕದಲ್ಲಿ ಜಾರಿ
- ವಿಶೇಷ ವಿವಾಹ ಕಾಯ್ದೆ ಇದಕ್ಕೆ ಅನ್ವಯಿಸಲ್ಲ



ಮೈಸೂರು, ಫೆ.18– ಕೊರೊನಾ ಜನರಿಗೆ ಆರೋಗ್ಯಪಾಠವನ್ನು ಮಾತ್ರ ಕಲಿಸಲಿಲ್ಲ. ಜನಜೀವನದಲ್ಲಿ ತಂತ್ರಜ್ಞಾನ ಬಳಕೆ ಕಲಿಸಿತು. ಈ ವೇಳೆ ಆನ್‌ಲೈನ್‌ನಲ್ಲಿ ಮದುವೆಗಳೂ ಆದವು. ಅದರ ಮುಂದುವರೆದ ಭಾಗವಾಗಿ ಮ್ಯಾರೇಜ್ ಸರ್ಟಿಫಿಕೇಟ್ ಪಡೆಯಲೂಬಹುದು. ಹಾಗಾಗಿ ಇನ್ನು ಮುಂದೆ ಸಬ್ ರಿಜಿಸ್ಟ್ರಾರ್ ಕಚೇರಿಗೆ ಅಲೆದಾಡುವ ಪ್ರಮೇಯವಿಲ್ಲ. ಸೂಕ್ತ ದಾಖಲಾತಿಗಳನ್ನು ಸಲ್ಲಿಸಿ ಇನ್ನು ಮುಂದೆ ಮನೆಯಲ್ಲೇ ಕುಳಿತು ಆನ್‌ಲೈನ್‌ನಲ್ಲೇ ಮ್ಯಾರೇಜ್ ಸರ್ಟಿಫಿಕೇಟ್ ಪಡೆಯಬಹುದು. ಫೆಬ್ರವರಿ ತಿಂಗಳಾಂತ್ಯಕ್ಕೆ ಮೈಸೂರು ಸೇರಿದಂತೆ ಕರ್ನಾಟಕದಲ್ಲಿ ಆನ್‌ಲೈನ್‌ನಲ್ಲಿ ಮ್ಯಾರೇಜ್ ಸರ್ಟಿಫಿಕೇಟ್ ಪಡೆಯುವ ಸೌಲಭ್ಯ ಆರಂಭವಾಗಲಿದೆ.

ವಿದೇಶಗಳಲ್ಲಿ ಮ್ಯಾರೇಜ್ ಸರ್ಟಿಫಿಕೇಟ್ ಪಡೆಯುವುದು ಕಡ್ಡಾಯವಾಗಿದೆ. ಮದುವೆ ನೋಂದಣಿ ಪತ್ರವಿಲ್ಲದಿದ್ದರೆ ಆ ಮದುವೆ ಅಮಾನ್ಯ. ನೋಂದಣಿ ಮಾಡಿಸದ ಮದುವೆಗೆ ಕಾನೂನಾತ್ಮಕವಾಗಿ ಮಾನ್ಯತೆ ಇರುವುದಿಲ್ಲ. ಆದ ಕಾರಣ ವಿದೇಶಗಳಲ್ಲಿ ಪ್ರತಿಯೊಂದು ಮದುವೆಯೂ ನೋಂದಣಿಯಾಗುತ್ತದೆ. ಎಲ್ಲೇ ಮದುವೆಯಾದರೂ ನೂತನ ದಂಪತಿ ಹನಿಮೂನ್ ಮುಂದೂಡಿದರೂ ಮದುವೆ ನೋಂದಣಿ ಮಾತ್ರ ಮುಂದೂಡುವುದಿಲ್ಲ. ಅಷ್ಟರ ಮಟ್ಟಿಗೆ ವಿದೇಶಗಳಲ್ಲಿ ವಿವಾಹ ನೋಂದಣಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಿದೆ.

ಮುಂದುವರೆದ ದೇಶಗಳಲ್ಲಿ ಮ್ಯಾರೇಜ್ ಸರ್ಟಿಫಿಕೇಟ್‌ಗಾಗಿ ದಂಪತಿ ಕಚೇರಿಗೆ ಹೋಗುವುದಿಲ್ಲ. ಮದುವೆಯಾದ ನಂತರ ಮನೆಯಲ್ಲೇ ಕುಳಿತು ದಾಖಲಾತಿ ಸಮೇತ ಮ್ಯಾರೇಜ್ ಸರ್ಟಿಫಿಕೇಟ್‌ಗೆ ಅರ್ಜಿ ಸಲ್ಲಿಸುತ್ತಾರೆ. ದಾಖಲಾತಿ ಪರಿಶೀಲನೆ ನಂತರ ಸರ್ಕಾರ ನಿಗದಿಪಡಿಸಿರುವ ದಿನದೊಳಗೆ ಆನ್‌ಲೈನ್ ಮೂಲಕವೇ ಮ್ಯಾರೇಜ್ ಸರ್ಟಿಫಿಕೇಟ್ ಪಡೆದುಕೊಳ್ಳಬಹುದು. ಆದರೆ ಭಾರತದಲ್ಲಿ ಸ್ವಾತಂತ್ರ್ಯ ನಂತರ ಸಂವಿಧಾನದಲ್ಲಿ ನೂರಾರು ಕಾನೂನು ತಿದ್ದುಪಡಿಗಳಾಗಿದೆ. ಮಾಹಿತಿ ತಂತ್ರಜ್ಞಾನ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಭಾರತ ದಾಪುಗಾಲು ಇಡುತ್ತಿದೆ. ಆದರೆ ಇನ್ನು ಕೂಡ ಮ್ಯಾರೇಜ್ ಸರ್ಟಿಫಿಕೇಟ್ ಕಡ್ಡಾಯ ಮಾಡಿಲ್ಲ. ಇನ್ನು ಆನ್‌ಲೈನ್‌ನಲ್ಲಿ ಮ್ಯಾರೇಜ್ ಸರ್ಟಿಫಿಕೇಟ್ ಪಡೆಯುವುದು ಮರೀಚಿಕೆಯಾಗಿತ್ತು. ಇದರಿಂದ ಬಹಳಷ್ಟು ಕಾನೂನು ತೊಡಕುಗಳು ಎದುರಾಗಿತ್ತು. ನಾವು ಮದುವೇ ಆಗಿಲ್ಲ ಎಂದು ಹುಡುಗ ಇಲ್ಲವೇ ಹುಡುಗಿ ವಾದಿಸಿ, ಕುಟುಂಬದವರ ಇಕ್ಕಟ್ಟಿಗೆ ಸಿಲುಕಿಸುವ ಬಹಳಷ್ಟು ಉದಾಹರಣೆಗಳಿವೆ.

ಮೈಸೂರು ನಗರದ 4 ಸಬ್‌ರಿಜಿಸ್ಟ್ರಾರ್ ಕಚೇರಿಯಲ್ಲಿ ದಿನಕ್ಕೆ ಗರಿಷ್ಠ ಏಳೆಂಟು ವಿವಾಹ ನೋಂದಣಿಯಾದರೆ ಹೆಚ್ಚು. ಈ ಮೂಲಕ ತಿಂಗಳಿಗೆ ಸರಾಸರಿ 50 ವಿವಾಹ ನೋಂದಣಿಯಾಗುತ್ತವೆ. ಹೆಸರೇಳಲಿಚ್ಛಿಸದ ಸಬ್‌ರಿಜಿಸ್ಟ್ರಾರ್‌ರೊಬ್ಬರ ಪ್ರಕಾರ ಮೈಸೂರಿನಲ್ಲಿ ನಡೆಯುವ ಮದುವೆಗಳಲ್ಲಿ ಶೇ.1ರಷ್ಟು ವಿವಾಹ ನೋಂದಣಿ ಆಗುವುದಿಲ್ಲ. ಸಬ್‌ರಿಜಿಸ್ಟ್ರಾರ್ ಕಚೇರಿಗಳಿಗೆ ಅಲೆಯಬೇಕಾಗುತ್ತದೆ ಎಂಬ ಕಾರಣದಿಂದ ವಿವಾಹ ನೋಂದಣಿಗೆ ಹಿಂದೇಟು ಹಾಕುತ್ತಿದ್ದಾರೆ. ಇದನ್ನು ಮನಗಂಡಿರುವ ರಾಜ್ಯ ಸರ್ಕಾರ ಈಗ ಆನ್‌ಲೈನ್‌ನಲ್ಲೇ ಮ್ಯಾರೇಜ್ ಸರ್ಟಿಫಿಕೇಟ್ ಪಡೆಯುವ ಸೌಲಭ್ಯ ಆರಂಭಿಸಿದೆ.

ಬೆಂಗಳೂರಿನ ಮಲ್ಲೇಶ್ವರಂ ಸಬ್‌ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಆನ್‌ಲೈನ್‌ನಲ್ಲಿ ಮ್ಯಾರೇಜ್ ಸರ್ಟಿಫಿಕೇಟ್ ಪಡೆಯುವ ಪ್ರಾಯೋಗಿಕ ಯೋಜನೆ ಆರಂಭಿಸಲಾಗಿದೆ. ಇನ್ನು 15 ದಿನದ ಅವಧಿಯಲ್ಲಿ ಎದುರಾಗುವ ಲೋಪದೋಷಗಳನ್ನು ಸರಿಪಡಿಸಿಕೊಂಡು ತಿಂಗಳಾಂತ್ಯಕ್ಕೆ ಮೈಸೂರು ಸೇರಿದಂತೆ ಕರ್ನಾಟಕದ ಎಲ್ಲಾ ಕಡೆ ಈ ಸೌಲಭ್ಯ ವಿಸ್ತರಿಸಲು ತೀರ್ಮಾನ ಮಾಡಲಾಗಿದೆ.

ಆನ್‌ಲೈನ್‌ನಲ್ಲಿ ವಿವಾಹ ನೋಂದಣಿ ಸರ್ಟಿಫಿಕೇಟ್ ಪಡೆಯುವ ಸೌಲಭ್ಯ ಪರಿಚಯಿಸಲು ಫೆಬ್ರವರಿ 1ರಂದು ನಡೆದ ರಾಜ್ಯ ಸಚಿವ ಸಂಪುಟ ಸಭೆ ಹಿಂದೂ ವಿವಾಹ ನೋಂದಣಿ ಕಾಯ್ದೆಗೆ ತಿದ್ದುಪಡಿಯನ್ನು ಅನುಮೋದಿಸಿತ್ತು.

ಹಿಂದೂ ವಿವಾಹ ಕಾಯ್ದೆ ಪ್ರಕಾರ ತಮ್ಮ ವಿವಾಹವನ್ನು ನೋಂದಾಯಿಸಲು ಇನ್ನು ಮುಂದೆ ಸಬ್‌ರಿಜಿಸ್ಟ್ರಾರ್ ಕಚೇರಿಗೆ ಅಲೆಯಬೇಕಿಲ್ಲ. ತಮ್ಮ ಮದುವೆಯ ಆಮಂತ್ರಣ, ವಿಡಿಯೋ ಹಾಗೂ ಆಧಾರ್ ದೃಢೀಕರಣವನ್ನು ಸೂಕ್ತ ಮಾಹಿತಿಯೊಂದಿಗೆ ಮನೆಯಲ್ಲೆ ಕುಳಿತು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿದರೆ ಕೆಲವೇ ದಿನಗಳಲ್ಲಿ ಮ್ಯಾರೇಜ್ ಸರ್ಟಿಫಿಕೇಟ್ ಪಡೆಯಬಹುದು. ಕಾವೇರಿ–2 ತಂತ್ರಾಂಶದಲ್ಲಿ ಹಿಂದೂ ವಿವಾಹ ಪ್ರಮಾಣ ಪತ್ರ ಪಡೆಯಬಹುದು.

ಆದರೆ 1960ರ ವಿಶೇಷ ವಿವಾಹ ಕಾಯ್ದೆ ಕರ್ನಾಟಕ ನಿಯಮಗಳ ಪ್ರಕಾರ ವಿವಾಹವನ್ನು ನೋಂದಣಿ ಮಾಡಿಸಿಕೊಳ್ಳುವವರಿಗೆ ಆನ್‌ಲೈನ್‌ನಲ್ಲಿ ಮ್ಯಾರೇಜ್ ಸರ್ಟಿಫಿಕೇಟ್ ದೊರೆಯುವುದಿಲ್ಲ. ವಧು–ವರರು ಉಪನೋಂದಣಾಧಿಕಾರಿ ಕಚೇರಿಗೆ ಭೇಟಿ ನೀಡಿ ಸಬ್‌ರಿಜಿಸ್ಟ್ರಾರ್ ಮುಂದೆ ಹಾಜರಾಗಿ ನೋಂದಣಿ ಮಾಡಿಸಬೇಕು. ಇದಕ್ಕಾಗಿ ಒಂದು ತಿಂಗಳ ಮುಂಚೆಯೇ ದಾಖಲಾತಿ ಸಮೇತ ಮಾಹಿತಿ ನೀಡಿ ಆಕ್ಷೇಪಣೆಗಳಿಲ್ಲದಿದ್ದರೆ 90 ದಿನದೊಳಗೆ ಸಬ್‌ರಿಜಿಸ್ಟ್ರಾರ್ ಎದುರು ಬಂದು ಮದುವೆ ಆಗಬೇಕು. ಇಂದು ಯಾವುದೇ ಸರ್ಕಾರಿ ಕಚೇರಿಗೆ ಹೋಗಬೇಕೆಂದರೆ ಲಂಚ ಕೊಡಬೇಕೆಂಬ ಅಘೋಷಿತ ನಿಯಮವಿದೆ. ಅದರಲ್ಲೂ ಸಬ್‌ರಿಜಿಸ್ಟ್ರಾರ್ ಕಚೇರಿ ಅಂದರೆ ಲಂಚವಿಲ್ಲದೆ ಕೆಲಸ ಆಗುವುದಿಲ್ಲ ಎಂಬ ಅಪವಾದವಿದೆ. ಆದರೆ ಆನ್‌ಲೈನ್‌ನಲ್ಲಿ ಮ್ಯಾರೇಜ್ ಸರ್ಟಿಫಿಕೇಟ್ ಸೌಲಭ್ಯ ಕಲ್ಪಿಸಿರುವ ಕಾರಣ ಲಂಚ ಕೊಡಬೇಕಿಲ್ಲ, ಜೊತೆಗೆ ಮಧ್ಯವರ್ತಿಗಳ ಹಾವಳಿ ತಪ್ಪುತ್ತದೆ.

ಕಳೆದ ವರ್ಷ ಅಂದರೆ 2023 ರಲ್ಲಿ ಕರ್ನಾಟಕದಲ್ಲಿ 20,536 ದಂಪತಿ ನೋಂದಣಿ ಮಾಡಿಸಿದ್ದರು. ಈಗ ಆನ್‌ಲೈನ್‌ನಲ್ಲೇ ಮ್ಯಾರೇಜ್ ಸರ್ಟಿಫಿಕೇಟ್ ಪಡೆಯುವ ಸೌಲಭ್ಯ ಕಲ್ಪಿಸುತ್ತಿರುವ ಕಾರಣ ವಿವಾಹ ನೋಂದಣಿ ಸಂಖ್ಯೆ ಹೆಚ್ಚಾಗುತ್ತಿದೆ. ಇದರಿಂದ ಮದುವೆಯಾಗುವ ಹುಡುಗ ಅಥವಾ ಹುಡುಗಿ ಮೋಸ ಹೋಗುವುದು ತಪ್ಪುತ್ತದೆ. ಒಟ್ಟಾರೆ ವ್ಯಾಜ್ಯ ಅಥವಾ ಕಾನೂನಾತ್ಮಕ ಸಮಸ್ಯೆ ಎದುರಾಗುವುದಿಲ್ಲ. ಈ ಕಾರಣದಿಂದ ಕಾವೇರಿ ತಂತ್ರಾಂಶದಲ್ಲಿ ಆನ್‌ಲೈನ್‌ನಲ್ಲಿ ವಿವಾಹ ನೋಂದಣಿ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.

ವಿವಾಹ ನೋಂದಣಿಗೆ ಸಾಫ್ಟ್‌ವೇರ್ ಸಿದ್ಧವಾಗುತ್ತಿದೆ

> "ಆನ್‌ಲೈನ್ ಮೂಲಕ ಮ್ಯಾರೇಜ್ ಸರ್ಟಿಫಿಕೇಟ್ ಪಡೆಯುವ ಸೌಲಭ್ಯವನ್ನು ಕಾವೇರಿ ತಂತ್ರಾಂಶದಿಂದ ಪಡೆಯಬಹುದು. ಇದಕ್ಕಾಗಿ ಹೊಸ ಸಾಫ್ಟ್‌ವೇರ್ ಸಿದ್ಧಪಡಿಸಲಾಗುತ್ತಿದೆ. ಆನ್‌ಲೈನ್‌ನಲ್ಲಿ ಮ್ಯಾರೇಜ್ ಸರ್ಟಿಫಿಕೇಟ್ ಪಡೆಯುವ ಸೌಲಭ್ಯ ಕಲ್ಪಿಸುವ ಸಂಬಂಧ ಹಿರಿಯ ಅಧಿಕಾರಿಗಳು ನಮ್ಮೊಡನೆ ಸಭೆ ನಡೆಸುತ್ತಿದ್ದಾರೆ. ಯಾವ ದಿನಾಂಕದಿಂದ ಜಾರಿ ಮಾಡಲಾಗುತ್ತದೆ ಎಂಬುದು ಇನ್ನು ಘೋಷಣೆ ಮಾಡಿಲ್ಲ. ಆನ್‌ಲೈನ್‌ನಲ್ಲಿ ವಿವಾಹ ನೋಂದಣಿ ಸೌಲಭ್ಯ ಕಲ್ಪಿಸಿದರೆ ವಿವಾಹ ನೋಂದಣಿ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ. ಸರ್ಕಾರದ ಸೌಲಭ್ಯ ಪಡೆಯಲು ಕೆಲವರು ನೋಂದಣಿ ಮಾಡಿಸುತ್ತಿದ್ದರು. ಆದರೆ ಈಗ ಬಹಳಷ್ಟು ಜನರು ವಿವಾಹ ನೋಂದಣಿ ಮಾಡಿಸುತ್ತಾರೆ. ಈ ಮೂಲಕ ಮದುವೆ ಆದ ನಂತರ ಕಾನೂನಾತ್ಮಕವಾಗಿ ವಿವಾಹ ನೋಂದಣಿ ಮಾಡಿಸಬೇಕು ಎಂಬ ಅರಿವು ಈಗ ಜನರಲ್ಲಿ ಹೆಚ್ಚಾಗಲಿದೆ.
> –ವಿಜಯಲಕ್ಷ್ಮಿ ಇನಂದಾರ್, ಜಿಲ್ಲಾ ನೋಂದಣಾಧಿಕಾರಿ

ನಗರ ಪ್ರದೇಶದ ಮತದಾನ ಹೆಚ್ಚಳಕ್ಕೆ ಜಾಗೃತಿ ಮೂಡಿಸಿ

ರಾಜ್ಯ ಚುನಾವಣಾ ಸ್ವೀಪ್ ನೋಡಲ್ ಅಧಿಕಾರಿ ವಸ್ತ್ರದ್



ವಸ್ತ್ರದ್

ಮೈಸೂರು,ಫೆ.18–ಕಳೆದ ಚುನಾವಣೆಯಲ್ಲಿ ಮೈಸೂರು ನಗರ ವ್ಯಾಪ್ತಿಯ ಚಾಮರಾಜ, ನರಸಿಂಹರಾಜ ಹಾಗೂ ಕೃಷ್ಣರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೆಲ ಮತಗಟ್ಟೆಗಳಲ್ಲಿ ಅತ್ಯಂತ ಕಡಿಮೆ ಪ್ರಮಾಣದ ಮತದಾನವಾಗಿದ್ದು, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮತದಾನ ಪ್ರಮಾಣ ಹೆಚ್ಚಳಕ್ಕೆ ಅಧಿಕಾರಿಗಳು ಕಾರ್ಯತಂತ್ರ ರೂಪಿಸಿಕೊಳ್ಳಬೇಕೆಂದು ರಾಜ್ಯ ಚುನಾವಣಾ ಸ್ವೀಪ್ ನೋಡಲ್ ಅಧಿಕಾರಿ ವಸ್ತ್ರದ್ ಹೇಳಿದರು.

ಜಿಪಂ ದೇವರಾಜ ಅರಸು ಸಭಾಂಗಣದಲ್ಲಿ ನಡೆದ ಚುನಾವಣಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ನಗರದ ಕೆಲ ಮತಗಟ್ಟೆಗಳಲ್ಲಿ ಅತ್ಯಂತ ಕಡಿಮೆ ಪ್ರಮಾಣದ ಮತದಾನವಾಗಿದ್ದು ಆ ಭಾಗಗಳ ಕೊರತೆಗಳನ್ನು ಗಮನಿಸುವುದರೊಂದಿಗೆ ಸ್ವೀಪ್ ಚಟುವಟಿಕೆಗಳನ್ನು ಹೆಚ್ಚಾಗಿ ಕೈಗೊಳ್ಳುವ ಮೂಲಕ ಮತದಾನ ಪ್ರಮಾಣ ವೃದ್ಧಿಗೆ ಅಧಿಕಾರಿಗಳು ಮುಂದಾಗಬೇಕು ಹಾಗೂ ಸಂಬಂಧಿಸಿದ ಅಧಿಕಾರಿಗಳು ಹಿಂದಿನ ಚುನಾವಣೆಯಲ್ಲಿ ಕಡಿಮೆ ಪ್ರಮಾಣದ ಮತದಾನವಾಗಿರುವ ಸ್ಥಳಗಳಿಗೆ ತೆರಳಿ ಸಮಗ್ರವಾಗಿ ಪರಿಶೀಲಿಸಿ 10 ದಿನದೊಳಗಾಗಿ ವರದಿ ನೀಡಬೇಕು ಎಂದು ತಿಳಿಸಿದರು.

ಚುನಾವಣಾ ಆಯೋಗದ ಟೋಲ್ ಫ್ರೀ ನಂಬರ್ 1950 ಅನ್ನು ಎಲ್ಲೆಡೆ ಪ್ರಚಾರ ಮಾಡುವ ಮೂಲಕ ಮತದಾರರ ಯಾವುದೇ ತೊಂದರೆಗೆ ಅನುಕೂಲವಾಗುವಂತೆ ಪ್ರಚುರಪಡಿಸಿ ಹಾಗೂ ವೋಟರ್ ಹೆಲ್ಪ್‌ಲೈನ್ ಮಾಹಿತಿಯನ್ನು ಹೆಚ್ಚು ಪ್ರಚುರಪಡಿಸಿ. ಅಂಚಿನಲ್ಲಿರುವ (ಮಾರ್ಜಿನಲ್) ಮತದಾರರಾದ ವಿಕಲಚೇತನರು, ಲೈಂಗಿಕ ಕಾರ್ಯಕರ್ತರು, ಕುಷ್ಠ ರೋಗದಿಂದ ಗುಣಮುಖರಾದವರು, ಲಿಂಗ ಅಲ್ಪಸಂಖ್ಯಾತರು ಮುಂತಾದವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಮತದಾರರ ಪಟ್ಟಿಗೆ ನೋಂದಾವಣೆಗೊಳ್ಳುವಂತೆ ನೋಡಿಕೊಳ್ಳಿ ಎಂದರು.

18 ವರ್ಷ ಪೂರೈಸಿರುವವರು ಮತದಾರರ ಪಟ್ಟಿಗೆ ತಮ್ಮ ಹೆಸರು ಸೇರ್ಪಡೆಗೊಳಿಸುವುದು ಹಾಗೂ ಪಟ್ಟಿಯಲ್ಲಿ ಹೆಸರಿರುವವರು ಮತದಾನ ಮಾಡುವಂತೆ ನೋಡಿಕೊಳ್ಳುವುದು ಮತ್ತು 17 ವರ್ಷ ಪೂರೈಸಿರುವವರು ವರ್ಷದಲ್ಲಿ 4 ಬಾರಿ ಮತದಾರರ ಪಟ್ಟಿಗೆ ಸೇರಲು ಅವಕಾಶವಿದ್ದು ಮಹಿಳಾ ಮತದಾರರೂ ಹೆಚ್ಚಿನ ಪ್ರಮಾಣದಲ್ಲಿ ಮತದಾರರ ಪಟ್ಟಿಗೆ ನೋಂದಾಯಿಸಿಕೊಳ್ಳುವಂತೆ ನೋಡಿಕೊಳ್ಳಬೇಕೆಂದರು. ವಿ.ಹೆಚ್.ಎ ಆಪ್ ಬಳಸುವುದರಿಂದ ಅಭ್ಯರ್ಥಿಗಳ ಮಾಹಿತಿ, ಇವಿಎಂ ಬಗೆಗಿನ ಮಾಹಿತಿ ಹಾಗೂ ಆಯೋಗ ಹೇಗೆ ಕೆಲಸ ಮಾಡುತ್ತದೆ ಎಂಬ ಬಗೆಗೆ ಮಾಹಿತಿ ತಿಳಿದುಕೊಳ್ಳಬಹುದಾಗಿದೆ, ಆಯೋಗ ಸಿದ್ಧಪಡಿಸಿರುವ ಹಿಂದಿ ಅವತರಣಿಕೆಯ 'ಮೆ ಭಾರತ್ ಹೂ' ಹಾಗೂ ಕನ್ನಡದ 'ನಾ ಭಾರತ, ಭಾರತ ನನ್ನಲ್ಲಿ, ನಾ ಜಾಗೃತ, ಜಾಗೃತಿ ನನ್ನಲ್ಲಿ' ಎಂಬ ಹಾಡನ್ನು ಎಲ್ಲೆಡೆ ಪ್ರಚುರಪಡಿಸಿ ಮತದಾನದಲ್ಲಿ ಎಲ್ಲರೂ ಭಾಗವಹಿಸುವಂತೆ ನೋಡಿಕೊಳ್ಳಿ ಎಂದರು.

ಸಭೆಯಲ್ಲಿ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಶರೀಫ್, ಜಿ.ಪಂ. ಉಪಕಾರ್ಯದರ್ಶಿ ಕೃಷ್ಣಂರಾಜು, ಮಾಸ್ಟರ್ ಟ್ರೈನರ್ ಶಾಂತ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಸುರೇಶ್, ಚುನಾವಣಾ ಶಿರಸ್ತೆದಾರ್ ಸುರೇಶ್ ಇದ್ದರು.

ಬೇಸಿಗೆಯಲ್ಲಿ ಕುಡಿಯುವ ನೀರು ಸಮಸ್ಯೆ ಆಗದಂತೆ ಕ್ರಮ ವಹಿಸಿ

ಜಿಪಂ ಸಭೆಯಲ್ಲಿ ಸಿಇಓ ಕೆ.ಎಂ.ಗಾಯತ್ರಿ ಅಧಿಕಾರಿಗಳಿಗೆ ಸೂಚನೆ



ಮೈಸೂರು ಜಿಪಂ ಸಿಇಓ ಕೆ.ಎಂ.ಗಾಯಿತ್ರಿ ಅಧ್ಯಕ್ಷತೆಯಲ್ಲಿ ಇಲಾಖೆ ಅಧಿಕಾರಿಗಳ ಸಭೆ ನಡೆಯಿತು.

ಮೈಸೂರು, ಫೆ.18–ಅಧಿಕಾರಿಗಳು ಸಮಸ್ಯೆ ಇರುವ ಸ್ಥಳಕ್ಕೆ ಖುದ್ದು ಭೇಟಿ ನೀಡಿ ಅಲ್ಲಿರುವ ಸಮಸ್ಯೆಗಳನ್ನು ಬಗೆಹರಿಸಬೇಕು ಹಾಗೂ ಮುಂಬರುವ ಬೇಸಿಗೆಯಲ್ಲಿ ಜನರಿಗೆ ಕುಡಿಯುವ ನೀರು ಸಮಸ್ಯೆ ಆಗದಂತೆ ಅಗತ್ಯ ಕ್ರಮವಹಿಸಬೇಕು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಂ. ಗಾಯಿತ್ರಿ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಪಂಚಾಯತ್ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ನಡೆದ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಧಿಕಾರಿಗಳು ಜನರ ಕಷ್ಟವನ್ನು ಆಲಿಸಿ ಅವರ ಸಮಸ್ಯೆಗಳಿಗೆ ಮಾರ್ಗೋಪಾಯಗಳನ್ನು ತಿಳಿಸಿ ಅವರ ಸಮಸ್ಯೆಗಳನ್ನು ಬಗೆಹರಿಸಲು ಮುಂದಾಗಬೇಕು. ಪ್ರತಿಯೊಬ್ಬರಿಗೂ ನೀರು ಅತ್ಯಗತ್ಯ. ಮುಂದೆ ಬರುವ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಮೊದಲು ಗ್ರಾಮಗಳಲ್ಲಿ ಇರುವ ಬಾವಿ, ಕೆರೆ, ಬೋರ್‌ವೆಲ್‌ಗಳಲ್ಲಿ ನೀರಿನ ಮಟ್ಟವನ್ನು ಪರೀಕ್ಷಿಸಿ ಕಡಿಮೆಯಾಗಿರುವುದು ಕಂಡುಬಂದರೆ ನೀರನ್ನು ತುಂಬಿಸಲು ಅಗತ್ಯ ಕ್ರಣ ವಹಿಸಬೇಕು ಎಂದರು.

ನೀರಿನ ಸಮಸ್ಯೆ ಇರುವ ಹಾಡಿಯಲ್ಲಿರವ ಜನರಿಗೆ ಟ್ಯಾಂಕರ್ ಮೂಲಕ ನೀರನ್ನು ಸರಬರಾಜು ಮಾಡಲು ಅಗತ್ಯ ಕ್ರಮವಹಿಸಬೇಕು. ಹಾಡಿಯಲ್ಲಿ ಸ್ಮಶಾನ, ಗೋಮಾಳ ಇತ್ಯಾದಿ ಕುಂದು–ಕೊರತೆಗಳು ಕಂಡುಬಂದರೆ ತಕ್ಷಣವೇ ಅಧಿಕಾರಿಗಳು ಅಗತ್ಯ ಕ್ರಮ ವಹಿಸಬೇಕು ಎಂದು ತಿಳಿಸಿದರು.

ಇದು ಬೇಸಿಗೆ ಸಮಯವಾದ್ದರಿಂದ ಡೀಹೈಡ್ರೇಟ್, ಸಾಂಕ್ರಾಮಿಕ ರೋಗಗಳು ಹೆಚ್ಚಾಗುವ ಸಾಧ್ಯತೆಗಳಿರುತ್ತವೆ. ಹಾಗಾಗಿ ತಮ್ಮ ತಮ್ಮ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಬರುವ ಗ್ರಾಮಗಳಲ್ಲಿನ ಜನರಿಗೆ ವೈದ್ಯಕೀಯ ಇಲಾಖೆಯಿಂದ ಬಂದ ಮಾಹಿತಿಯನ್ನು ತಲುಪಿಸಿ, ಅವರಿಗೆ ಸರಿಯಾದ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸಬೇಕು. ಚರಂಡಿಗಳು, ರಸ್ತೆ ಬದಿಗಳು, ನೀರಿನ ಟ್ಯಾಂಕರ್‌ಗಳನ್ನು, ಬೋರ್‌ವೆಲ್‌ಗಳನ್ನು ಸ್ವಚ್ಛಗೊಳಿಸಿ ಗ್ರಾಮವನ್ನು ಶುಚಿಯಾಗಿ ಇಟ್ಟುಕೊಳ್ಳಬೇಕು. ಇದನ್ನು ಪ್ರತಿಯೊಬ್ಬ ಅಧಿಕಾರಿಯು ಒಂದು ಅಭಿಯಾನದಂತೆ ಮಾಡಿ ಗ್ರಾಮ–ಗ್ರಾಮಗಳಿಗೂ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು ಎಂದರು. ಇಲಾಖೆ ಅಧಿಕಾರಿಗಳು ತಾವು ಮಾಡುವ ಪ್ರತಿಯೊಂದು ಕೆಲಸದ ದಾಖಲೆಗಳನ್ನು ಪ್ರತ್ಯೇಕ ಫೈಲ್ ಮಾಡಬೇಕು. ಇದರಿಂದ ಎಲ್ಲಾ ಕೆಲಸಗಳ ಒಂದು ಚಿತ್ರಣ ಹುಡುಕುವುದು ಸುಲಭವಾಗುತ್ತದೆ. ಮುಖ್ಯಮಂತ್ರಿಗಳ ತವರು ಜಿಲ್ಲೆಯಾದ್ದರಿಂದ ಇಲ್ಲಿ ಯಾವುದೇ ರೀತಿಯ ಕೆಲಸಗಳು ಬಾಕಿ ಉಳಿಯದಂತೆ ನೋಡಿಕೊಳ್ಳಬೇಕುಎಂದರು.

ಜಿಪಂ ಉಪ ಕಾರ್ಯದರ್ಶಿ(ಅಭಿವೃದ್ಧಿ) ಕೃಷ್ಣ ರಾಜು ಮಾತನಾಡಿ, ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ ಮನೆ ಮನೆಗೂ ಶೌಚಾಲಯಗಳನ್ನು ನಿರ್ಮಿಸಬೇಕಾಗಿದೆ. ವಸತಿ ಯೋಜನೆಯಡಿಯಲ್ಲಿ ಅರ್ಜಿಗಳನ್ನು ಸ್ವೀಕರಿಸಿ ಜನರಿಗೆ ಯೋಜನೆಗಳ ಬಗ್ಗೆ ಮಾಹಿತಿ ನೀಡಿ ಅವರಿಂದ ಸರಿಯಾದ ದಾಖಲೆಗಳನ್ನು ಪಡೆಯಬೇಕು. ಇದರಿಂದ ಸ್ವೀಕರಿಸಿದ ಅರ್ಜಿಗಳ ಸಂಖ್ಯೆ, ತಿರಸ್ಕರಿಸಿದ ಅರ್ಜಿಗಳ ಸಂಖ್ಯೆಯಲ್ಲಿ ಅಂತರ ಕಡಿಮೆಯಾಗಬೇಕು. ಅವಶ್ಯಕತೆ ಇರುವ ಪ್ರತಿಯೊಬ್ಬ ವ್ಯಕ್ತಿಗೂ ಸೌಲಭ್ಯ ದೊರಕುವಂತೆ ಮಾಡಬೇಕು ಎಂದರು. ಜಿಲ್ಲೆಯ ಪಿಡಿಓಗಳು, ಅಭಿವೃದ್ಧಿ ಅಧಿಕಾರಿಗಳು ಸಭೆಯಲ್ಲಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.2.2024 ಸೋಮವಾರ, ಮಳೆ ನಕ್ಷತ್ರ: ಭರಣಿ 6.2.2024 ರಿಂದ 19.02.2024 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಮೃಗಶಿರಾ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ವಿಭಾಗೀಯ ಪತ್ರಾಗಾರ ಕಚೇರಿ, ಮೈಸೂರು, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು:** ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ 50 ಹಾಗೂ ಕರ್ನಾಟಕ ನಾಮಕರಣ ಮತ್ತು ಕನ್ನಡ ಅಸ್ಮಿತೆ ವಿಚಾರ ಸಂಕಿರಣ ಮತ್ತು ಚಾರಿತ್ರಿಕ ದಾಖಲೆಗಳ ಹಾಗೂ ಛಾಯಾಚಿತ್ರ ಪ್ರದರ್ಶನ, ಬೆಳಗ್ಗೆ 10 ರಿಂದ ವಿವಿಧ ಗೋಷ್ಠಿಗಳು, ಮಧ್ಯಾಹ್ನ 3ರಿಂದ ಸಮಾರೋಪ ಸಮಾರಂಭ, ಸ್ಥಳ: ಕಾಲೇಜು ಆವರಣ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಶೇಷಾದ್ರಿ ಅಯ್ಯರ್ ರಸ್ತೆ.

■ **ಮೈಸೂರು ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಜಿಲ್ಲೆ:** ಛತ್ರಪತಿ ಶ್ರೀ ಶಿವಾಜಿ ಮಹಾರಾಜರ ಜಯಂತಿ–2024, ಉಪಸ್ಥಿತಿ: ಮುಖ್ಯಮಂತ್ರಿ ಸಿದ್ದರಾಮಯ್ಯ, ಉದ್ಘಾಟನೆ: ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಗೌರವ ಉಪಸ್ಥಿತಿ: ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷ ಅನಿಲ್ ಕುಮಾರ್, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ಸಂಸದರಾದ ಪ್ರತಾಪ್‌ಸಿಂಹ, ವಿ.ಶ್ರೀನಿವಾಸಪ್ರಸಾದ್, ಶ್ರೀಮತಿ ಸುಮಲತಾ ಅಂಬರೀಶ್, ಸ್ಥಳ: ಕರ್ನಾಟಕ ಕಲಾಮಂದಿರ, ಬೆಳಗ್ಗೆ 10.30ಕ್ಕೆ.

■ **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ, ಸುಮಧ್ವ–ವಿಜಯ ಎಕ್ಸ್‌ಪ್ರೆಸ್:** ಮಧ್ವ–ಪುರಂದರ ನಮನ, ಗಾನಸಿರಿ, ವೇದಾಂತ ಲಹರಿ–11 ದಿವ್ಯ ಅಧ್ಯಕ್ಷತೆ: ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ ಶ್ರೀ ಮದುತ್ತರಾದಿ ಮಠಾಧೀಶರಾದ ಶ್ರೀ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀ ಪಾದಂಗಳವರು, ಸುಮಧ್ವವಿಜಯ 3 ಮತ್ತು 4ನೇ ಸರ್ಗಗಳ ವಿಶ್ಲೇಷಣೆ ಹಾಗೂ ಗಾಯನ, ಸ್ಥಳ: ಶಾರದಾವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5.30ರಿಂದ.

■ **ಕರ್ನಾಟಕ ಸರ್ಕಾರ, ಧಾರ್ಮಿಕ ದತ್ತಿ ಇಲಾಖೆ:** ಮೈಸೂರು ಅರಮನೆ ಕೋಟೆ ಆವರಣದಲ್ಲಿರುವ ಶ್ರೀ ತ್ರಿಣೇಶ್ವರಸವಾಮಿಯವರ ಬ್ರಹ್ಮೋತ್ಸವ, ಹಗಲು–ರಾತ್ರಿ ಪೂಜೆ, ಬಲಿಪ್ರಧಾನ ಉತ್ಸವ, ಸ್ಥಳ: ದೇವಸ್ಥಾನ, ಅರಮನೆ ಆವರಣ, ಬೆಳಗ್ಗೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ದಯಾನಂದ ಕಿನ್ನಾಳ್, 6.15 ಗೀತಾರಾಧನ, 6.35 ಹಾಗೂ 6.10 "ಅಂಚೆ–ಅಂಕನ" ಆಕಾಶವಾಣಿ ಅಂಕಣ: ಪ್ರಾಯೋಜಿತ ಬಾನುಲಿ ಸರಣಿ, 6.40 ಪದಸಂಸ್ಕೃತಿ: ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು: ಬಿ.ಕೆ.ಸುಮಿತ್ರಾ, 9.05 ನೆನಪಿನಂಗಳ: ಕನ್ನಡದ ಖ್ಯಾತ ವಿದ್ವಾಂಸರು, ಗೀತ ನಾಟಕಕಾರರಾದ ಪು.ತಿ.ನರಸಿಂಹಾಚಾರ್ ಅವರೊಂದಿಗೆ ಸುಜನಾ ಅವರು ನಡೆಸಿದ್ದ ಸಂವಾದ, 10.00 ರಾವ್ ಆರ್.ಶರತ್–ಹಾಡುಗಾರಿಕೆ. **ಮಧ್ಯಾಹ್ನ:** 12.30 ದೇವರನಾಮ: ಸಂಗೀತಾ ಕಟ್ಟಿ, ವೃಂದಗಾನ, 12.45 ನಮ್ಮ ಆರೋಗ್ಯ: ಸ್ಟಿರಾಯ್ಡ್ ಬಳಕೆ ಮತ್ತು ದುರ್ಬಳಕೆ ಕುರಿತು ಡಾ.ಜಯದೇವ ಬೆಟ್‌ಕೆರೂರ್ ಅವರೊಂದಿಗೆ ಮಾತುಕತೆ, 1.20 ಭಾವಗೀತೆಗಳು–ಎಸ್.ಮಂಜುಳಾ, 2.35 ರಾಮಾಯಣ ರಸ ಪ್ರಸಂಗಗಳು. ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಕಾವ್ಯದಿಂದ ಆಯ್ದ ಭಾಗಗಳ ವಾಚನಾಭಿನಯ. ಪ್ರಸ್ತುತಿ: ಶ್ರೀ ಗಜಾನನ ಯುವಕ ಮಂಡಲ, 3.00 ಮೈಸೂರು ಎಂ.ನಾಗರಾಜ್–ವಯೊಲಿನ್ ವಾದನ. **ಸಂಜೆ:** 4.00 ಮಹಿಳಾರಂಗ: ಡಾಕ್ಟರ್ ಸಮಯ–ಮಕ್ಕಳಿಗೆ ನೀಡಬೇಕಾದ ಮುಖ್ಯ ಲಸಿಕೆಗಳು, ಭಾಗವಹಿಸುವ ವೈದ್ಯರು–ಡಾ.ಹೆಚ್.ವಿ.ಶುಭಾ, ಪ್ರಸ್ತುತಿ–ಕೆ.ಬಿ.ಮೀನಾ, 4.4 **ಹಿಂದಿ ಪಾಠ:** ಡಾ.ಜಯಂತಿ ಪ್ರಸಾದ್ ನೌಟಿಯಾಲ್, 6 "ಅಂಚೆ–ಅಂಕನ ಆಕಾಶವಾಣಿ ಅಂಕಣ": ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ: "ಹಣ್ಣು–ಹೊನ್ನು"–ಜೇನು ಸಾಕಾಣಿಕೆ ಕುರಿತ ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಜಯಶಂಕರ್. ಪ್ರಸ್ತುತಿ–ಎನ್.ಕೇಶವಮೂರ್ತಿ. **ರಾತ್ರಿ:** 9.30 ಮತ್ತೆ ಕೇಳಿ "ಹಾದಿಯಲ್ಲಿ ಕಂಡ ಮುಖ" ಪ್ರಸ್ತುತಿ–ಅಬ್ದುಲ್ ರಶೀದ್, 10.30 ಸವಿನೆನಪು.

ಮೂಲ ಅಭಿಜಾತ ಕನ್ನಡ ಉಳಿಸಬೇಕಾಗಿದೆ

ಸಂಸ್ಕೃತ ವಿದ್ವಾಂಸ ಎಚ್.ವಿ.ನಾಗರಾಜರಾವ್ ಅಭಿಮತ



ಮೈಸೂರಿನ ಹೆರಿಟೇಜ್ ಹೌಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ 'ಕರ್ನಾಟ' ಅಭಿಜಾತ ಕನ್ನಡ ಕೇಂದ್ರವನ್ನು ಉದ್ಘಾಟಿಸಿ, ಸಂಸ್ಕೃತ ವಿದ್ವಾಂಸ ಎಚ್.ವಿ.ನಾಗರಾಜ್ ರಾವ್ ಮಾತನಾಡಿದರು.

ಮೈಸೂರು,ಫೆ.18(ಜಿಎ)– ಇತಿಹಾಸದಲ್ಲಿ ಅತ್ಯಂತ ಶ್ರೇಷ್ಠವಾಗಿ ಬೆಳೆದ ಅಭಿಜಾತ ಕನ್ನಡ ಸಾಹಿತ್ಯ ಇಂದು ಕೆಲವರಿಗೆ ಮಾತ್ರ ತಿಳಿದಿದೆ. ಸಾಮಾನ್ಯ ಜನರಿಗೆ ಅದರ ಪರಿಚಯವಿಲ್ಲ. ಕನ್ನಡ ಭಾಷೆ ಬೆಳವಣಿಗೆ ಹೆಚ್ಚಿದ್ದು, ಸಾಹಿತ್ಯ ಮೌಲಿಕವಾಗಿದೆ. ಈ ಹಿನ್ನೆಲೆಯಲ್ಲಿ ಮೂಲ ಅಭಿಜಾತ ಕನ್ನಡ ಉಳಿಸುವ ಕೆಲಸವಾಗಬೇಕಿದೆ ಎಂದು ಸಂಸ್ಕೃತ ವಿದ್ವಾಂಸ ಎಚ್.ವಿ.ನಾಗರಾಜ್ ರಾವ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಹೆರಿಟೇಜ್ ಹೌಸ್‌ನಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ 'ಕರ್ನಾಟ' ಅಭಿಜಾತ ಕನ್ನಡ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೂಲ ಅಭಿಜಾತ ಕನ್ನಡವನ್ನು ಉಳಿಸುವ ಪ್ರಯತ್ನ ಮಾಡಬೇಕು. ಶಾಸ್ತ್ರೀಯ ಕನ್ನಡ ಪರಂಪರೆ, ರಕ್ಷಿಸುವ, ಪುನರುಜ್ಜೀವನಗೊಳಿಸುವ ಮತ್ತು ಉತ್ತೇಜಿಸುವ ಮಹತ್ವಾಕಾಂಕ್ಷೆ ಕರ್ನಾಟ ಆರಂಭವಾಗಿದೆ ಎಂದರು.

ಕರ್ನಾಟ ಹೆಸರಿನಲ್ಲಿ ನಾಡು ನುಡಿ ಎರಡು ಇರುವುದರಿಂದ ಈ ಹೆಸರು ಇಡಲಾಗಿದೆ ಇದು ನಿರುತ್ತ, ಚಲನಶೀಲವಾದ ಕೇಂದ್ರವಾಗಲಿ. ಜಗತ್ತಿಗೆ ಪ್ರಾಚೀನ ಕನ್ನಡ ಸಾಹಿತ್ಯ ಮೊದಲು. ಇತರ ಯಾವುದೇ ಸಾಹಿತ್ಯಕ್ಕಿಂತ ಕಡಿಮೆ ಇಲ್ಲ ಎಂದು ತೋರಿಸುವ ಉದ್ದೇಶದ ಸಂಕಲ್ಪದೊಂದಿಗೆ ಶ್ರದ್ಧೆಯಿಂದ ಸಂಸ್ಥೆ ಪ್ರಾರಂಭಿಸಿರುವುದು ಶ್ಲಾಘನೀಯ ಎಂದು ತಿಳಿಸಿದರು.

ಇಂದಿನ ದಿನಮಾನದಲ್ಲಿ ಪಂಪ, ರನ್ನನ ಕಾಲದ ಮಾತುಗಳನ್ನು ವ್ಯಾಖ್ಯಾನಿಸಬಲ್ಲ ವಿದ್ವಾಂಸರು ಕಡಿಮೆಯಾಗುತ್ತಿರುವುದು ವಿಷಾದಕರ ಎಂದು ಬೇಸರ ವ್ಯಕ್ತಪಡಿಸಿ, 1100 ವರ್ಷದ ಹಿಂದೆ ನೃಪತುಂಗ ಆಶ್ರಯದಲ್ಲಿ ಕವಿ, ಸಾಹಿತಿ, ವಾಗ್ಮಿಗಳು ಮಂಡಿಸಿದ ಸಭೆಯಲ್ಲಿ ನಿಂತಿದ್ದರೆ ಉಂಟಾಗುತ್ತಿದ್ದ ಸಂತೋಷ ಇಂದು ಉಂಟಾಗಿದೆ. ಕನ್ನಡದ ಪ್ರೀತಿಯ ಕಾರ್ಯಕ್ರಮ ಇದಾಗಿದೆ' ಎಂದರು.

ವಿದ್ವಾಂಸ ಆರ್.ವಿ.ಎಸ್ ಸುಂದರಂ ಮಾತನಾಡಿ, ಕನ್ನಡ ಸಾಹಿತ್ಯ ಪರಂಪರೆ, ಸಂಸ್ಕೃತಿ ಬಹಳ ಶ್ರೀಮಂತವಾಗಿದೆ. ಕನ್ನಡದಲ್ಲಿ ಅನೇಕ ಪ್ರಾಚೀನ ಗ್ರಂಥಗಳು ರಚಿತವಾಗಿದೆ. ಏನು ಬೇಕಾದರು ವ್ಯಕ್ತ ಮಾಡಬಹುದಾದ ಭಾಷೆ ಕನ್ನಡ. ಇದು ಪ್ರಪಂಚ ಭಾಷೆ ಅನಿಸಿಕೊಳ್ಳಬೇಕು. ಆ ರೀತಿ ಗುರುತಿಸುವ ಹಾಗೆ ಮಾಡುವುದು ಎಲ್ಲರ ಕರ್ತವ್ಯವಾಗಿದೆ. ಇದಕ್ಕೆ ಪೂರಕವಾದ ಸಂಸ್ಥೆ ನಮ್ಮದಾಗಿದೆ ಎಂದರು.

ಶ್ರೇಷ್ಠ ಸಾಹಿತ್ಯ ರಚನೆಗಳು ಕನ್ನಡವನ್ನು ಜಗತ್ತಿನ ಕೆಲವು ಮಹತ್ವದ ಭಾಷೆಗಳ ಸಾಲಿನಲ್ಲಿ ನಿಲ್ಲಿಸಿದೆ. ಕನ್ನಡ ಶಾಸನಗಳು, ಅಭಿಜಾತ ಸಾಹಿತ್ಯ ರಚನೆಗಳ ಬಗ್ಗೆ ವಿಪುಲವಾದ ಸಂಶೋಧನೆ ಸಾಧ್ಯತೆಗಳಿದ್ದು, ಈ ಕಾರ್ಯ ತುರ್ತಾಗಿ ನಡೆಯಬೇಕಿದೆ ಎಂದರು. ಕಾರ್ಯಕ್ರಮದಲ್ಲಿ ಸಂಸ್ಕೃತ ಪಂಡಿತ ಪಿಯರ್ ಸಿಲ್ವನ್ ಫಿಲಿಯೋಜಾ, ಇತಿಹಾಸ ತಜ್ಞ ವಸುಂಧರಾ ಕವಲಿ ಫಿಲಿಯೋಜಾ, ಗಿಲ್ ಬೆನ್, ಮನೀಶ್ ಮಹೇಶ್ವರಿ ಉಪಸ್ಥಿತರಿದ್ದರು.

ಇಂಡಿಯಾ ಮೈತ್ರಿಕೂಟದಲ್ಲಿ ಬಿಎಸ್‌ಪಿಗೆ ಬಾಗಿಲು ತೆರೆದಿದೆ

ಯುಪಿ ಕಾಂಗ್ರೆಸ್ ಉಸ್ತುವಾರಿ ಅವಿನಾಶ್ ಪಾಂಡೆ



ಲಖನೌ: ಬಿಎಸ್‌ಪಿಗೆ ಇಂಡಿಯಾ ಮೈತ್ರಿಕೂಟದ ಬಾಗಿಲು ತೆರೆದಿದೆ. ಮುಂಬ ರುವ ಲೋಕಸಭೆ ಚುನಾವಣೆ ಯಲ್ಲಿ ಬಿಜೆಪಿ ವಿರುದ್ಧದ ಹೋರಾಟದಲ್ಲಿ ಪಾಲ್ಗೊಳ್ಳಬೇಕೇ ಅಥವಾ ಬೇಡವೇ ಎಂಬುದನ್ನು ಮಾಯಾವತಿ ನಿರ್ಧರಿಸಬೇಕು ಎಂದು ಉತ್ತರಪ್ರದೇಶದ ಕಾಂಗ್ರೆಸ್ ಉಸ್ತು ವಾರಿ ಅವಿನಾಶ್ ಪಾಂಡೆ ಹೇಳಿದ್ದಾರೆ. ಬಿಎಸ್‌ಪಿ ತಮ್ಮ ಬಣಕ್ಕೆ ಸೇರಬೇಕೆಂದು ಭಾರತೀಯ ರಾಷ್ಟ್ರೀಯ ಅಭಿವೃದ್ಧಿ ಅಂತ ರ್ಗತ ಮೈತ್ರಿಕೂಟ ಬಯಸಿದೆ. ಆದರೆ ಲೋಕಸಭೆ ಚುನಾವಣೆಯಲ್ಲಿ ಏಕಾಂಗಿ ಯಾಗಿ ಸ್ಪರ್ಧಿಸುವುದಾಗಿ ಮಾಯಾವತಿ ಈಗಾಗಲೇ ಘೋಷಿಸಿದ್ದಾರೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹೇಳಿದರು.

ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಎದುರಿಸಲು ಇಂಡಿಯಾ ಮೈತ್ರಿ ಸೇರುವ ಉತ್ತರಪ್ರದೇಶದ ಸಣ್ಣ ಪಕ್ಷಗಳೊಂದಿಗೆ ಕಾಂಗ್ರೆಸ್–ಎಸ್‌ಪಿ ಸಂಯೋ ಜನೆ ಮಾತುಕತೆ ನಡೆಸುತ್ತಿದೆ ಮತ್ತು ಈ ತಿಂಗಳ ಅಂತ್ಯದ ವೇಳೆಗೆ ಎಲ್ಲವೂ ಬಗೆಹರಿ ಯಲಿದೆ. ಅವರಲ್ಲಿ ಕೆಲವರು ಬೇಷರತ್ತಾಗಿ ಸೇರುತ್ತಿದ್ದಾರೆ ಮತ್ತು ಕೆಲವರು ಕೆಲವು ನಿರೀಕ್ಷೆಗಳನ್ನು ಹೊಂದಿದ್ದಾರೆ ಮತ್ತು ಆದ್ದರಿಂದ ಸ್ವಲ್ಪ ಉತ್ತರಪ್ರದೇಶದಲ್ಲಿ ಸೀಟು ಹಂಚಿಕೆಗೆ ಸಮಯ ತೆಗೆದುಕೊಳ್ಳುತ್ತಿದೆ ಆದರೆ ಈ ತಿಂಗಳ ಅಂತ್ಯದ ವೇಳೆಗೆ ಎಲ್ಲ ವನ್ನೂ ಬಗೆಹರಿಸಲಾಗುವುದು ಎಂದರು.

ಫೆ.29ರಿಂದ ಧರ್ಮಸ್ಥಳಕ್ಕೆ ಪಾದಯಾತ್ರೆ



ಸುದ್ದಿಗೋಷ್ಠಿಯಲ್ಲಿ ಎಂ.ಕೆ.ಮಹದೇವ ಮಾತನಾಡಿದರು.


ಮೈಸೂರು, ಫೆ.18(ಜಿಎ)–ಕುಡುಮ ಶ್ರೀಕ್ಷೇತ್ರ ಧರ್ಮಸ್ಥಳ ಪಾದಯಾತ್ರೆ ಟ್ರಸ್ಟ್ ವತಿಯಿಂದ ಫೆ.29ರಂದು ಧರ್ಮಸ್ಥಳಕ್ಕೆ ಪಾದಯಾತ್ರೆ ಆರಂಭಿಸಿ, ಮಾ.8ರಂದು ಧರ್ಮಸ್ಥಳ ತಲುಪಲಿದೆ ಎಂದು ಟ್ರಸ್ಟ್ ಅಧ್ಯಕ್ಷ ಎಂ.ಕೆ.ಮಹದೇವ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದು ಟ್ರಸ್ಟ್‌ನ 43ನೇ ವರ್ಷದ ಪಾದಯಾತ್ರೆಯಾಗಿದ್ದು, ಈ ರೀತಿಯ ಪಾದಯಾತ್ರೆಯಿಂದ ಅನಾರೋಗ್ಯ ದೂರಾಗುವುದಲ್ಲದೆ, ಶಾರೀರಿಕ, ಮಾನಸಿಕ ಆರೋಗ್ಯ ವೃದ್ಧಿಸುತ್ತದೆ. ಈ ಬಾರಿ ಪಾದಯಾತ್ರೆಯಲ್ಲಿ ಸುಮಾರು 300 ಮಂದಿ ಪಾಲ್ಗೊಳ್ಳಲಿದ್ದಾರೆ ಎಂದರು.

ಟ್ರಸ್ಟ್ ವತಿಯಿಂದ ಯಾತ್ರಿಗಳಿಗೆ ಯಾವುದೇ ಶುಲ್ಕ ಪಡೆಯದೆ, ಊಟ, ತಿಂಡಿ, ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ. ಫೆ.28ರ ಸಂಜೆ 7ಕ್ಕೆ ನಗರದ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ಬಳಿ ಪೂಜೆ ಆರಂಭಿಸಿ, ಫೆ.29ರ ಬೆಳಗಿನ ಜಾವ ನಾಲ್ಕಕ್ಕೆ ಪಾದಯಾತ್ರೆ ಆರಂಭವಾಗಲಿದೆ. ಇದು ನಿರಂತರವಾಗಿ 8 ದಿನದ ಪಾದಯಾತ್ರೆಯಾಗಿದ್ದು, ದಿನಕ್ಕೆ 30ರಿಂದ 40 ಕಿಮೀ ಕ್ರಮಿಸಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಗೋಪಮ್ಮ ಅಶೋಕ್, ಮಹದೇಶ್, ರಾಹುಲ್, ಸೋಮು ಹಾಸನ ಉಪಸ್ಥಿತರಿದ್ದರು.

ಯೋಗೇಂದ್ರಗೆ ಪಿಎಚ್.ಡಿ ಪದವಿ



ಮೈಸೂರು, ಫೆ. 18– ಪ್ರೊ.ಎ.ಸೋಮಶೇಖರ್ ಅವರ ಮಾರ್ಗದರ್ಶನದಲ್ಲಿ ಯೋಗೇಂದ್ರ ಅವರು ಇತಿಹಾಸ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ 'ಮೈಸೂರು ಒಡೆಯರುಗಳು ಮತ್ತು ಆಧುನೀಕರಣ (1881–1950), ಮಹಾಪ್ರಬಂಧವನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರಿನ ಕಾಮನಕೆರೆಹುಂಡಿಯಲ್ಲಿ ಗೃಹಿಣಿ ಅನುಮಾನಾಸ್ಪದ ಸಾವು


ಮೈಸೂರು, ಫೆ.18(ಬಿಎಲ್‌ಯು)– ಗೃಹಿಣಿಯೊಬ್ಬಳು ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಘಟನೆ ಮೈಸೂರು ತಾಲೂಕು ಕಾಮನಕೆರೆಹುಂಡಿಯಲ್ಲಿ ಶನಿವಾರ ಸಂಭವಿಸಿದೆ.

ಕಾಮನಕೆರೆಹುಂಡಿಯ ನವೀನ್ ಕುಮಾರ್ ಪತ್ನಿ ಗೀತಾ ಸಾವನ್ನಪ್ಪಿರುವ ಗೃಹಿಣಿಯಾಗಿದ್ದಾಳೆ. ಕಳೆದ 22 ವರ್ಷದ ಹಿಂದೆ ನಾಗನಹಳ್ಳಿಯ ಗೀತಾಳನ್ನು ನವೀನ್‌ಕುಮಾರ್‌ಗೆ ಕೊಟ್ಟು ಮದುವೆ ಮಾಡಲಾಗಿತ್ತು. ಆದರೆ ಈಗ ಗೀತಾ ಅನುಮಾನಾಸ್ಪದ ರೀತಿಯಲ್ಲಿ ಸಾವನ್ನಪ್ಪಿದ್ದಾಳೆ. ನನ್ನ ಮಗಳ ಆರೋಗ್ಯ ಸರಿ ಇಲ್ಲವೆಂದು ಅಳಿಯನ ಮನೆಯವರು ತಿಳಿಸಿದಾಗ ಆಕೆಯ ಮನೆಗೆ ಹೋದೆವು. ಆದರೆ ನನ್ನ ಮಗಳು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಗಂಡನ ಮನೆಯವರು ತಿಳಿಸಿದರು. ನನ್ನ ಮಗಳ ಮೈಮೇಲೆ ಗಾಯದ ಗುರುತುಗಳಿದ್ದು, ಆಕೆ ಸಾವಿನ ಬಗ್ಗೆ ಅನುಮಾನವಿದೆ. ಈ ಹಿನ್ನೆಲೆ ನನ್ನ ಮಗಳ ಸಾವಿನ ಬಗ್ಗೆ ತನಿಖೆ ನಡೆಸಬೇಕು ಎಂದು ಗೀತಾ ತಂದೆ ಸಿದ್ದೇಗೌಡ ಮೈಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಅಸಹಜ ಸಾವಿನ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಮೃತ ಗೀತಾಳ ಮರಣೋತ್ತರ ಪರೀಕ್ಷಾ ವರದಿ ಬಂದ ನಂತರ ತನಿಖೆ ಮಾಡಿ ತಪ್ಪಿತಸ್ಥರಿದ್ದರೆ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಮುಕ್ತ, ನ್ಯಾಯಸಮ್ಮತವಾಗಿ ಲೋಕಸಭಾ ಚುನಾವಣೆ ನಡೆಯಲಿ

ಚುನಾವಣಾ ಆಯೋಗಕ್ಕೆ ವಿಶ್ರಾಂತ ಕುಲಪತಿ ಪ್ರೊ.ಮಹದೇವ್ ಆಗ್ರಹ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಭಾನುವಾರ ಭಾರತದ ಇವಿಎಂ ಮತದಾನ ಹಾಗೂ ರಾಜಕೀಯ ಪಕ್ಷಗಳು ಎಂಬ ವಿಚಾರದ ಬಗ್ಗೆ ನಡೆದ ಅವಲೋಕನ ಸಭೆಯನ್ನು ವಿಶ್ರಾಂತ ಕುಲಪತಿ ಪ್ರೊಮಹದೇವ್ ಉದ್ಘಾಟಿಸಿದರು.

ಮೈಸೂರು, ಫೆ.18(ಬಿಎಲ್‌ಯು)– ಮುಂಬರುವ ಲೋಕಸಭಾ ಚುನಾವಣೆಯನ್ನು ಮುಕ್ತ ಹಾಗೂ ನ್ಯಾಯಸಮ್ಮತವಾಗಿ ನಡೆಸಬೇಕು ಎಂದು ಭುವನೇಶ್ವರ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಮಹದೇವ್ ಚುನಾವಣಾ ಆಯೋಗವನ್ನು ಆಗ್ರಹಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಭಾನುವಾರ ಭಾರತದ ಇವಿಎಂ ಮತದಾನ ಹಾಗೂ ರಾಜಕೀಯ ಪಕ್ಷಗಳು ಎಂಬ ವಿಚಾರದ ಬಗ್ಗೆ ನಡೆದ ಅವಲೋಕನ ಸಭೆಯಲ್ಲಿ ಮಾತನಾಡಿದ ಅವರು, ವಿದ್ಯುನ್ಮಾನ ಮತ ಯಂತ್ರದ ಬಗ್ಗೆ ಅನುಮಾನ ವ್ಯಕ್ತಪಡಿಸಿದರೆ ಚುನಾವಣಾ ಆಯೋಗ ಕ್ರಮ ಕೈಗೊಳ್ಳುವ ಕಾರಣ, ಈ ವಿಚಾರದ ಚರ್ಚೆ ಸಂಕೀರ್ಣವಾಗಿದೆ ಎಂದು ಅಭಿಪ್ರಾಯಪಟ್ಟರು.

ಮಹಿಳಾ ಸಬಲೀಕರಣ, ಬಡತನ ನಿರ್ಮೂಲನೆ, ಸರ್ವ ಧರ್ಮ ಹಿತ ಸೇರಿದಂತೆ ಹಲವು ಜನಪರ ಯೋಜನೆಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾದರಿ ಬಜೆಟ್ ಮಂಡಿಸಿದ್ದಾರೆ. ಪಂಚ ಗ್ಯಾರಂಟಿ ಯೋಜನೆಯಿಂದ ಸ್ತ್ರೀಯರಿಗೆ ಬಹಳ ಉಪಯೋಗವಾಗಿದೆ ಎಂದು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪಂಚ ಗ್ಯಾರಂಟಿ ಯೋಜನೆಗಳ ಬಗ್ಗೆ ದೇಶ–ವಿದೇಶಗಳಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ ಎಂದು ಪ್ರೊ.ಮಹದೇವ್ ತಿಳಿಸಿದರು.

ಎಐಸಿಸಿ ಸೂಚನೆ ಮೇರೆಗೆ ರಚನೆ ಮಾಡಿರುವ ಸಂಶೋಧನಾ ವಿಭಾಗದಲ್ಲಿ 150 ನಿವೃತ್ತ ಅಧಿಕಾರಿಗಳಿದ್ದು, ಇವರು ಸಮಾಜವಾದಿ ಮನೋಭಾವವುಳ್ಳವರಾಗಿದ್ದಾರೆ. ಪಕ್ಷದ ಬಲವರ್ಧನೆಗಾಗಿ ತೆರೆಯ ಹಿಂದೆ ಇವರು ಕೆಲಸ ಮಾಡಲಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ತಿಳಿಸಿದರು.

ಕೋಮುವಾದಿ ಪಕ್ಷದ ರಾಜಕೀಯ ತಂತ್ರಗಾರಿಕೆ ಬಗ್ಗೆ ಜನರನ್ನು ಎಚ್ಚರಗೊಳಿಸಬೇಕು. ಜೊತೆಗೆ ಕಾಂಗ್ರೆಸ್ ಪಕ್ಷದ ಬಗ್ಗೆ ಜನರಲ್ಲಿರುವ ತಪ್ಪು ಕಲ್ಪನೆ ಹೋಗಲಾಡಿಸಬೇಕು ಎಂದು ಜಿಲ್ಲಾ ಕಾಂಗ್ರೆಸ್ ಸಂಶೋಧನಾ ವಿಭಾಗದ ಅಧ್ಯಕ್ಷ ನಾಗರಾಜ್ ಈ ವೇಳೆ ಸಲಹೆ ನೀಡಿದರು.

ಮಾಜಿ ಮೇಯರ್ ಮೋದಾಮಣಿ, ಕೆಪಿಸಿಸಿ ಮಾಧ್ಯಮ ವಕ್ತಾರ ಅನಿಲ್‌ಕುಮಾರ್ ತಡಕಲ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶಿವಪ್ರಸಾದ್ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ರಾಷ್ಟ್ರೀಯ ಟೆನ್ನಿಸ್ ಪಂದ್ಯಾವಳಿ ಡಬಲ್ಸ್‌ನಲ್ಲಿ ಪದ್ಮಪ್ರಿಯ ರಮೇಶ್–ಸೃಷ್ಟಿ ಕಿರಣ್ ಚಾಂಪಿಯನ್



ಪಂದ್ಯಾವಳಿಯ ಫೈನಲ್ ಪಂದ್ಯದಲ್ಲಿ ಪ್ರಥಮ ಹಾಗೂ ರನ್ನರ್ ಅಪ್ ಸ್ಥಾನ ಪಡೆದ ಹರಿಯಾಣದ ಕುಷಿ ಖಾದಿಯನ್ ಹಾಗೂ ಸರೇನಾ ಗೆಹ್ಲೋಟ್ ಅವರೊಂದಿಗೆ ಚಾಂಪಿಯನ್‌ಗಳಾದ ಪದ್ಮಪ್ರಿಯ ರಮೇಶ್ ಹಾಗೂ ಸೃಷ್ಟಿ ಕಿರಣ್.

ಮೈಸೂರು,ಫೆ.18(ಎಂಟಿವೈ)– ಮುಂಬೈನಲ್ಲಿ ನಡೆದ ರಾಷ್ಟ್ರೀಯ ಟೆನ್ನಿಸ್ ಪಂದ್ಯಾವಳಿಯಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿದ್ದ ಪದ್ಮಪ್ರಿಯ ರಮೇಶ್‌ಕುಮಾರ್ ಹಾಗೂ ಸೃಷ್ಟಿ ಕಿರಣ್ ಚಾಂಪಿಯನ್ ಆಗಿ ಹೊರ ಹೊಮ್ಮಿದ್ದಾರೆ.

ಆಲ್ ಇಂಡಿಯಾ ಟೆನ್ನಿಸ್ ಅಸೋಸಿಯೇಷನ್ ಆಯೋಜಿಸಿದ್ದ 18ನೇ ರಮೇಶ್ ದೇಸಾಯಿ ಮೆಮೋರಿಯಲ್ ನ್ಯಾಷನಲ್ ಟೆನ್ನಿಸ್ ಪಂದ್ಯಾವಳಿಯಲ್ಲಿ 12 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಪದ್ಮಪ್ರಿಯ ರಮೇಶ್ ಕುಮಾರ್ ಹಾಗೂ ಸೃಷ್ಟಿ ಕಿರಣ್ ಅವರು ಉತ್ತಮ ಪ್ರದರ್ಶನ ನೀಡಿ, ಹರಿಯಾಣದ ಕುಷಿ ಖಾದಿಯನ್ ಹಾಗೂ ಸರೇನಾ ಗೆಹ್ಲೋಟ್ ಅವರನ್ನು ಮಣಿಸುವ ಮೂಲಕ ಡಬಲ್ಸ್ ಪಂದ್ಯಾವಳಿಯ ಚಾಂಪಿಯನ್ ಪಟ್ಟ ತನ್ನದಾಗಿಸಿಕೊಂಡಿದ್ದಾರೆ. 12 ವರ್ಷದೊಳಗಿನ ಬಾಲಕಿಯರ ಟೆನ್ನಿಸ್ ಪಟುಗಳಲ್ಲಿ ಪ್ರಸ್ತುತ ಕರ್ನಾಟಕದ ಸೃಷ್ಟಿ ಕಿರಣ್ ಪ್ರಥಮ ರ್‍ಯಾಂಕ್, ಹರಿಯಾಣದ ಖುಷಿ ದ್ವಿತೀಯ ಹಾಗೂ ಸರೇನಾ ತೃತೀಯ ಮತ್ತು ಕರ್ನಾಟಕದ ಪದ್ಮಪ್ರಿಯ ರಮೇಶ್ 4ನೇ ರ್‍ಯಾಂಕ್ ಹೊಂದಿದ್ದಾರೆ. ಪದ್ಮಪ್ರಿಯ ಅವರು ಮೈಸೂರಿನ ಎಕ್ಸೆಲ್ ಪಬ್ಲಿಕ್ ಸ್ಕೂಲ್ ಶಾಲೆಯ ವಿದ್ಯಾರ್ಥಿನಿಯಾಗಿದ್ದು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್ ಹಾಗೂ ಮೈಸೂರು ವೃತ್ತದ ಸಿಎಫ್ ಡಾ. ಮಾಲತಿ ಪ್ರಿಯ ಅವರ ಪುತ್ರಿಯಾಗಿದ್ದಾರೆ.

ರಾಮ ಮಂದಿರ ನಿರ್ಮಾಣದಿಂದ ಬಡತನ ನಿರ್ಮೂಲನೆ ಆಗಲ್ಲ

ಸುಪ್ರೀಂಕೋರ್ಟ್ ಸೂಚಿಸಿದ ಜಾಗದಲ್ಲಿ ಮಂದಿರ ಕಟ್ಟಿಲ್ಲ: ಸಂತೋಷ್ ಲಾಡ್



ಹುಬ್ಬಳ್ಳಿ, ಫೆ.18– ರಾಮ ಮಂದಿರ ನಿರ್ಮಿಸುವುದರಿಂದ ಬಡತನ ನಿರ್ಮೂಲನೆ ಆಗುವುದಿಲ್ಲ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದರು. ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ರಾಜಕೀಯ ಇಚ್ಛಾಶಕ್ತಿ ಕಾರಣಕ್ಕೆ ರಾಮ ಮಂದಿರ ನಿರ್ಮಾಣ ಮಾಡಲಾಗಿದೆ. ಅದೂ ಶೇ.40 ರಷ್ಟು ಮಾತ್ರ ನಿರ್ಮಾಣ ಮಾಡಿದ್ದಾರೆ. ರಾಮ ಮಂದಿರ ನಿರ್ಮಾಣಕ್ಕೆ ನಮ್ಮ ವಿರೋಧ ಇಲ್ಲ. ಆದರೆ ಸುಪ್ರೀಂ ಕೋರ್ಟ್ ಸೂಚಿಸಿದ ಜಾಗದಲ್ಲಿ ಮಂದಿರ ಕಟ್ಟಿಲ್ಲ ಎಂದರು.

ದೇಶದಲ್ಲಿ ಹತ್ತು ವರ್ಷದಿಂದ ಸರ್ವಾಧಿಕಾರಿ ಧೋರಣೆ ನಡೆಯುತ್ತಿದೆ ಎಂದು ಹೇಳಿದ ಸಂತೋಷ್ ಲಾಡ್, ರಾಮ ಮಂದಿರದ ಹೆಸರಿನಲ್ಲಿ ಯಾಕೆ ಮತ ಕೇಳುತ್ತೀರಿ ಎಂದು ಪ್ರಶ್ನಿಸಿದರು. ಅಲ್ಲದೆ, ಕಳೆದ 10 ವರ್ಷದಲ್ಲಿ ಮೋದಿ ಸರ್ಕಾರ ಏನು ಕೆಲಸ ಮಾಡಿದೆ. ಪೆಟ್ರೋಲ್, ಡೀಸೆಲ್, ಅಗತ್ಯ ವಸ್ತುಗಳ ದರ ಕಡಿಮೆ ಆಗಿದೆಯಾ, ಬಡವರಿಗೆ ಅನುಕೂಲವಾಗುವ ಒಂದು ಕಾರ್ಯಕ್ರಮ ಮಾಡಿಲ್ಲ. ದೇಶ ಹಳ್ಳ ಹಿಡಿದು ಹೋಗಿದೆ ಎಂದರು.

ಅಧಿಕಾರ ಇದೆ ಎಂದು ದುರುಪಯೋಗ ಮಾಡಬಾರದು. ನೀವು ಪ್ರಭಾವಿಯಾಗಿದ್ದರೆ ಟಿವಿ ಆಫ್ ಮಾಡಿ ಬನ್ನಿ. ರಾಮ ರಹೀಮ್, ಪಾಕಿಸ್ತಾನ, ಅಫಘಾನಿಸ್ತಾನ ಹೆಸರು ಮೂಲಕ ಜನರನ್ನು ಹುಚ್ಚರನ್ನಾಗಿ ಮಾಡುತ್ತಾರೆ. ಕಳೆದ ಚುನಾವಣೆಯಲ್ಲಿ ಪುಲ್ವಾಮಾ ದಾಳಿ ಬಗ್ಗೆ ಮಾತಾಡಿದರು. ಹಾಗಿದ್ದರೆ RDX ಹೇಗೆ ಬಂತು ದೇಶದಲ್ಲಿ ಈ ತರಹ ಚರ್ಚೆಗಳೇ ಆಗತಿಲ್ಲ ಎಂದರು.

ಕಾಂಗ್ರೆಸ್ ಹೈಕಮಾಂಡ್ ರಾಜ್ಯಸಭೆ ಟಿಕೆಟ್ ನಿರಾಕರಿಸಿದ ಹಿನ್ನೆಲೆ ಇಂದಿರಾ ಗಾಂಧಿ ಮೂರನೇ ಮಗನಂತಿದ್ದ ಕಮಲನಾಥ್ ಅವರು ಬಿಜೆಪಿ ಸೇರ್ಪಡೆಯಾಗಲು ಮುಂದಾಗಿದ್ದಾರೆ. ಈ ಬಗ್ಗೆ ಮಾತನಾಡಿದ ಸಂತೋಷ್ ಲಾಡ್, ಸೋತ ಕಮಲನಾಥ್ ಅವರನ್ನು ತೆಗೆದುಕೊಂಡಿದ್ದೀರಿ ಎಂದರು.

ಕೇವಲ ರಾಮ ಮಂದಿರ, ನಿತೀಶ್ ಕುಮಾರ್, ಕಮಲನಾಥ್ ವಿಚಾರದಿಂದ ಯಾವ ಹಿಂದೂಗೆ ಲಾಭವಾಗಿಲ್ಲ. ಇದಕ್ಕೆಲ್ಲ ಅಂತ್ಯ ಇದೆ, ದೇವರು ಇದ್ದಾನೆ ಎಂದ ಸಂತೋಷ್ ಲಾಡ್, ಬಿಜೆಪಿ ಏನೂ ಮಾಡಿಲ್ಲ. ಗ್ಯಾರಂಟಿಗಳನ್ನು ನೋಡಿ ಮತ ಹಾಕಿದರೆ ಬಿಜೆಪಿಯವರು ಗೆಲ್ಲಲ್ಲ. ಅಭಿವೃದ್ಧಿ ವಿಚಾರದ ಮೇಲೆ ಚುನಾವಣೆಗೆ ಹೋದರೆ ಬಿಜೆಪಿ ಗೆಲ್ಲಲ್ಲ. ಜನರಿಗೆ ಮೋಸ ಮಾಡಿ ವೋಟ್ ತೆಗೆದುಕೊಳ್ಳುತ್ತಾರೆ. ಮುಂದಿನ 100 ದಿನಗಳಲ್ಲಿ ಅಭಿವೃದ್ಧಿ ಬಗ್ಗೆ ಚರ್ಚೆ ಮಾಡಲಿ ಎಂದರು. ಲೋಕಸಭೆ ಚುನಾವಣೆ ಸ್ಪರ್ಧೆ ಬಗ್ಗೆ ಮಾತನಾಡಿದ ಸಂತೋಷ್ ಲಾಡ್, ನಾನು ಲೋಕಸಭೆ ಚುನಾವಣೆಗೆ ನಿಲ್ಲಲು ಮನಸಿಲ್ಲ. ಲೋಕಸಭೆ ಚುನಾವಣೆ ಸ್ಪರ್ಧೆ ಮಾಡಲು ನನಗೆ ಆಸಕ್ತಿ ಇಲ್ಲ ಎಂದರು.

ರೈತರ ಪ್ರತಿಭಟನೆ: ಪಂಜಾಬ್‌ನಲ್ಲಿ ಫೆ.24ರವರೆಗೆ ಇಂಟರ್‌ನೆಟ್ ಸ್ಥಗಿತ

ಚಂಡೀಗಢ, ಫೆ.18– ರೈತರ 'ದೆಹಲಿ ಚಲೋ' ಜಾಥಾದ ಹಿನ್ನೆಲೆ ಯಲ್ಲಿ ಕೇಂದ್ರ ಗೃಹ ಸಚಿವಾಲಯದ ಆದೇಶದ ಮೇರೆಗೆ ಪಟಿಯಾಲ, ಸಂಗ್ರೂರ್ ಮತ್ತು ಫತೇ ಘರ್ ಸಾಹಿಬ್ ಸೇರಿದಂತೆ ಕೆಲವು ಪಂಜಾಬ್ ಜಿಲ್ಲೆಗಳ ಕೆಲವು ಪ್ರದೇಶಗಳಲ್ಲಿ ಇಂಟರ್ ನೆಟ್ ಸೇವೆಗಳ ಸ್ಥಗಿತವನ್ನು ಫೆ.24ರವ ರೆಗೆ ವಿಸ್ತರಿಸಲಾಗಿದೆ. ಈ ಹಿಂದೆ ಫೆ. 12ರಿಂದ 16ರವರೆಗೆ ಇಂಟರ್ ನೆಟ್ ಸೇವೆಯನ್ನು ಸ್ಥಗಿತಗೊಳಿಸಲಾಗಿತ್ತು.

ಕೇಂದ್ರ ಗೃಹ ಸಚಿವಾಲಯದ ಫೆ.16ರ ಆದೇಶದ ಪ್ರಕಾರ, ಪಟಿಯಾಲಾದ ಶಂಭು, ಜುಲ್ಕನ್, ಪಾಸಿಯಾನ್, ಪತ್ರಾನ್, ಶತ್ರನಾ, ಸಮನಾ, ಘನೌರ್, ದೇವಿಗಢ್ ಮತ್ತು ಬಲ್ಭೇರಾ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ಮತ್ತು ಬಟಿಂ ಡಾದ ಸಂಗತ್ ಪೊಲೀಸ್ ಠಾಣೆ, ಫತೇಘರ್ ಸಾಹಿಬ್ ಪೊಲೀಸ್ ಠಾಣೆ ವ್ಯಾಪ್ತಿಯ ಪ್ರದೇಶ ಸೇರಿದಂತೆ ಮತ್ತಿ ತರ ಕಡೆಗಳಲ್ಲಿ ಇಂಟರ್ ನೆಟ್ ಸ್ಥಗಿತಗೊಳಿಲಾಗಿದೆ. ಪಂಜಾಬ್‌ನ ಈ ಪ್ರದೇಶಗಳಲ್ಲಿ ಇಂಟರ್ ನೆಟ್ ಸೇವೆ ಗಳನ್ನು ಸ್ಥಗಿತಗೊಳಿಸಲು ಕೇಂದ್ರವು 1885ರ ಟೆಲಿಗ್ರಾಫ್ ಆಕ್ಟ್ ಅಡಿಯಲ್ಲಿ ತನ್ನ ವಿಶೇಷ ಅಧಿಕಾರವನ್ನು ಬಳಸಿದೆ. ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಫೆ.15 ರಂದು ಚಂಡೀಗಢದಲ್ಲಿ ಮೂವರು ಕೇಂದ್ರ ಸಚಿವರು ಮತ್ತು ರೈತ ಮುಖಂಡರ ನಡುವೆ ನಡೆದ ಸಭೆಯಲ್ಲಿ ಆಯ್ದ ಪ್ರದೇಶಗಳಲ್ಲಿ ಇಂಟರ್ನೆಟ್ ಸೇವೆಗಳನ್ನು ಸ್ಥಗಿತಗೊಳಿ ಸುವ ಬಗ್ಗೆ ವಿಷಯ ಪ್ರಸ್ತಾಪಿಸಿದ್ದರು.

ಗ್ರಾಮೀಣ ಬ್ಯಾಂಕ್ ಸಾಲ ವಸೂಲಾತಿಯಲ್ಲಿ ಶೋಷಣೆ ಆರೋಪ

ಮೈಸೂರಿಗೆ ಆಗಮಿಸಿದ ರೈತ ಸಂಕಲ್ಪ ಯಾತ್ರೆ




ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಆರ್.ಮಾಧವ ರೆಡ್ಡಿ ಮಾತನಾಡಿದರು.

ಮೈಸೂರು, ಫೆ.18(ಜಿಎ)–ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಸಾಲ ವಸೂಲಾತಿ ಪದ್ಧತಿಯ ಶೋಷಣೆ ವಿರೋಧಿಸಿ ಬಳ್ಳಾರಿಯಲ್ಲಿನ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ (ಅನುಬಂಧ) ಆರಂಭಿಸಿದ್ದ ರೈತ ಸಂಕಲ್ಪ ಯಾತ್ರೆ ಇಂದು ಮೈಸೂರು ತಲುಪಿದ್ದು, ಸೋಮವಾರ ಚಾಮರಾಜನಗರಕ್ಕೆ ಪ್ರಯಾಣ ಬೆಳೆಸಲಿದೆ ಎಂದು ರಾಜ್ಯಾಧ್ಯಕ್ಷ ಆರ್.ಮಾಧವರೆಡ್ಡಿ ಕರೂರು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಕರ್ನಾಟಕ ಗ್ರಾಮೀಣ ಬ್ಯಾಂಕ್ ಬಳ್ಳಾರಿ ಸೇರಿದಂತೆ ರಾಜ್ಯದಲ್ಲಿ 22 ಶಾಖೆ ಹೊಂದಿದ್ದು, ಬ್ಯಾಂಕ್ ಆರ್‌ಬಿಐನ ಎಲ್ಲಾ ನೀತಿ ನಿಯಮ ಉಲ್ಲಂಘಿಸಿ, ಕೇವಲ ಒಂದು ಲಕ್ಷ ರೂ. ಸಾಲ ಪಡೆದವರಿಗೂ ಹತ್ತು ಲಕ್ಷ ಬಡ್ಡಿ ವಿಧಿಸಿದ ಉದಾಹರಣೆಗಳೂ ಇವೆ ಎಂದರು.

ಕರ್ನಾಟಕ ಗ್ರಾಮೀಣ ಬ್ಯಾಂಕ್‌ನಲ್ಲಿ ಪಡೆದಿರುವ ಅಸಲಿಗೆ ಬಡ್ಡಿ, ಚಕ್ರಬಡ್ಡಿ, ಸುಸ್ತಿ ಬಡ್ಡಿ ಸೇರಿಸಿ ಸಾಲದ ಮೊತ್ತಕ್ಕಿಂತ ನಾಲ್ಕು ಪಟ್ಟು ಹೆಚ್ಚು ಹಣವನ್ನು ಪಾವತಿಸುವಂತೆ ನೋಟಿಸ್‌ಗಳನ್ನು ನೀಡಲಾಗುತ್ತಿದೆ. ಬ್ಯಾಂಕಿನವರು ಕಾನೂನುಬಾಹಿರವಾಗಿ ನೋಟಿಸ್‌ಗಳನ್ನು ನೀಡುವುದರ ವಿರುದ್ಧ ಕಳೆದ 2 ವರ್ಷದಿಂದ ಕರ್ನಾಟಕ ರಾಜ್ಯ ರೈತ ಸಂಘ ರೈತ ಪರ ಹೋರಾಟ ಮಾಡುತ್ತಾ ಬಂದಿದೆ. ಈ ರೀತಿ ಈಗ ರೈತರ ಸಂಕಲ್ಪ ಯಾತ್ರೆ ಹಮ್ಮಿಕೊಳ್ಳುವುದರ ಮೂಲಕ ರಾಜ್ಯಾದ್ಯಂತ ಬ್ಯಾಂಕ್ ಶೋಷಣೆ ಕುರಿತಂತೆ ಜಾಗೃತಿ ಮೂಡಿಸುತ್ತಿದೆ. ಅದರಂತೆ ಮಾ.29 ರಂದು ಬಳ್ಳಾರಿಯ ಪ್ರಧಾನ ಕಚೇರಿ ಬಳಿ ಸಮಾರೋಪಗೊಳ್ಳಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಲೇಪಾಕ್ಷ, ಸಲೀಂ, ವಿರೂಪಾಕ್ಷ ರೆಡ್ಡಿ, ಶ್ರೀನಿವಾಸ್ ರೆಡ್ಡಿ, ಪ್ರವೀಣ್ ರೆಡ್ಡಿ, ರೆಹಮಾನ್, ಓಂಕಾರಿಗೌಡ ಉಪಸ್ಥಿತರಿದ್ದರು.

ಇಂದಿನಿಂದ ಬೆಂಗಳೂರಲ್ಲಿ ಸಮುದಾಯ ಆರೋಗ್ಯ ಅಧಿಕಾರಿಗಳ ಪ್ರತಿಭಟನೆ



ಸುದ್ದಿಗೋಷ್ಠಿಯಲ್ಲಿ ಎಂ.ಶಿವಪ್ರಸಾದ್ ಮಾತನಾಡಿದರು.

ಮೈಸೂರು, ಫೆ.18(ಜಿಎ)–ರಾಜ್ಯದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಒಳಗುತ್ತಿಗೆ ಆಧಾರದ ಮೇಲೆ ದುಡಿಯುತ್ತಿರುವ ಸಮುದಾಯ ಆರೋಗ್ಯ ಅಧಿಕಾರಿಗಳು ಬೇಡಿಕೆ ಈಡೇರಿಕೆಗಾಗಿ ಆಗ್ರಹಿಸಿ ಫೆ.19ರಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಿದ್ದಾರೆ ಎಂದು ಜಿಲ್ಲಾಧ್ಯಕ್ಷ ಎಂ.ಶಿವಪ್ರಸಾದ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ಸಮುದಾಯ ಆರೋಗ್ಯ ಅಧಿಕಾರಿಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಒಳಗುತ್ತಿಗೆ ಆಧಾರದ ಮೇಲೆ ಗ್ರಾಮೀಣ ಭಾಗದಲ್ಲಿ ಇರುವ ಆರೋಗ್ಯ ಮತ್ತು ಕ್ಷೇಮ ಕೇಂದ್ರದಲ್ಲಿ ಕಳೆದ 7 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಆದರೆ ತಮ್ಮ ಬೇಡಿಕೆ ಈಡೇರಿಸದ ಕಾರಣ ಈಗ ಹೋರಾಟ ನಡೆಸುತ್ತಿದ್ದಾರೆ ಎಂದರು.

ಮಾರ್ಗಸೂಚಿಗಳ ಅನ್ವಯ ಆರು ವರ್ಷ ಸೇವೆ ಪೂರೈಸಿದ ಎಲ್ಲಾ ಸಮುದಾಯ ಆರೋಗ್ಯ ಅಧಿಕಾರಿಗಳ ಸೇವೆಯನ್ನು ಕಾಯಂಗೊಳಿಸಬೇಕು. ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಇತರೆ ನೌಕರರಿಗೆ ನೀಡಿದ ಶೇ.15 ವೇತನ ಹೆಚ್ಚಳವನ್ನು ಸಮುದಾಯ ಆರೋಗ್ಯ ಅಧಿಕಾರಿಗಳಿಗೂ ಕೂಡ ಅನ್ವಯಿಸಬೇಕು. ವಿನಾಕಾರಣ ವಜಾಗೊಳಿಸಿದ ಎಲ್ಲಾ ಸಮುದಾಯ ಆರೋಗ್ಯ ಅಧಿಕಾರಿಗಳನ್ನು ಕೂಡಲೇ ವಾಪಸ್ ಕೆಲಸಕ್ಕೆ ತೆಗೆದುಕೊಳ್ಳಬೇಕು. ಜಿಲ್ಲೆಯಿಂದ ಜಿಲ್ಲೆಗೆ ವರ್ಗಾವಣೆ ಮಾಡುವ ಅವಕಾಶ ಕಲ್ಪಿಸಬೇಕು ಎಂಬ ಮೊದಲಾದ ಬೇಡಿಕೆ ಈಡೇರಿಕೆಗೆ ಆಗ್ರಹಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಭರತೇಶ್, ಸಂಜೀವ್‌ಕುಮಾರ್, ಪ್ರಸನ್ನಕುಮಾರ್, ಕರಿಯಪ್ಪ ಇದ್ದರು.

ಮಹರ್ಷಿ ಪತಂಜಲಿ ಸಂಸ್ಮರಣೋತ್ಸವ; ಯೋಗ ಸಾಧಕರಿಗೆ ಪ್ರಶಸ್ತಿ ಪ್ರದಾನ



ಮೈಸೂರು ಹಿಮಾಲಯ ಪ್ರತಿಷ್ಠಾನ, ಜಿಲ್ಲಾ ಕಸಾಪ ಸಹಯೋಗದೊಂದಿಗೆ ಮಹರ್ಷಿ ಪತಂಜಲಿಯ ಸಂಸ್ಮರಣೋತ್ಸವ ಅಂಗವಾಗಿ 2024ನೇ ಸಾಲಿನ ಯೋಗ ಸಾಧಕರಿಗೆ ಮಹರ್ಷಿ ಪತಂಜಲಿ ಸದ್ಭಾವನೆ, ಯೋಗ ವಿಭೂಷಣ ಹಾಗೂ ಯೋಗ ಭೂಷಣ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಫೆ.18(ಎಸ್‌ಪಿಎನ್)–ಪ್ರಸ್ತುತ ಯುವಕರು ಬಿಯರ್–ಬ್ರಾಂದಿ ಕುಡಿತದ ವ್ಯಸನಿಗಳಾಗುತ್ತಿದ್ದಾರೆ. ಈ ವ್ಯಸನದಿಂದ ಯುವಕರನ್ನು ಹೊರತರಲು ದೊಡ್ಡಮಟ್ಟದ ಅಭಿಯಾನ ಆರಂಭಿಸುವ ಹೊಣೆ ಸಮಾಜದ್ದು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಭಿಪ್ರಾಯಪಟ್ಟರು.

ಮೈಸೂರು ವಿಜಯನಗರ ಒಂದನೇ ಹಂತದಲ್ಲಿರುವ ಜಿಲ್ಲಾ ಕಸಾಪ ಭವನದ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಮೈಸೂರು ಹಿಮಾಲಯ ಪ್ರತಿಷ್ಠಾನ, ಜಿಲ್ಲಾ ಕಸಾಪ ಸಹಯೋಗದೊಂದಿಗೆ ಮಹರ್ಷಿ ಪತಂಜಲಿಯ ಸಂಸ್ಮರಣೋತ್ಸವ ಹಾಗೂ 2024ನೇ ಸಾಲಿನ ಯೋಗ ಸಾಧಕರಿಗೆ ಮಹರ್ಷಿ ಪತಂಜಲಿ ಸದ್ಭಾವನೆ, ಯೋಗ ವಿಭೂಷಣ ಹಾಗೂ ಯೋಗ ಭೂಷಣ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಈಗಿನ ಯುವಕರು, ನಿರುದ್ಯೋಗ, ಕೌಟುಂಬಿಕ ಸಮಸ್ಯೆ, ಓದಿನಲ್ಲಿ ನಿರಾಸಕ್ತಿ ಹೊಂದಿ, ನಿತ್ಯ ಬಿಯರ್–ಬ್ರಾಂದಿ ಸೇವಿಸಲು ಬಾರ್‌ಗಳತ್ತ ಮುಖ ಮಾಡುತ್ತಿದ್ದಾರೆ. ಇದು ಗ್ರಾಮೀಣ ಪ್ರದೇಶದ ಯುವಕರಲ್ಲಿ ವ್ಯಸನವಾಗಿ ಪರಿಣಮಿಸುತ್ತಿದೆ. ಈ ವ್ಯಸನದಿಂದ ಯುವಕರನ್ನು ಹೊರತರಲು ಸಮಾಜದ ಪ್ರಮುಖರು, ವಿದ್ವಾಂಸರು, ಆರೋಗ್ಯ ಮತ್ತು ಯೋಗ ತಜ್ಞರು ಸೇರಿದಂತೆ ಇತರರು ದೊಡ್ಡಮಟ್ಟದ ಅಭಿಯಾನ ಆರಂಭಿಸಬೇಕು ಎಂದು ಮನವಿ ಮಾಡಿದರು.

ಯೋಗಾಚಾರ್ಯ ಬಿ.ಕೆ.ಎಸ್.ಅಯ್ಯಂಗಾರ್ ಎಂದರೆ ಯೋಗದ ಜ್ಞಾನ ಇರುವ ಪ್ರತಿಯೊಬ್ಬರಿಗೂ ಚಿರಪರಿಚಿತ. ಯೋಗಕ್ಕೆ ಜಾಗತಿಕ ಮನ್ನಣೆ ದೊರಕಿಸಿಕೊಡುವಲ್ಲಿ ಬಿಕೆಎಸ್ ಅಯ್ಯಂಗಾರ್ ಅವರ ಕೊಡುಗೆ ಅಪಾರ. ಬಿಕೆಎಸ್ ಅಯ್ಯಂಗಾರ್ ಅವರು, ಮೈಸೂರಿನ ಟಿ.ಕೃಷ್ಣಮಾಚಾರಿ ಅವರ ಬಳಿ ಎರಡು ವರ್ಷಗಳ ಕಾಲ ಯೋಗಾಭ್ಯಾಸ ನಡೆಸಿದ್ದರು. ಕಾಲಕ್ರಮೇಣ ಇವರಿಗೆ ಯೋಗಾಸನದ ಭಂಗಿಗಳೆಲ್ಲಾ ಕರತಲಾಮಲಕವಾದವು. ನಂತರ ಪುಣೆಗೆ ತೆರಳಿ ಅಲ್ಲಿ ಯೋಗ ತರಬೇತಿಯನ್ನು ಆರಂಭಿಸುತ್ತಾರೆ ಎಂದರು.

ತದನಂತರ 1954ರಲ್ಲಿ ಬಿಕೆಎಸ್ ಅಯ್ಯಂಗಾರ್ ಅವರು, ವಿದೇಶದಲ್ಲೂ ಯೋಗ ತರಗತಿಗಳನ್ನು ಆರಂಭಿಸುತ್ತಾರೆ. ತಮ್ಮ ಜೀವಿತಾವಧಿಯಲ್ಲಿ 200ಕ್ಕೂ ಹೆಚ್ಚು ಯೋಗಾಸನ, 14 ಬಗೆಯ ಪ್ರಾಣಾಯಾಮ ಪ್ರಕ್ರಿಯೆಗಳನ್ನು ಕಲಿತಿದ್ದರು. ಇವರು ಮೈಸೂರಿನಲ್ಲಿ ಯೋಗಾಭ್ಯಾಸ ಮಾಡಿದ್ದರು ಎಂಬುದೇ ಹೆಮ್ಮೆಯ ವಿಷಯ. ಯೋಗಾಭ್ಯಾಸ ಮತ್ತು ಸಂಗೀತ, ಚಿತ್ರಕಲೆ ಕಲಿಕೆಗೆ ಪ್ರಾಥಮಿಕ ಹಂತದಿಂದಲೇ ರಾಜ್ಯ ಸರ್ಕಾರ ಕಡ್ಡಾಯಗೊಳಿಸಬೇಕು ಎಂದು ಒತ್ತಾಯಿಸಿದರು.

ನಂತರ ಅಷ್ಟಾಂಗ ಸಾಧನಾ ಯೋಗಶಾಲೆಯ ಸ್ಥಾಪಕ ಎಂ.ಪಿ.ವಿಜಯಕುಮಾರ್ ಅವರು, ಮಹರ್ಷಿ ಪತಂಜಲಿ ಯೋಗ ಸೂತ್ರಗಳ ಕುರಿತು ಮಾತ ನಾಡಿದರು. ಯೋಗಸಾಧಕರಾದ ಪಿ.ಆರ್.ವಿಶ್ವನಾಥಶೆಟ್ಟಿ, ಎಂ.ಪಿ.ರಮೇಶ್‌ಬಾಬು, ಹೆಚ್.ಜಿ.ಹಿರಣ್ಣಯ್ಯ, ಎನ್.ಆಶಾದೇವಿ, ಎಸ್.ಅನುರಾದ ರೋಶನ್ ಅರೆಹೊಳೆ ಪರವಾಗಿ ಅವರ ಶಿಷ್ಯೆ ಮಹರ್ಷಿ ಪತಂಜಲಿಯ ಸದ್ಭಾವನಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕೆ.ಜಿ.ದೇವರಾಜ್ ಅವರಿಗೆ ಯೋಗ ವಿಭೂಷಣ, ಡಿ.ಎಂ.ರಾಜಶೇಖರ ಮೂರ್ತಿ, ಸುರೇಶ್, ನಾಗೇಂದ್ರ, ಶ್ರೀಹರಿ ಐಯ್ಯಂಗಾರ್, ಬಿ.ಎನ್.ಪ್ರೇಮಕುಮಾರ್ ಅವರಿಗೆ ಯೋಗಭೂಷಣ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಈ ವೇಳೆ ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್.ಅನಂತ್, ವೈಎಸ್‌ಎಫ್ ಉಪಾಧ್ಯಕ್ಷೆ ಎಚ್.ಕೆ.ಗೀತಾ ಕುಮಾರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಹುಡುಗಿ : ನಾಳೆ ನನ್ನ ಬರ್ತ್‌ಡೇ ಕಣೋ
ಹುಡುಗ : ಹಾಗಾದ್ರೆ ಅಡ್ವಾನ್ಸ್ ಹ್ಯಾಪಿ ಬರ್ತ್‌ಡೆ...
ಹುಡುಗಿ : ಏನ್ ಗಿಫ್ಟ್ ಕೊಡ್ತೀಯಾ?
ಹುಡುಗ : ಏನ್ ಬೇಕು ಕೇಳು...
ಹುಡುಗಿ : ರಿಂಗ್ ಕೊಡ್ತೀಯಾ...
ಹುಡುಗ : ಆಯ್ತು ಕೊಡ್ತೀನಿ, ಆದ್ರೆ ರಿಸಿವ್ ಮಾಡಬೇಡ, ಬ್ಯಾಲೆನ್ಸ್ ಇಲ್ಲ...!

ಮೈಸೂರು ಮಿತ್ರ
ಸೋಮವಾರ, 19 ಫೆಬ್ರವರಿ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

'ಗುರು ಶ್ರೇಷ್ಠನ ಕರುಣೆಯಿಲ್ಲದೆ, ಯಾರು ಕೂಡ ತಾವು ಬಯಸಿದ್ದನ್ನು ಪಡೆಯಲು ಸಾಧ್ಯವಿಲ್ಲ, ಆದ್ದರಿಂದ ಜೀವನದಲ್ಲಿ ಸಕಲ ಸುಖಗಳಿಗೂ ಮೂಲವಾದ ಗುರುವಿನ ಪಾದಕಮಲಗಳಲ್ಲಿ ಅಚಲವಾದ ಭಕ್ತಿಯನ್ನು ಪಡೆದುಕೊಳ್ಳಬೇಕು'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಊರಿಗೆ ಅರಸನಾದರೂ ತಾಯಿಗೆ ಮಗ'

ನಿಮ್ಮ ಪತ್ರಗಳು

ಸಿಎಂ ತವರು ಜಿಲ್ಲೆ ಪ್ರೇಮದ ಬಜೆಟ್ ಕೊಡುಗೆ

ಮಾನ್ಯರೆ,

ಮುಖ್ಯಮಂತ್ರಿ ಸಿದ್ದರಾಮಯ್ಯನವರು 2024-25ನೇ ಆರ್ಥಿಕ ಸಾಲಿನ ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ಮೈಸೂರಿಗೆ ಬಜೆಟ್ ಕೊಡುಗೆಯನ್ನು ನೀಡುವ ಮೂಲಕ ತವರು ಪ್ರೇಮವನ್ನು ಮೆರೆದಿದ್ದಾರೆ

ಮಹಾರಾಣಿ ಮಹಿಳಾ ಕಾಲೇಜು ವಿಜ್ಞಾನ ಕಟ್ಟಡ ನಿರ್ಮಾಣಕ್ಕೆ 54 ಕೋಟಿ ರೂ.ಗಳು ಹಾಗೂ ಮಹಾರಾಣಿ ಕಲಾ ಮತ್ತು ವಾಣಿಜ್ಯ ಕಾಲೇಜ್ ಹಾಸ್ಟೆಲ್ ಕಟ್ಟಡ ನಿರ್ಮಾಣಕ್ಕೆ 116 ಕೋಟಿ ರೂ. ಅನುದಾನವನ್ನು ಮೀಸಲಿಟ್ಟಿದ್ದಾರೆ. ನೆಫ್ರೋ ಮೂತ್ರ ಶಾಸ್ತ್ರ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲಾಗಿದೆ ಹಾಗೂ 40ರಿಂದ 100 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯನ್ನು ಉನ್ನತೀಕರಿಸಲಾಗುವುದು ಎಂದು ಹೇಳಿದ್ದಾರೆ. ಕೃಷಿ ಮಾರುಕಟ್ಟೆ ಸಮಿತಿಯಲ್ಲಿ 40 ಕೋಟಿ ರೂ. ವೆಚ್ಚದಲ್ಲಿ ಶೀತಲ ಘಟಕ ನಿರ್ಮಿಸಲಾಗುವುದು ಎಂದಿದ್ದಾರೆ. ಪಾರಂಪರಿಕ ಕಟ್ಟಡಗಳಾದ ಲ್ಯಾನ್ಸ್‌ಡೌನ್ ಕಟ್ಟಡ ಮತ್ತು ದೇವರಾಜ ಮಾರುಕಟ್ಟೆಯನ್ನು ಪಾರಂಪರಿಕ ಶೈಲಿಯಲ್ಲಿ ಅಭಿವೃದ್ಧಿಪಡಿಸಲು ಕ್ರಮ ವಹಿಸಲು ತೀರ್ಮಾನಿಸಿದ್ದಾರೆ.

ಮೈಸೂರಿನ ಭಾಗದಲ್ಲಿ ನೂತನ ಜವಳಿ ಪಾರ್ಕ್ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಪ್ರಾರಂಭಿಸಲಾಗುತ್ತಿದೆ ಎಂದಿದ್ದಾರೆ. ಪರಿಸರ ಪ್ರವಾಸೋದ್ಯಮವನ್ನು ಉತ್ತೇಜಿಸಲು ಕಬಿನಿ, ಬಂಡಿಪುರ ಸೇರಿದಂತೆ ದಾಂಡೇಲಿಯಲ್ಲಿ 25 ಕೋಟಿ ರೂ. ವೆಚ್ಚದಲ್ಲಿ ಇಂಟರ್ ಪ್ರಿಟೇಷನ್ ಸೆಂಟರ್‌ಗಳನ್ನು ಜೆಎಲ್‌ಆರ್ ಸಂಸ್ಥೆಯ ಮೂಲಕ ನಿರ್ಮಾಣ ಮಾಡಲಾಗುವುದು ಎಂದಿದ್ದಾರೆ ಹಾಗೂ ಮಣಿಪಾಲ್ ಆಸ್ಪತ್ರೆಯ ಜಂಕ್ಷನ್‌ನಲ್ಲಿ ಮೇಲ್ ಸೇತುವೆ ನಿರ್ಮಾಣಕ್ಕೆ ಮುಂದಾಗಿದ್ದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸಹಯೋಗದಲ್ಲಿ ಇದು ನಿರ್ಮಾಣವಾಗಲಿದೆ ಎಂದಿದ್ದಾರೆ. ಕುಕ್ಕರಹಳ್ಳಿ ಬಳಿ ಹಾಗೂ ಕೆಆರ್‌ಎಸ್ ರಸ್ತೆಯಲ್ಲಿ ರೈಲ್ವೆ ಮೇಲ್ ಸೇತುವೆ ನಿರ್ಮಾಣಕ್ಕೂ ಹಣ ಕಾಯ್ದಿರಿಸಿದ್ದಾರೆ. ಹೀಗೆ ತಮ್ಮ ತವರು ಜಿಲ್ಲೆಗೆ ಭರಪೂರ ಕೊಡುಗೆ ಕೊಟ್ಟಿದ್ದಾರೆ.

-ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ ಮೈಸೂರು

ಹೊಸ ಪಡಿತರ ಕಾರ್ಡ್‌ಗೆ ಅರ್ಜಿ, ಮಾಹಿತಿ ಸುಳ್ಳಾಗದಿರಲಿ

ಮಾನ್ಯರೆ,

ಏಪ್ರಿಲ್ 1ರಿಂದ ಎಪಿಎಲ್ ಮತ್ತು ಬಿಪಿಎಲ್ ಕಾರ್ಡ್‌ಗೆ ಹೊಸದಾಗಿ ಅರ್ಜಿ ಸ್ವೀಕರಿಸಲಾಗುವುದು ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಹೆಚ್.ಮುನಿಯಪ್ಪ ವಿಧಾನಸಭೆಯ ಪ್ರಶ್ನೋತ್ತರ ವೇಳೆಯಲ್ಲಿ ತಿಳಿಸಿದ್ದಾರೆ. ಇದು ಅತ್ಯಂತ ಸ್ವಾಗತಾರ್ಹ ಕ್ರಮ. ಆದರೆ ಈ ಹೇಳಿಕೆ ಸುಳ್ಳಾಗಬಾರದು ಮತ್ತು ಅರ್ಜಿ ಸ್ವೀಕಾರಕ್ಕೆ ಸೀಮಿತವಾಗಬಾರದು. ನಯನ ಮೋಟಮ್ಮ ಅವರ ಪ್ರಶ್ನೆ ಸಮಾಜಮುಖಿಯಾದ ಪ್ರಶ್ನೆಯಾಗಿದೆ. ಎಷ್ಟೋ ಕುಟುಂಬಗಳು ಕೂಲಿ ಅರಸಿ ವಲಸೆ ಹೋದಾಗ ಬಯೋಮೆಟ್ರಿಕ್ಸ್ ಹಾಕದೆ ಕಾರ್ಡ್ ರದ್ದಾಗಿವೆ. ಎಷ್ಟೋ ಅವಿಭಕ್ತ ಕುಟುಂಬಗಳು ಭಾಗವಾಗಿದ್ದು ಕಾರ್ಡ್ ಇಲ್ಲದೆ ಪರಿತಪಿಸುತ್ತಿವೆ. ಈ ರೀತಿಯ ಬೇರೆ ಬೇರೆ ಕಾರಣದಿಂದ ಪಡಿತರ ಚೀಟಿ ಪಡೆಯಲು ಸಾಧ್ಯವಾಗದೆ ಇರುವ ಕುಟುಂಬಕ್ಕೆ ಹೊಸ ಪಡಿತರ ಚೀಟಿ ನೀಡಿದರೆ ಸಹಾಯವಾಗುತ್ತದೆ. ಪಂಚ ಗ್ಯಾರಂಟಿಗಳನ್ನು ನೀಡಿದ ಸರ್ಕಾರಕ್ಕೆ ಇದೇನು ದೊಡ್ಡ ಸವಾಲಲ್ಲ .

-ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ.

ವಿದ್ಯಾರ್ಥಿಗಳನ್ನು ರಾಜಕೀಯ ಅಸ್ತ್ರವಾಗಿ ಬಳಸಬೇಡಿ

ಮಾನ್ಯರೆ,

ಮಂಗಳೂರಿನ ಶಾಲೆಯೊಂದರಲ್ಲಿ ಶಿಕ್ಷಕಿಯೊಬ್ಬರು ಧರ್ಮ ನಿಂದನೆ ಮಾತುಗಳನ್ನಾಡಿದ ಆರೋಪದಡಿ ಹಲವು ದಿನಗಳಿಂದ ಮಾಧ್ಯಮಗಳ ಕಣ್ಣು ಅತ್ತ ನೆಟ್ಟಿದೆ. ಶಿಕ್ಷಕಿಯ ಮಾತುಗಳ ಕುರಿತು ನಿಷ್ಕರ್ಷೆ, ಅವುಗಳ ಸಾಂವಿಧಾನಿಕತೆ ಬೇರೆಯದೇ ವಿಷಯ. ಆದರೆ ತಮ್ಮ ಕ್ಷೇತ್ರವ್ಯಾಪ್ತಿಯ ಸಮಸ್ಯೆಯೊಂದನ್ನು ಜನಪ್ರತಿನಿಧಿಗಳು ನಿರ್ವಹಿಸಿದ ರೀತಿ ಆತಂಕಕಾರಿಯಾಗಿದೆ. ಪೋಷಕರ ಮನಸ್ಸಿನಲ್ಲಿ ಮೂಡುತ್ತಿರುವ ಬಿರುಕನ್ನು ಹೆಚ್ಚಿಸುವ ರೀತಿಯಲ್ಲಿ ಅಲ್ಲಿನ ಶಾಸಕರು ಹೇಳಿಕೆಯನ್ನು ನೀಡಿದ್ದಾರೆ.

ತರಗತಿಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಜನಪ್ರತಿನಿಧಿಗಳು ಶಾಲೆಗೆ ಭೇಟಿ ನೀಡುವುದರ ಮೂಲಕ, ಶಿಕ್ಷಕಿ ಮತ್ತು ಆಡಳಿತ ಮಂಡಳಿಯನ್ನು ಬೆದರಿಸುವ ರೀತಿಯಲ್ಲಿ ಮಾತನಾಡುವ ಮೂಲಕ ಮಕ್ಕಳಿಗೆ ಅವರು ಯಾವ ರೀತಿಯ ಸಂದೇಶವನ್ನು ನೀಡಿದಂತಾಗಿದೆ? ಜನಪ್ರತಿನಿಧಿಗಳು ಎಳೆಯ ವಿದ್ಯಾರ್ಥಿಗಳ ಮನಸ್ಸಿನಲ್ಲಿ ವಿಷವನ್ನು ತುಂಬಿ ಅವರನ್ನು ತಮ್ಮ ಲಾಭಕ್ಕಾಗಿ ಬಳಸಿಕೊಳ್ಳುತ್ತಿರುವುದು ಇಲ್ಲಿ ನಿಶ್ಚಳವಾಗಿದೆ.ಇದಕ್ಕೆಲ್ಲಾ ಮುಖ್ಯವಾಗಿ ಮಾಧ್ಯಮಗಳು ವಿದ್ಯಾರ್ಥಿಗಳ ಹೇಳಿಕೆಗಳನ್ನು ಪಡೆದಿವೆ. ವಿದ್ಯಾರ್ಥಿಗಳ ಹೇಳಿಕೆಯನ್ನು ಪಡೆಯಬಹುದೆ? 18 ವರ್ಷದೊಳಗಿನ ಮಕ್ಕಳ ಫೋಟೊಗಳ ಪ್ರಕಟಣೆ ಸಂಬಂಧಿಸಿದಂತೆ ನಿಯಮ ಇಲ್ಲಿ ಅನ್ವಯವಾಗುವುದಿಲ್ಲವೆ? ಮುಂದಿನ ದಿನಗಳಲ್ಲಿ ಮಕ್ಕಳ, ಸಮಾಜದ ಆರೋಗ್ಯದ ದೃಷ್ಟಿಯಿಂದ ಇದು ಬೀರಬಹುದಾದ ಪರಿಣಾಮಗಳ ಬಗ್ಗೆ ಯೋಚಿಸಬೇಕಲ್ಲವೇ? ಶಿಕ್ಷಕಿಯನ್ನು ಅಮಾನತುಗೊಳಿಸಿದ ಸಂದರ್ಭದಲ್ಲಿ ವಿದ್ಯಾರ್ಥಿ ಸಮೂಹವು ನೃತ್ಯ ಮಾಡಿರುವುದು ನಿಜಕ್ಕೂ ಆತಂಕಕಾರಿಯಾಗಿದೆ. ಒಂದಕ್ಷರವನ್ನು ಕಲಿಸಿದರೂ ಆತ ಗುರು ಎಂದು ಸಾರುತ್ತಾ ಬಂದಿರುವವರೇ ಇಂತಹವುಗಳನ್ನು ಗೆಲುವು ಎಂದು ತಿಳಿಯುವುದು ವ್ಯಂಗ್ಯವಾಗಿದೆ. ಸರ್ಕಾರ ಮಕ್ಕಳ ಹಕ್ಕುಗಳ ಆಯೋಗವು ಈ ಪ್ರಕರಣದತ್ತ ಗಮನ ಹರಿಸಬೇಕು. ತರಗತಿಯಲ್ಲಿ ಅಥವಾ ಶಿಕ್ಷಕರ ಬೋಧನೆಯಲ್ಲಿ ಯಾವುದೇ ರೀತಿಯ ಧರ್ಮವಿರೋಧಿ ಸಂದೇಶ ಅಥವಾ ಯಾರ ಭಾವನೆಗಾದರೂ ಧಕ್ಕೆ ತರುವ ಅಂಶಗಳಿದ್ದರೆ ಅದನ್ನು ಪೋಷಕರು ಮತ್ತು ಮಕ್ಕಳು ಮೊದಲಿಗೆ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರ ಗಮನಕ್ಕೆ ತಂದು ಸಂವಿಧಾನಾತ್ಮಕವಾಗಿ ಬಗೆಹರಿಸಿಕೊಳ್ಳಲು ಪ್ರಯತ್ನಿಸಬೇಕೇ ವಿನಾ ರಾಜಕೀಯ ಪಕ್ಷದ ಮುಖಂಡರನ್ನು ಕರೆದುಕೊಂಡು ಹೋಗಿ ಗಲಾಟೆ ಎಬ್ಬಿಸುವುದಲ್ಲ. ವಿದ್ಯಾರ್ಥಿಗಳನ್ನು ಅಸ್ತ್ರವಾಗಿ ಬಳಸಿಕೊಳ್ಳುವುದು ತರವಲ್ಲ. ಮಕ್ಕಳ ಮನಸ್ಸು ವಿಷವನ್ನು ಬಿತ್ತಿ ಬೆಳೆಯುವ ಕಾರ್ಖಾನೆಯಾಗದ ಹಾಗೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರದ್ದು.

-ಕೆ.ಎಸ್.ಸುರೇಶ್, ಶಿಕ್ಷಕರು, ಕೆಜೀ ಹಳ್ಳಿ, ಹೆಚ್.ಡಿ.ಕೋಟೆ



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866-77284

ಬೆರಗು

ಎಲ್ಲೆಡೆ ಭ್ರಮೆ ಪ್ರಭಾವ; ನೈಜ ಭಾವಕ್ಕೆ ಅಭಾವ!

ಸಾಮಾಜಿಕ ಜಾಲತಾಣಗಳಲ್ಲಿ ಲಭ್ಯವಾಗುವ ಲೈಕ್ ಹಾಗೂ ಕಮೆಂಟ್‌ಗಳನ್ನು ನೋಡಿ ಮೈಮರೆಯಬಾರದು. ಯಾರನ್ನೋ ಮೆಚ್ಚಿಸಿ ಚಪ್ಪಾಳೆ ಗಿಟ್ಟಿಸಲು ನಮ್ಮ ಬದುಕು ನಾಟಕವಾಗಲಿ, ಸಿನಿಮಾ ಆಗಲಿ ಅಲ್ಲ. ನಮ್ಮದು ರಿಯಲ್ ಲೈಫ್, ರೀಲ್ ಲೈಫ್ ಅಲ್ಲ. ಭ್ರಮೆಯಲ್ಲಿ ಬದುಕುವುದನ್ನು ಬಿಡಬೇಕು. ಪ್ರತಿಯೊಂದಕ್ಕೂ ಅದರದೇ ಪಾವಿತ್ರ್ಯತೆ ಇರುತ್ತದೆ, ಅದನ್ನು ಕಾಪಾಡಬೇಕು. ಯಾವುದು ಎಲ್ಲಿರಬೇಕು ಅಲ್ಲಿರಬೇಕು, ಯಾರು ಎಷ್ಟರಲ್ಲಿರಬೇಕು ಅಷ್ಟರಲ್ಲಿರಬೇಕು, ಯಾರ ಹತ್ತಿರ ಏನು ನಿರೀಕ್ಷೆ ಮಾಡಬೇಕೋ ಅದನ್ನು ಮಾತ್ರ ನಿರೀಕ್ಷಿಸಬೇಕು. ಅತಿಯಾದರೆ ಅಮೃತವೂ ವಿಷವಾಗುತ್ತದೆ. ನೈಜ ಭಾವನೆಗಳಿಗೆ ಬೆಲೆ ಕೊಡಬೇಕು. ಬಂಧುಬಳಗ ನೀಡುವ ಉಡುಗೊರೆ, ಆಚರಣೆಯಿಂದಲೇ ಎಲ್ಲವನ್ನು ಅಳೆಯಬಾರದು. ಎಲ್ಲದಕ್ಕಿಂತ ಬದುಕು ಮುಖ್ಯ. ಸಾಮಾಜಿಕ ಜಾಲತಾಣದಲ್ಲಿ ಸ್ಟೇಟಸ್ ಹಾಕಿಕೊಳ್ಳುವುದು ಮುಖ್ಯವಲ್ಲ, ಸಮಾಜದಲ್ಲಿ ಸ್ಟೇಟಸ್ ಹೆಚ್ಚಿಸಿಕೊಳ್ಳುವಂತಹ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ಸಮಾಜಕ್ಕೆ ಆಕರ್ಷಕವಾಗಿ ಕಾಣುವುದು ಮುಖ್ಯವಲ್ಲ, ಆದರ್ಶವಾಗಿರುವುದು ಮುಖ್ಯ.



ಹಿಂದೆ ಜನ ತಮ್ಮ ಮನೆಯ ಕೆಲವು ವಿಚಾರಗಳನ್ನು ಗೌಪ್ಯವಾಗಿಡಲು ಬಯಸುತ್ತಿದ್ದರು. ತಮ್ಮ ಮನೆಯ ವಿಚಾರಗಳು ನಾಲ್ಕು ಗೋಡೆಗಳ ಮಧ್ಯೆ ಇರುವುದು ಮರ್ಯಾದಸ್ಥ ಕುಟುಂಬದ ಲಕ್ಷಣ ಎಂದು ಭಾವಿಸುತ್ತಿದ್ದರು. ವೈಯಕ್ತಿಕ ವಿಚಾರಗಳು, ಖಾಸಗಿ ವಿಚಾರಗಳನ್ನು ಸಾರ್ವಜನಿಕವಾಗಿ ಹೇಳಿಕೊಳ್ಳುವ ಇರಾದೆ ಇರಲಿಲ್ಲ. ಅಂತಹ ಗಂಭೀರ ವಿಚಾರಗಳಿದ್ದಲ್ಲಿ ತಮ್ಮ ಅತ್ಯಾಪ್ತರ ಬಳಿ ಚರ್ಚಿಸಿ, ಪರಿಹಾರ ಕಂಡುಕೊಂಡು ತಮ್ಮ ಮನೆಯ ಪಾವಿತ್ರ್ಯತೆಯನ್ನು ಕಾಪಾಡಿಕೊಳ್ಳುತ್ತಿದ್ದರು. ಮನೆಯ ಮಂದಿ ಅನಗತ್ಯವಾಗಿ ಹೊರಗೆ ತಿರುಗುವುದು, ಅತಿಯಾದ ಮೇಕಪ್ ಮಾಡಿಕೊಳ್ಳುವುದು ಇವೆಲ್ಲಾ ಅಭ್ಯಾಸಗಳು ಇರಲಿಲ್ಲ. ತಮ್ಮದೇ ಊರಿನಲ್ಲಿನ ಹೋಟೆಲ್‌ಗೆ ಕುಟುಂಬ ಸಮೇತ ಹೋಗಿ ಊಟ-ತಿಂಡಿ ಮಾಡುವ ಅಭ್ಯಾಸ ಇರಲಿಲ್ಲ. ಪರವೂರಿಗೆ ಹೋದಾಗ ಅನಿವಾರ್ಯ ಎನಿಸಿದ ಸಮಯದಲ್ಲಿ ಹೋಟೆಲ್‌ಗೆ ಹೋಗುವ ಅಭ್ಯಾಸ ಇರುತ್ತಿತ್ತು. ತಮ್ಮ ಊರಿನಲ್ಲಿ ಹೋಟೆಲ್‌ಗೆ ಹೋಗುವವರನ್ನು ಒಂದು ರೀತಿ ನೋಡುತ್ತಿದ್ದರು. ಆದರೆ ಇಂದು ಜೀವನ ಕ್ರಮ ಊಹಿಸಲಾಗದಷ್ಟು ಮಟ್ಟಕ್ಕೆ ಬದಲಾಗಿಬಿಟ್ಟಿದೆ. ತಾವು ಮಾಡುವ ಪ್ರತಿ ಕೆಲಸವನ್ನು ಸಮಾಜಕ್ಕೆ ತಿಳಿಸುವ ಉಮೇದಿನಿಂದ ಸಾಮಾಜಿಕ ಜಾಲತಾಣದಲ್ಲಿ ತೋರಿಸಿಕೊಳ್ಳುವ ಹುಚ್ಚು ಅತಿಯಾಗಿದೆ. ತೀರ ಖಾಸಗಿ ವಿಷಯಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳುವ ಮಟ್ಟಕ್ಕೆ ಇಳಿದಿರುವುದು ಬೌದ್ಧಿಕ ದಿವಾಳಿತನದ ಸಂಕೇತದಂತೆ ಕಾಣುತ್ತದೆ. ಇತ್ತೀಚಿಗೆ ಸಾಮಾಜಿಕ ಜಾಲತಾಣದ ಪ್ರಭಾವ ಅತಿಯಾದ ಕಾರಣಕ್ಕೆ ಭ್ರಮಾ ಲೋಕದಲ್ಲಿ ತೇಲಾಡುವ ಜನರ ನಡುವೆ ನೈಜ ಭಾವನೆಗಳಿಗೆ ಬೆಲೆ ಇಲ್ಲದಂತಾಗಿದೆ. ಸರಿಯೇ ತಪ್ಪಿನಂತೆ, ತಪ್ಪೇ ಸರಿಯಂತೆ ಗೋಚರಿಸುತ್ತಿರುವುದು ಕಲಿಗಾಲದ ಮಹಿಮೆ ಎನಿಸುತ್ತಿದೆ.

'ತನ್ನ ಪತಿ ನನಗೆ ನಿನ್ನೆ ಥಳಿಸಿದರು' ಎಂದು ಒಬ್ಬರು ಸಾಮಾಜಿಕ ಜಾಲತಾಣದಲ್ಲಿ ಮಹಿಳೆಯೊಬ್ಬರು ಅಳುತ್ತಾ ವಿಡೀಯೋ ಮೂಲಕ ಹೇಳಿಕೊಳ್ಳುತ್ತಾರೆ. ಇದರಿಂದ ಮನೆಯ ಗುಟ್ಟು ರಟ್ಟಾದಂತೆ ಅಲ್ಲವೇ? ಅದನ್ನು ವೀಕ್ಷಿಸಿದ ಜನ ಏನು ತಾನೆ ಮಾಡಲು ಸಾಧ್ಯ? ಮತ್ತೊಬ್ಬರು ಹೋಂಟೂರ್ ಎಂಬ ಅಡಿಬರಹದಲ್ಲಿ ತಮ್ಮ ಮನೆಯ ಇಂಚಿಂಚು ಭಾಗವನ್ನು ಪರಿಚಯಿಸುತ್ತಾರೆ. ತಮ್ಮ ಇಡೀ ದಿನದ ದಿನಚರಿಯನ್ನು ಒಬ್ಬರು ಹಂಚಿಕೊಂಡರೆ, ಮತ್ತೊಬ್ಬರು ಕುಟುಂಬ ಸಮೇತ ಒಂದು ವಾರ ಪ್ರವಾಸಕ್ಕೆ ತೆರಳಿರುವುದಾಗಿ ಫೋಟೋ ಹಾಗೂ ವಿಡೀಯೋ ಹಂಚಿಕೊಳ್ಳುತ್ತಾರೆ. ಇದರಿಂದ ಮನೆಗೆ ಬಂದು ಕಳ್ಳತನ ಮಾಡುವವರಿಗೆ ಸುಲಭವಾಗುವುದಿಲ್ಲವೇ? ತಾವು ರೆಕಾರ್ಡ್ ಮಾಡಿ ಪೋಸ್ಟ್ ಮಾಡುವ ವಿಡೀಯೋಗಳಿಂದ ಆಗುವ ಪ್ರಯೋಜನ, ವೀಕ್ಷಕರಿಗೆ ಕೊಡುವ ಸಂದೇಶ, ಅದರಿಂದ ಸಮಾಜದ ಮೇಲೆ ಆಗುವ ಪರಿಣಾಮ, ದುಷ್ಪರಿಣಾಮ ಇವುಗಳ ಕುರಿತು ಅರಿವಿಲ್ಲದೆ, ಯಾವುದೇ ಸೆನ್ಸಾರ್ ಇಲ್ಲದೆ ವಿಡೀಯೋಗಳನ್ನು ಹರಿಬಿಡುತ್ತಾರೆ. ಇದರಿಂದ ಅನೇಕ ಪರೋಕ್ಷ ಅಪಾಯಗಳನ್ನು ಸಹ ಎದುರಿಸುತ್ತಾರೆ.

ಇತ್ತೀಚಿನ ಕೆಲವು ಕೊಲೆ, ಆತ್ಮಹತ್ಯೆ ಪ್ರಕರಣಗಳನ್ನು ಗಮನಿಸಿದಾಗ ಅವುಗಳ ಮೂಲ ಸಾಮಾಜಿಕ ಜಾಲತಾಣದ ಪರಿಣಾಮ ಎಂದು ತಿಳಿದು ಬರುತ್ತದೆ. ಇಂದಿನ ಯುವ ಸಮೂಹ ಎಗ್ಗಿಲ್ಲದೆ ಫೇಸ್ಬುಕ್, ವಾಟ್ಸಾಪ್, ಇನ್ಸ್ಟಾಗ್ರಾಂನಂತಹ ಜಾಲತಾಣಗಳ ರೀಲ್ಸ್ ಹುಚ್ಚಿಗೆ ಬಿದ್ದು, ದಿಢೀರ್ ಜನಪ್ರಿಯತೆ ಹಾಗೂ ಹಣ ಗಳಿಸಬೇಕೆಂಬ ಉತ್ಸಾಹದಲ್ಲಿ ಅನೇಕ ಅರ್ಥರಹಿತ, ದ್ವಂದ್ವಾರ್ಥ ಸಂಭಾಷಣೆಗಳನ್ನುಳ್ಳ ರೀಲ್ಸ್‌ಗಳನ್ನು ಮಾಡುತ್ತಾ ಸಾಮಾಜದ ಸ್ವಾಸ್ಥ್ಯವನ್ನೇ ಕದಡುತ್ತಿದ್ದಾರೆ. ದೃಶ್ಯ ಮಾಧ್ಯಮ ತುಂಬ ಪರಿಣಾಮಕಾರಿ ಮಾಧ್ಯಮ. ಆ ಕಾರಣಕ್ಕೆ ಆ ಮಾಧ್ಯಮದಲ್ಲಿ ಸಮಾಜಕ್ಕೆ ಮಾರಕವಾದ, ಅಶ್ಲೀಲ ದೃಶ್ಯಗಳು ಕಂಡುಬಂದಲ್ಲಿ ಅವುಗಳನ್ನು ತೆಗೆದು ಹಾಕಲು ಸಿನೆಮಾ ಮಾಧ್ಯಮದಲ್ಲಿ ಸೆನ್ಸಾರ್ ಮಂಡಳಿ ಎಂಬುದಿದೆ. ಅದರಲ್ಲಿ 'ಯು', 'ಎ', 'ಯು/ಎ', 'ಎಸ್' ಹೀಗೆ ಅನೇಕ ಬಗೆಯ ಸರ್ಟಿಫಿಕೇಟ್‌ಗಳನ್ನು ನೀಡುತ್ತಾರೆ. ಯು ಸರ್ಟಿಫಿಕೇಟ್ ಸಿನೆಮಾಗಳು ಕುಟುಂಬ ಸಮೇತ ನೋಡಬಹುದಾದುದು, ಎ ಸರ್ಟಿಫಿಕೇಟ್ ಸಿನೆಮಾಗಳು ವಯಸ್ಕರ ಚಿತ್ರಗಳು, ಯು/ಎ ಎಂದರೆ ಪೋಷಕರ ಮಾರ್ಗದರ್ಶನದಲ್ಲಿ ಮಕ್ಕಳು ನೋಡಬಹುದಾದ ಚಿತ್ರಗಳು, ಎಸ್ ಸರ್ಟಿಫಿಕೇಟ್ ಚಿತ್ರಗಳು ವೈದ್ಯರು ಹಾಗೂ ವಿಜ್ಞಾನಿಗಳು ಮಾತ್ರ ನೋಡುವಂತಹದ್ದು ಎಂಬುದಾಗಿದೆ. ಆದರೆ ಇಂದು ಸಾಮಾಜಿಕ ಜಾಲತಾಣದಲ್ಲಿನ ರೀಲ್ಸ್‌ಗಳ ಸಂಭಾಷಣೆಗಳಲ್ಲಿ ದ್ವಂದ್ವಾರ್ಥಗಳು ಹೆಚ್ಚಾಗಿದ್ದು, ಅಶ್ಲೀಲತೆಯು ಯಾವುದೇ ಕಡಿವಾಣವಿಲ್ಲದೆ ಪ್ರಸಾರವಾಗಿ ಸಮಾಜದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಮನೆಯಲ್ಲಿ ಹಿರಿಯರು ಸೇರಿದಂತೆ ಸಣ್ಣ ಮಕ್ಕಳು ಸಹ ರೀಲ್ಸ್ ನೋಡುವ ಅಭ್ಯಾಸ ಹೊಂದಿದ್ದು, ಅವರ ವರ್ತನೆ ಹಾಗೂ ಭಾಷಾ ಶೈಲಿಯೇ ಬದಲಾಗಿ ಮನೆಯಲ್ಲಿ ಮಕ್ಕಳು ಭಿನ್ನ ಸಂಸ್ಕೃತಿಯನ್ನು ರೂಢಿಸಿಕೊಳ್ಳುತ್ತಿದ್ದಾರೆ. ರೀಲ್ಸ್ ಅಭಿಮಾನಿಗಳಿಂದ ಬರುತ್ತಿರುವ ಕಮೆಂಟ್‌ಗಳಿಂದ, ಪ್ರತಿಕ್ರಿಯೆಗಳಿಂದ ಅನೇಕ ಕುಟುಂಬಗಳಲ್ಲಿ ಬಿರುಕು ಮೂಡಿವೆ. ಸಾಮಾಜಿಕ ಜಾಲತಾಣದ ಜನಪ್ರಿಯತೆ ನೀರಮೇಲಿನ ಗುಳ್ಳೆ ಎಂಬ ಅರಿವಿಲ್ಲದೆ, ಭ್ರಮೆಯಲ್ಲಿ ತೇಲುತ್ತಾ ಹರ್ಷದ ಕೂಳಿಗೆ ವರ್ಷದ ಕೂಳನ್ನೇ ಕಳೆದುಕೊಂಡವರು ಅನೇಕರು ಇದ್ದಾರೆ.

ಮಕ್ಕಳನ್ನು ಬಳಸಿಕೊಂಡು ಟಿ.ವಿ.ಚಾನೆಲ್ ಒಂದು 'ಡ್ರಾಮ ಜ್ಯೂನಿಯರ್ಸ್' ಎಂಬ ಕಾರ್ಯಕ್ರಮ ಸರಣಿಯನ್ನು ರೂಪಿಸುತ್ತಿದೆ. ಇದರಲ್ಲಿ ಬಹುತೇಕ ಸಂಚಿಕೆಗಳು ಸಮಾಜಕ್ಕೆ ಉತ್ತಮ ಸಂದೇಶವನ್ನು ನೀಡುವಂತದ್ದಾಗಿದ್ದು, ಪ್ರತಿಭಾವಂತ ಮಕ್ಕಳಿಗೆ ಒಂದು ಉತ್ತಮ ವೇದಿಕೆ ಇದಾಗಿದೆ. ಆದರೂ ಅಲ್ಲಲ್ಲಿ ಮಕ್ಕಳ ಬಾಯಲ್ಲಿ ಕೇಳಬಾರದಂತಹ ಸಂಭಾಷಣೆಗಳು ಇಣುಕುವುದು ಉಂಟು. ಮಕ್ಕಳನ್ನು ಬಳಸಿಕೊಂಡು ರೀಲ್ಸ್ ಮಾಡುವ ಒಂದು ವರ್ಗವಿದೆ. ಕೆಲವು ತಮಾಷೆಯಾಗಿರುತ್ತವೆ, ಮಕ್ಕಳ ಮುಗ್ಧತೆ ಎಂತಹವರನ್ನು ಮನಸೂರೆಗೊಳ್ಳುತ್ತದೆ. ಆದರೆ ಕೆಲವು ಕಿಡಿಗೇಡಿಗಳು, ಬೇಜವಾಬ್ದಾರಿ ಪ್ರಜೆಗಳು ಮಕ್ಕಳನ್ನು ಬಳಸಿಕೊಂಡು ಸಿನೆಮಾದಲ್ಲಿ ಹೀರೋ ಮಚ್ಚಿನಿಂದ ಕೈಕಾಲು ತುಂಡರಿಸಿ ಕೊಲೆ ಮಾಡುವಂತಹ ದೃಶ್ಯಗಳನ್ನು ಮಕ್ಕಳಿಂದ ಮಾಡಿಸಿರುವುದು ಅಕ್ಷಮ್ಯ. ಮಕ್ಕಳಿಂದ ನಿರೀಕ್ಷಿಸದ ಕೆಲವು ನೃತ್ಯಗಳು, ಪ್ರಚೋದನಕಾರಿ ಆಂಗಿಕ ಅಭಿನಯಗಳು ಹೆಚ್ಚು ಜನರ ಗಮನ ಸೆಳೆದರೂ ಸಹ ಅದರಿಂದ ಅನೇಕ ಅಡ್ಡಪರಿಣಾಮಗಳು ಉಂಟಾಗುತ್ತಿವೆ. ಮಕ್ಕಳನ್ನು ಹೀಗೆ ದುರ್ಬಳಕೆ ಮಾಡಿಕೊಳ್ಳುವವರ ಮೇಲೆ ಯಾವುದೇ ಶಿಸ್ತು ಕ್ರಮ ಜರುಗಿಸದೆ ಮಕ್ಕಳ ಕಲ್ಯಾಣ ಇಲಾಖೆ, ಮಕ್ಕಳ ಹಕ್ಕು ಕಾಪಾಡುವ ಇಲಾಖೆ ಕಣ್ಣು ಮುಚ್ಚಿ ಕುಳಿತಿರುವುದು ಹಾಗೂ ಜನಪ್ರತಿನಿಧಿಗಳು ಜಾಣ ಕುರುಡು ಪ್ರದರ್ಶಿಸುತ್ತಿರುವುದು ಮಾತ್ರ ವಿಪರ್ಯಾಸ.

ಅಂದ ಹಾಗೆ ಸಾಮಾಜಿಕ ಜಾಲತಾಣದಲ್ಲಿ ಪ್ರವಾಸಿ ಸ್ಥಳಗಳ ಪರಿಚಯ, ಆರೋಗ್ಯವೃದ್ಧಿ, ದೇಶಪ್ರೇಮ ಬೆಳೆಸುವ, ಸಾಮಾಜಿಕ ಕಳಕಳಿಯುಳ್ಳ ಮಾಹಿತಿಗಳನ್ನು ಹಲವು ಪ್ರಜ್ಞಾವಂತರು, ವೈದ್ಯರು, ಪ್ರಾಧ್ಯಾಪಕರು ಹಂಚಿಕೊಳ್ಳುತ್ತಾರೆ. ಸಾರ್ವಜನಿಕರಿಗೆ ಇದರಿಂದ ಅನೇಕ ತರಹದ ಲಾಭಗಳು ಸಹ ಆಗುತ್ತಿವೆ. ಆದರೆ ಭ್ರಮೆ ಸೃಷ್ಟಿಸುವ ವಿಡೀಯೋಗಳ ಭರಾಟೆ ನಡುವೆ ಅವುಗಳು ಗೌಣವಾಗಿಬಿಡುತ್ತವೆ.

ಭ್ರಮಾ ಪ್ರಪಂಚದಲ್ಲಿ ನೈಜ ಭಾವನೆಗಳಿಗೆ ಬೆಲೆಯೇ ಇಲ್ಲದಂತಾಗಿದೆ. ಇಂದಿನ ಸಾಮಾಜಿಕ ಜಾಲತಾಣದ ಪ್ರಭಾವ ಎಷ್ಟಿದೆ ಎಂದರೆ ಇಂದು ಆದರ್ಶ ದಂಪತಿಗಳಿಗಿಂತ ಹೆಚ್ಚಾಗಿ ಆಕರ್ಷಕ ದಂಪತಿಗಳೇ ಹೆಚ್ಚಾಗಿ ಕಾಣುತ್ತಿದ್ದಾರೆ. ಹುಟ್ಟುಹಬ್ಬ, ವಿವಾಹ ವಾರ್ಷಿಕೋತ್ಸವಂತಹ ಕಾರ್ಯಕ್ರಮಗಳನ್ನು ಅದ್ದೂರಿಯಾಗಿ ಆಚರಿಸುವ ಗೀಳು ಅನೇಕರಿಗೆ ಇದೆ. ಇವುಗಳನ್ನು ಸಾಮಾಜಿಕ ಜಾಲತಾಣದಲ್ಲಿ ತಮ್ಮ ಸ್ಟೇಟಸ್ ಹೆಚ್ಚಿಸಿಕೊಳ್ಳಲು ಹಾಕಿಕೊಳ್ಳುತ್ತಾರೆ. ಇವುಗಳನ್ನು ಕಂಡಂತಹ ಮಧ್ಯಮವರ್ಗ ಹಾಗೂ ಕೆಳವರ್ಗದವರಿಗೆ ತಾವೂ ಸಹ ಈ ರೀತಿಯ ಆಚರಣೆ ಮಾಡಬೇಕೆಂಬ ಆಸೆ ಮೂಡುತ್ತದೆ. ಇದರಿಂದ ಒಂದು ರೀತಿಯ ಒತ್ತಡ ಏರ್ಪಾಡಾಗಿ, ಸಾಲವಾದರೂ ಸರಿ ಆಚರಣೆ ಮಾಡಿ ಫೋಟೋ ಹಾಗೂ ವಿಡೀಯೋ ಹಂಚಿಕೊಳ್ಳುತ್ತಾರೆ. ಮಕ್ಕಳ ಹುಟ್ಟುಹಬ್ಬ ಆಚರಣೆಯೂ ಅಷ್ಟೇ, ಯಾರೋ ಹಣವಿರುವವರು ತಮ್ಮ ಮಕ್ಕಳ ಹುಟ್ಟುಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ. ಆದರೆ ಸರಳವಾಗಿ ಆಚರಿಸುವ ಮಧ್ಯಮ/ಕೆಳ ವರ್ಗಗಳ ಕುಟುಂಬಗಳ ಮಕ್ಕಳು ತಮ್ಮ ಮೇಲೆ ತಮ್ಮ ಪೋಷಕರ ಪ್ರೀತಿ ಕಡಿಮೆ ಎಂದು ಭಾವಿಸುವಂತಾಗುತ್ತದೆ. ಇಷ್ಟವಿರಲಿ, ಕಷ್ಟವಿರಲಿ ಅದ್ದೂರಿಯಾಗಿ ಬರ್ತ್‌ಡೇ ಆಚರಿಸುವ ಅನಿವಾರ್ಯತೆ ಉಂಟಾಗುತ್ತದೆ.

ರಸ್ತೆಯಲ್ಲಿ ಸ್ನೇಹಿತರ ಬರ್ತ್‌ಡೇ ಆಚರಿಸುವ ಪರಿಯನ್ನು ವಿವರಿಸಲು ಬೇಸರವಾಗುತ್ತದೆ. ಮೈಸೂರು ಪೇಟ, ಗುಲಾಬಿ ಹಾರ ಹಾಕಿ, ಕೇಕ್ ಕತ್ತರಿಸಿ, ಮುಖಕ್ಕೆಲ್ಲಾ ಮೆತ್ತಿ ಒಂದು ರೀತಿಯ ವಿಕೃತಿಯನ್ನೇ ಮರೆಯುತ್ತಾರೆ. ಮೈಸೂರು ಪೇಟಕ್ಕೆ ಅದರದೇ ಆದ ಘನತೆ, ಪಾವಿತ್ರ್ಯತೆ ಇದೆ. ಅದನ್ನು ಅರಿಯದೆ ಕಂಡಕಂಡವರಿಗೆ ತೊಡಿಸಿ ಹಾಳು ಮಾಡುತ್ತಿದ್ದಾರೆ. ಎಲ್ಲವೂ ತೋರಿಕೆಗಾಗಿ ಮಾಡಿದಂತ ಕಾರ್ಯಕ್ರಮ ಎನಿಸದೇ ಇರದು. ಬರ್ತ್‌ಡೇ ಸನ್ಮಾನ ಸ್ವೀಕರಿಸಿದ ಸ್ನೇಹಿತ ಸುಮ್ಮನೆ ಇರುವ ಹಾಗಿಲ್ಲ. ಪಾರ್ಟಿ ಕೊಡಿಸಬೇಕಾಗುತ್ತದೆ. ಇಂದಿನ ಯುವ ಸಮೂಹದ ಪಾರ್ಟಿ ಕುರಿತು ಹೇಳಬೇಕಿಲ್ಲ. ಅನೇಕ ಯುವಕರು ಈ ತರಹದ ಪಾರ್ಟಿಗಳಲ್ಲಿ ಮಿತಿಯಿಲ್ಲದೆ ಮದ್ಯಪಾನ ಮಾಡಿ ವಾಹನ ಚಲಾಯಿಸಿ ಅಪಘಾತಕ್ಕೆ ಈಡಾಗಿ ಅಮೂಲ್ಯ ಜೀವವನ್ನೇ ಕಳೆದುಕೊಳ್ಳುತ್ತಿದ್ದಾರೆ. ಏನು ತಪ್ಪು ಮಾಡದ ಹೆತ್ತವರು ಸಾಯುವವರೆವಿಗೂ ಕಣ್ಣೀರು ಇಡುವಂತೆ ಮಾಡುತ್ತಾರೆ. ಇಂದಿನ ಯುವ ಸಮೂಹದ ಪುಂಡಾಟಿಕೆ ನೋಡಿದಾಗ ಇದೇನಾ ಸಂಸ್ಕೃತಿ? ಇದೇನಾ ಸಭ್ಯತೆ? ಎಂದು ಕೇಳುವಂತಾಗಿದೆ. ಸ್ನೇಹಿತರ ಹುಟ್ಟುಹಬ್ಬಕ್ಕೆ ಒಳ್ಳೆಯ ರೀತಿಯಲ್ಲೂ ಶುಭ ಹಾರೈಸಬಹುದು, ಪಾರ್ಟಿ ಬದಲು ಒಂದು ಪುಣ್ಯಕ್ಷೇತ್ರ ದರ್ಶನ ಮಾಡಿಬರಬಹುದು. ಇಲ್ಲಿ ಪ್ರೀತಿ ವಿಶ್ವಾಸಕ್ಕಿಂತ ತೋರಿಕೆಯೇ ಅತಿಯಾದ ಕಾರಣ ಇವೆಲ್ಲಾ ಹುಚ್ಚಾಟಗಳು ನಡೆಯುತ್ತವೆ.


ಜಾಲತಾಣಗಳಲ್ಲಿ ಲೈಕ್ ಹಾಗೂ ಕಮೆಂಟ್‌ಗಳನ್ನು ನೋಡಿ ಮೈಮರೆಯಬಾರದು. ಯಾರನ್ನೋ ಮೆಚ್ಚಿಸಿ ಚಪ್ಪಾಳೆ ಗಿಟ್ಟಿಸಲು ನಮ್ಮ ಬದುಕು ನಾಟಕವಾಗಲಿ, ಸಿನೆಮಾ ಆಗಲಿ ಅಲ್ಲ. ನಮ್ಮದು ರಿಯಲ್ ಲೈಫ್, ರೀಲ್ ಲೈಫ್ ಅಲ್ಲ. ಭ್ರಮೆಯಲ್ಲಿ ಬದುಕುವುದನ್ನು ಬಿಡಬೇಕು. ಪ್ರತಿಯೊಂದಕ್ಕೂ ಅದರದೇ ಪಾವಿತ್ರ್ಯತೆ ಇರುತ್ತದೆ, ಅದನ್ನು ಕಾಪಾಡಬೇಕು. ಯಾವುದು ಎಲ್ಲಿರಬೇಕು ಅಲ್ಲಿರಬೇಕು, ಯಾರು ಎಷ್ಟರಲ್ಲಿರಬೇಕು ಅಷ್ಟರಲ್ಲಿರಬೇಕು, ಯಾರ ಹತ್ತಿರ ಏನು ನಿರೀಕ್ಷೆ ಮಾಡಬೇಕೋ ಅದನ್ನು ಮಾತ್ರ ನಿರೀಕ್ಷಿಸಬೇಕು. ಅತಿಯಾದರೆ ಅಮೃತವೂ ವಿಷವಾಗುತ್ತದೆ. ನೈಜ ಭಾವನೆಗಳಿಗೆ ಬೆಲೆ ಕೊಡಬೇಕು. ಎಲ್ಲವನ್ನು ಬಂಧುಬಳಗ ನೀಡುವ ಉಡುಗೊರೆ, ಆಚರಣೆಯಿಂದಲೇ ಅಳೆಯಬಾರದು. ಎಲ್ಲದಕ್ಕಿಂತ ಬದುಕು ಮುಖ್ಯ. ಸಾಮಾಜಿಕ ಜಾಲತಾಣದಲ್ಲಿ ಸ್ಟೇಟಸ್ ಹಾಕಿಕೊಳ್ಳುವುದು ಮುಖ್ಯವಲ್ಲ, ಸಮಾಜದಲ್ಲಿ ಸ್ಟೇಟಸ್ ಹೆಚ್ಚಿಸಿಕೊಳ್ಳುವಂತಹ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ಸಮಾಜಕ್ಕೆ ಆಕರ್ಷಕವಾಗಿ ಕಾಣುವುದು ಮುಖ್ಯವಲ್ಲ, ಆದರ್ಶವಾಗಿರುವುದು ಮುಖ್ಯ. ಏನಂತೀರಿ?

ಪದ ತಾಂಬೂಲ: **ಭ್ರಮೆ ಕೈಕೊಡಬಹುದು, ವಾಸ್ತವ ಎಂದಿಗೂ ಕೈಬಿಡದು.**


ಇಂದು ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ

ಮೈಸೂರು,ಫೆ.18-ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಛತ್ರಪತಿ ಶ್ರೀ ಶಿವಾಜಿ ಮಹಾರಾಜರ ಜಯಂತಿಯನ್ನು ಫೆ.19ರಂದು ಬೆಳಗ್ಗೆ 11.30ಕ್ಕೆ ಕಲಾಮಂದಿರದಲ್ಲಿ ಏರ್ಪಡಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತಿಯಲ್ಲಿ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದು, ಚಾಮರಾಜ ಕ್ಷೇತ್ರದ ಶಾಸಕ ಕೆಹರೀಶ್‌ಗೌಡರು ಅಧ್ಯಕ್ಷತೆ ವಹಿಸಲಿದ್ದಾರೆ. ಪಶು ಸಂಗೋಪನೆ ಮತ್ತು



ರೇಷ್ಮೆ ಸಚಿವ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷ ಅನಿಲ್‌ಕುಮಾರ್ ಉಪಸ್ಥಿತರಿರುವರು. ಮುಖ್ಯ ಅತಿಥಿಗಳಾಗಿ ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್‌ಪ್ರಸಾದ್, ಸುಮಲತಾ ಅಂಬರೀಶ್ ಭಾಗವಹಿಸುವರು. ಶಾಸಕರಾದ ತನ್ವೀರ್‌ಸೇಠ್, ಜಿ.ಟಿ.ದೇವೇಗೌಡ, ರವಿಶಂಕರ್, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ಟಿ.ಎಸ್.ಶ್ರೀವತ್ಸ ಹಾಗೂ ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಎಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಹಿರಿಯ ಸಾಹಿತಿ ಡಾ.ಪ್ರದೀಪ್‌ಕುಮಾರ್ ಹೆಬ್ರಿ ಮುಖ್ಯ ಭಾಷಣಕಾರರಾಗಿ ಆಗಮಿಸಲಿದ್ದಾರೆ.



ಮೈಸೂರು ತಾಲೂಕಿನ ಜಯಪುರ ಹೋಬಳಿಯ ರಾಮನಹುಂಡಿ ಗ್ರಾಮದ ಜಮೀನಿನಲ್ಲಿ ಇಟ್ಟಿದ್ದ ಬೋನ್‌ನಲ್ಲಿ ಶನಿವಾರ ಸುಮಾರು ಎರಡು ವರ್ಷದ ಹೆಣ್ಣು ಚಿರತೆ ಸೆರೆಸಿಕ್ಕಿದೆ. ವೈದ್ಯಕೀಯ ಪರೀಕ್ಷೆ ಬಳಿಕ ಇದನ್ನು ಅರಣ್ಯ ಪ್ರದೇಶದಲ್ಲಿ ಬಿಡುಗಡೆ ಮಾಡಲು ಅರಣ್ಯ ಇಲಾಖೆ ಅಧಿಕಾರಿಗಳು ಕ್ರಮ ವಹಿಸಿದ್ದಾರೆ.

'ಸಿನಿರಮಾ' ರಾಷ್ಟ್ರೀಯ ಕಿರುಚಿತ್ರೋತ್ಸವದ ಸಮಾರೋಪ

ಮೈಸೂರು, ಫೆ.18(ಎಸ್‌ಬಿಡಿ)- ಮೈಸೂರಿನ ಅಮೃತ ವಿಶ್ವವಿದ್ಯಾಪೀಠಂ ಸಂಸ್ಥೆಯ ದೃಶ್ಯ ಸಂವಹನ ವಿಭಾಗದ ವತಿಯಿಂದ ಆಯೋಜಿಸಿದ್ದ 'ಸಿನಿರಮಾ-2024' 6ನೇ ರಾಷ್ಟ್ರೀಯ ಕಿರುಚಿತ್ರೋತ್ಸವದ ವಿಜೇತರಿಗೆ ಸಂಗೀತ ನಿರ್ದೇಶಕ, ಗಾಯಕ ಗುರುಕಿರಣ್ ಹಾಗೂ ನಟ ಲವ್ಲೀ ಸ್ಟಾರ್ ಪ್ರೇಮ್ ಶನಿವಾರ ಸಮಾರೋಪ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಿದರು.



ಮೈಸೂರಿನ ಅಮೃತ ವಿಶ್ವವಿದ್ಯಾಪೀಠಂ ಸಂಸ್ಥೆಯಲ್ಲಿ ಆಯೋಜಿಸಿದ್ದ 'ಸಿನಿರಮಾ-2024' ರಾಷ್ಟ್ರೀಯ ಕಿರುಚಿತ್ರೋತ್ಸವದ ವಿಜೇತರಿಗೆ ಸಂಗೀತ ನಿರ್ದೇಶಕ ಗುರುಕಿರಣ್ ಹಾಗೂ ನಟ ಪ್ರೇಮ್ ಬಹುಮಾನ ವಿತರಿಸಿದರು.

ಈ ವೇಳೆ ಗುರುಕಿರಣ್ ಮಾತನಾಡಿ, ಸಿನಿಮಾ ಕ್ಷೇತ್ರದಲ್ಲಿ ವಿಫುಲ ಅವಕಾಶಗಳಿದ್ದು ಸಿನಿಮಾ ನಿರ್ಮಾಣದಲ್ಲಿ ಆಸಕ್ತಿ ಇರುವವರು ವಿವಿಧ ತಂಡಗಳ ಜೊತೆ ಕಾರ್ಯ ನಿರ್ವಹಿಸಿ ಅನುಭವ ಗಳಿಸಬೇಕು. ಅದು ಸಿನಿಮಾ ವೃತ್ತಿ ಜೀವನಕ್ಕೆ ಭದ್ರ ಬುನಾದಿಯಾಗಲಿದೆ ಎಂದು ಸಲಹೆ ನೀಡಿದರು.

ನಟ ಪ್ರೇಮ್ ಮಾತನಾಡಿ, ಹಿಂದಿನ ದಿನಗಳಲ್ಲಿ ಅವಕಾಶಕ್ಕಾಗಿ ನಾವು ನಿರ್ದೇಶಕರ ಹಿಂದೆ ಅಲೆಯುತ್ತಿದ್ದೆವು. ಆದರೆ ಪ್ರಸ್ತುತ ಪ್ರತಿಭಾವಂತ ಕಲಾವಿದರನ್ನು ನಿರ್ದೇಶಕರುಗಳೇ ಹುಡುಕಿಕೊಂಡು ಬರುತ್ತಿದ್ದಾರೆ. ಕನ್ನಡ ಸಿನಿಮಾ ರಂಗ ಉತ್ತಮ ಕಲಾವಿದರು ಹಾಗೂ ತಂತ್ರಜ್ಞರಿಗೆ ಮುಕ್ತ ಅವಕಾಶಗಳನ್ನು ಕಲ್ಪಿಸುತ್ತಿದೆ. ಕಲಾವಿದರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸಿನಿಮಾ ಮಂದಿರಗಳಿಗೇ ತೆರಳಿ ಸಿನಿಮಾ ನೋಡಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಆಕರ್ಷಕ ನೃತ್ಯ ಪ್ರದರ್ಶಿಸಿದ ಸಂಸ್ಥೆಯ ವಿದ್ಯಾರ್ಥಿಗಳೊಂದಿಗೆ ಗುರುಕಿರಣ್ ಹಾಗೂ ಪ್ರೇಮ್ ಹೆಜ್ಜೆ ಹಾಕಿ ರಂಜಿಸಿದರು. 'ಅಮ್ಮಾ ನಿನ್ನೀ ಜನುಮ...' ಹಾಡಿನ ಮೂಲಕ ಗುರುಕಿರಣ್ ನೆರೆದಿದ್ದವರನ್ನು ಬಾವುಕಗೊಳಿಸಿದರು. ಅಮೃತ ಮೈಸೂರು ಕ್ಯಾಂಪಸ್‌ನ ಅಸೋಸಿಯೇಟ್ ಡೀನ್ ಪ್ರೊ.ಶೇಖರ್ ಬಾಬು, ಪ್ರಾಂಶುಪಾಲ ಡಾ.ಜಿ.ರವೀಂದ್ರನಾಥ್, ಮೈಸೂರು ಕ್ಯಾಂಪಸ್‌ನ ನಿರ್ದೇಶಕ ಬ್ರಹ್ಮಚಾರಿ ಅನಂತಾನಂದ ಚೈತನ್ಯ, ಸಂಚಾಲಕ ಬ್ರಹ್ಮಚಾರಿ ಮುಕ್ತಿದಾಮೃತ ಚೈತನ್ಯ, ದೃಶ್ಯ ಸಂವಹನ ವಿಭಾಗದ ಮುಖ್ಯಸ್ಥ ಡಾ.ಮೌಲ್ಯ ಬಾಲಾಡಿ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

'ಸಿನಿರಮಾ'ದಲ್ಲಿ ದೇಶದ ವಿವಿಧ ವಿಶ್ವವಿದ್ಯಾಲಯಗಳು, ಕಾಲೇಜುಗಳು ಹಾಗೂ ಫಿಲ್ಮ್ ಮೇಕಿಂಗ್ ಸ್ಕೂಲ್‌ಗಳು ಭಾಗವಹಿಸಿದ್ದವು. ನೋಂದಣಿಯಾಗಿದ್ದ 100ಕ್ಕೂ ಹೆಚ್ಚು ಕಿರುಚಿತ್ರಗಳಲ್ಲಿ ಕೆಲವನ್ನು ಪ್ರದರ್ಶಿಸಲಾಯಿತು. ಸಿನಿಮಾ ಕ್ಷೇತ್ರಕ್ಕೆ ಸಂಬಂಧಿಸಿದ ಕಾರ್ಯಾಗಾರ ಹಾಗೂ ಸಂವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಅತ್ಯುತ್ತಮ ಕಿರುಚಿತ್ರ ವಿಭಾಗದಲ್ಲಿ ಪಂಖೋಲ್(ಮರಾಠಿ- ನಿರ್ದೇಶಕ ಪರಾಗ್ ಸಾವಂತ್) ಪ್ರಥಮ, ಕರ್ಪಿ(ತಮಿಳು - ಆರ್.ಪ್ರೇಮ್ ಕುಮಾರ್) ದ್ವಿತೀಯ, ದ್ವಯಂ (ಮಲಯಾಳಂ-ಅನಂತು ರಮೇಶ್) ತೃತೀಯ ಬಹುಮಾನ ಪಡೆದಿವೆ ವಿಶೇಷ ವಿಭಾಗದಲ್ಲಿ ಪಂಖೋಲ್ ಚಿತ್ರದ ಪ್ರದೀಪ್ ಪಾಟೀಲ್ ಅತ್ಯುತ್ತಮ ಸಂಕಲನಕಾರ, ದ್ವಯಂ ಚಿತ್ರದ ಅನಂತು ರಮೇಶ್ ಅತ್ಯುತ್ತಮ ನಿರ್ದೇಶಕ, ಪಂಖೋಲ್ ಚಿತ್ರದ ಪರಾಗ್ ಸಾವಂತ್ ಅತ್ಯುತ್ತಮ ಛಾಯಾಗ್ರಾಹಕ ಕರ್ಪಿ ಚಿತ್ರದ ಭಾನುಪ್ರಿಯ ಅತ್ಯುತ್ತಮ ನಟಿ, ತುಣೈ(ತ) ಚಿತ್ರದ ವಿಘ್ನೇಶ್ ಪರಮಶಿವಂ ಉತ್ತಮ ಕಥೆ ಪ್ರಶಸ್ತಿಗೆ ಭಾಜನರಾದರು.

ಎಸ್.ನಾಗಶ್ರೀಗೆ ಪಿಎಚ್.ಡಿ ಪದವಿ



ಮೈಸೂರು: ಡಾ.ಎಂ.ಚೇತನ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಜೀವರಸಾಯನಶಾಸ್ತ್ರ ವಿಭಾಗದ ಸಂಶೋಧನಾ ವಿದ್ಯಾರ್ಥಿನಿ ಎಸ್.ನಾಗಶ್ರೀ ಅವರು ಸಂಶೋಧನೆ ನಡೆಸಿ ಸಾದರಪಡಿಸಿದ 'ಸ್ಟಡೀಸ್ ಆನ್ ಕ್ಯಾಂಥೋಫಿಲ್ ಅನಲಾಗ್ಸ್ ಆ್ಯಸ್ ಪೊಟೆನ್ಷಿಯಲ್ ಆಂಟಿ ಒಬೆಸಿ ಏಜೆಂಟ್ಸ್' ಮಹಾಪ್ರಬಂಧವನ್ನು ಜೀವರಸಾಯನಶಾಸ್ತ್ರ ವಿಷಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಪ್ರವೀಣ್‌ಕುಮಾರ್

ಡಾ.ಬಿ.ನಾಗರಾಜು ಅವರ ಮಾರ್ಗದರ್ಶನದಲ್ಲಿ ಎಸ್.ಪ್ರವೀಣ್‌ಕುಮಾರ್



ಅವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ
ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

SITES FOR SALE
JP Nagar Ring Road
20 x 30 - 17 Lakhs,
30 x 40 - 33 Lakhs,
Near Gurur Bus Stop, Ramabainagar,Mysore.
DTCP approved (Corporation limits)
1.5 Kms from JP Nagar Ring Road
8660105902

Sai Nalanda Central School,
K.R. Nagar-571 602
WANTED TEACHER
1) B.A. B.Sc. / M.A. M.Sc, with B.Ed.
2) BCA, MCA / M.Sc in Computer & NTT
3) Drivers for school bus. 4) Security.
Free accommodation.
nalandakrn@gmail.com,
Web: www.sainalanda.com. Contact:
8722093456 & 8722073456

SHOP FOR LEASE
8123532073

ಕೆಲಸಕ್ಕೆ ಬೇಕಾಗಿದ್ದಾರೆ
ಶ್ರೀ ಮಹಾದೇಶ್ವರ ಸೂಪರ್ ಸರ್ವೀಸ್ (HPCL) ಪೆಟ್ರೋಲ್ ಬಂಕ್) ವಿವೇಕಾನಂದ ಸರ್ಕಲ್ ಬಳಿ, ವಿವೇಕಾನಂದನಗರ, ಮೈಸೂರು–570023.
ಸಂಪರ್ಕಿಸಿ:
8951195363
7259849439

HOME APPLIANCES SERVICE
ಫ್ರಿಡ್ಜ್, ವಾಶಿಂಗ್‌ಮೆಶೀನ್, ಮೈಕ್ರೋ ಪೋವೆನ್, ಎಲ್‌ಸಿಡಿ, ಸೋಲಾರ್, ಯುಪಿಎಸ್, ಗೀಸರ್, ಸರ್ವೀಸ್, ನಿಮ್ಮ ಮನೆಯ ಹತ್ತಿರ ದೊರೆಯುತ್ತದೆ.
Contact: Srinivas
9379699229

ಅನುಭವವುಳ್ಳ ಸಿವಿಲ್ ಲೇಬೌಟ್ ಕಂಟ್ರಾಕ್ಟರ್ ಬೇಕಾಗಿದ್ದಾರೆ
7619272225
9686600588

House for Rent
30x50 house, double bedroom ground & first floor with car parking, Naidu Nagar, Mysuru. Contact:
Prop: 9380705968

ಸಪ್ತಪದಿ
ಹಿಂದು ವಧು–ವರರ ಮಾಹಿತಿ ಕೇಂದ್ರ
8 ವರ್ಷದ ಸೇವೆಯೊಂದಿಗೆ
BE, MBA, M.Tech, MBBS/ MD/MS, PhD ಎಲ್ಲಾ ಡಿಗ್ರಿಯ India/USA/Australia/Canda/ Germany / Mysore/ Bangalore
ರಿಜಿಸ್ಟ್ರೇಷನ್‌ಗಾಗಿ ಸಂಪರ್ಕಿಸಿ
9663199511

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗೆ ಯುವಕ ಯುವತಿಯರು ತಕ್ಷಣ ಬೇಕಾಗಿದ್ದಾರೆ.
Salary: 13,000- 21,000+ ESI, PF
ವಿದ್ಯಾರ್ಹತೆ: 10th, PUC, ITI, Diploma & Any Degree
ಇಂದೇ ಸಂಪರ್ಕಿಸಿ:
9035734821

ಸೈಟುಗಳು ಮಾರಾಟಕ್ಕಿವೆ
ವಿಜಯನಗರ 4ನೇ ಹಂತ 2ನೇ ಘಟ್ಟಕ್ಕೆ ಹೊಂದಿಕೊಂಡಂತಿರುವ ಮುಡಾ ಅನುಮೋದಿತ ಸೈಟುಗಳು ಅತೀ ಕಡಿಮೆ ಬೆಲೆಗೆ ಕೆಲವು ಸೈಟುಗಳು ಮಾತ್ರ ಮಾರಾಟಕ್ಕಿವೆ. ತಕ್ಷಣವೇ ಸಂಪರ್ಕಿಸಿ:
Mob: 6360633036

ಸೈಟುಗಳು ಮಾರಾಟಕ್ಕಿವೆ
ಮೈಸೂರು–ನಂಜನಗೂಡು ರಸ್ತೆಯ ತಾಂಡವಪುರದ ಹತ್ತಿರ TVS ನಗರದ ಸಮೀಪ ಮುಡಾ ಸೈಟುಗಳು ಅತೀ ಕಡಿಮೆ ಬೆಲೆಯಲ್ಲಿ ಮಾರಾಟಕ್ಕಿವೆ. ತಕ್ಷಣವೇ ಸಂಪರ್ಕಿಸಿ:
Mob: 9353843772

Tally Operator Required
Experienced 2-5 years in Purchase & Sales Entry, Accounting & Managing statements. Salary based on experience.
8861718069, 9449942594

ಸೈಟುಗಳು ಮಾರಾಟಕ್ಕಿವೆ
ಬನ್ನೂರು ರಸ್ತೆಯ ವಾಜಮಂಗಲದಲ್ಲಿ ಅತೀ ಕಡಿಮೆ ಬೆಲೆಯ ಮುಡಾ ನಿವೇಶನಗಳು ಮಾರಾಟಕ್ಕಿವೆ. ತಕ್ಷಣವೇ ಸಂಪರ್ಕಿಸಿ:
Mob: 8431146597

ತಕ್ಷಣವೇ ಸೈಟುಗಳು ಬೇಕಾಗಿವೆ
ಇಲವಾಲದ ಸುತ್ತಮುತ್ತ 30x40 ಅಳತೆಯ (ಮುಡಾ ಅಥವಾ ಡಿ.ಟಿ.ಸಿ.ಪಿ.) 25 ರಿಂದ 40 ಸೈಟುಗಳು ಒಂದು ಹೆಸರಾಂತ ಕಂಪನಿಗೆ ಬೇಕಾಗಿವೆ. ತಕ್ಷಣವೇ ಸಂಪರ್ಕಿಸಿ:
Mob: 7892183401

ಬೇಕಾಗಿದ್ದಾರೆ
ಮೈಸೂರು ಕೆಫೆಗೆ ಕಾಫಿ, ಟೀ, ಜ್ಯೂಸ್, ಐಸ್‌ಕ್ರೀಮ್, ಚಾಟ್ಸ್ ಮೇಕರ್ಸ್ & ವರ್ಕರ್ಸ್ ಬೇಕಾಗಿದ್ದಾರೆ.
Girls & Boys, Ladies, (Food & Room Free)
7975755792

ಬೇಕಾಗಿದ್ದಾರೆ
ಮೈಸೂರು ನಗರದಲ್ಲಿರುವ ಗೋಕುಲಂ, ಹೆಬ್ಬಾಳು ಏರಿಯಾದಲ್ಲಿ ಕೆಲಸ ಮಾಡಲು ಅಭ್ಯರ್ಥಿಗಳು ಬೇಕಾಗಿದ್ದಾರೆ.
1) ಸೆಕ್ಯೂರಿಟಿ ಗಾರ್ಡ್ಸ್ (Male 12 Hrs, SSLC Pass/Fail)
2) ಸೆಕ್ಯೂರಿಟಿ ಸೂಪರ್‌ವೈಸರ್ (Male 8 Hrs, SSLC PUC, Below 50Yrs
3) ಸ್ಟೀವರ್ಡ್ಸ್ 4) ಹೌಸ್‌ಕೀಪಿಂಗ್(ಹುಡುಗರು) (Male, SSLC / PUC below 30 Yrs)
ಕಛೇರಿ ಸಮಯ: 10am to 6pm
9739199355, 9844235981

ಸುವರ್ಣ ಯಾತ್ರ
7 ದಿನಗಳು ಭೂತಾನ್ ಪ್ರವಾಸ 11/4/24 ಕಾಶಿ ಆಯೋಧ್ಯ ಪ್ರವಾಸ 22/3/24
7 ದಿನಗಳು ಚಾರ್ಧಾಮ್ ಯಮುನೋತ್ರಿ, ಗಂಗೋತ್ರಿ, ಕೇದಾರ್‌ನಾಥ್, ಬದ್ರಿನಾಥ್ ಯಾತ್ರಾ 13 ದಿನಗಳು 8/5/24
9019462508
8660233673

MUDA & RERA APPROVED 30X40 SITE FOR SALE
West Facing @ 2300/Sqft
North Facing @ 2500/Sqft
Near KIT Eng. Collage, Next to Lalbahadur Shastri Nagar, Off. T-Narasipura Main Road, Immediate Registration & Bank Loan Available
7337-786-007

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

HOME LOANS
CORPORATION, MUDA, KHB
GRAMATHANA PROPERTY
Site Purchase, Site Construction
House Purchase
Site Mortgage, house Mortgage
Contact: 9108416410

ಬೈಕ್ ರೈಡರ್ ಬೇಕಾಗಿದ್ದಾರೆ
ರಾಪಿಡೋ ರೈಡರ್ ಆಗಿ ಸೇರಿ ಹಾಗೂ ದಿನಕ್ಕೆ 1500/– ವರೆಗೂ ಸಂಪಾದಿಸಿ ಅಗತ್ಯ ದಾಖಲೆಗಳು DL ವಾಹನದ ದಾಖಲಾತಿಗಳು ಮತ್ತು ಆಧಾರ್ ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ
04048937617

MUDA APPROVED SITE, BOGADI ROAD
28x30, 30x40
West & Corner 2 Sites
Price - 47/63 Lakhs
Near Trends Apartment
8660105902

WANTED
1) Accountant - (M&F)
* Experience - 1 to 2 Years
* Education : Any Degree
* Skills - Tally ERP-9, GST, M.S.Office
* Good Salary
2) Sales Mans
* Education: PUC/Degree/10th
Sri Sairam Furnitures
8217411158

WANTED FIELD SERVICE TECHNICIAN
TWO WHEELER COMPULSORY
Qualification - ITI, PUC
Location - Mysore
9035434820

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ರಿಯಾಯಿತಿ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

DTCP SITES FOR SALE
DTCP Sites
Rs. 699 per sq.ft.,
Near Jayapura, H.D. Kote Road, Mysore.
9590491194,9606783264

ವಿಠಲ್ ರೆಕಾರ್ಡ್ಸ್ ಪ್ರೈವೇಟ್ ಲಿಮಿಟೆಡ್
ಖಾಲಿ ಹುದ್ದೆ: 150+
DATA ENTRY OPERATOR
ಸಂಬಳ 10,000 + 5000 Incentive
ಸಂದರ್ಶನದ ಸಮಯ: 9.30 ರಿಂದ 5.30.
ವಿಳಾಸ: #42, JCK ಇಂಡಸ್ಟ್ರಿಯಲ್ ಪಾರ್ಕ್, ಮೇಟಗಳ್ಳಿ ಪೋಸ್ಟ್, ಪ್ರೀತಿ ಗ್ರಾನೈಟ್ ಹತ್ತಿರ, ಕೆ.ಆರ್.ಎಸ್. ರಸ್ತೆ, ಮೈಸೂರು–570 016. ಕರೆ ಮಾಡಿ:
Mob: 8867064586

ಫ್ರಿಡ್ಜ್, ವಾಷಿಂಗ್ ಮಷಿನ್, ಮೈಕ್ರೋ ಓವನ್, LCD, LED Tvs
Doorstep Service
Mob: 9886226672

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಮತ್ತು ಮೈಸೂರಿನಾದ್ಯಂತ ಪ್ರಸಿದ್ಧ MNC ಕಂಪನಿಗಳಿಗೆ ಕಂಪನಿ ಕೆಲಸಕ್ಕೆ ಆಫೀಸ್ ಕೆಲಸಕ್ಕೆ ಮತ್ತು ವರ್ಕ್ ಫ್ರಂ ಹೋಂ ಕೆಲಸಕ್ಕೆ ತಕ್ಷಣ ಯುವಕ, ಯುವತಿಯರು ಬೇಕಾಗಿದ್ದಾರೆ. ಯಾವುದೇ ಎಜ್ಯುಕೇಷನ್ ಯಾವುದೇ Age ಲಿಮಿಟ್ ಇಲ್ಲ. Salary (18000 to 38000rs) ಇರುತ್ತದೆ. ಹೆಚ್ಚಿನ ಮಾಹಿತಿಗೆ ಇಂದೆ ಸಂಪರ್ಕಿಸಿ. H.R. Madam
9886365585
8296278130

ಬೇಕಾಗಿದ್ದಾರೆ
ಲಾಡ್ಜ್‌ನಲ್ಲಿ ಕೆಲಸ ಮಾಡಲು Room Boys ಬೇಕಾಗಿದ್ದಾರೆ. ಊಟ/ವಸತಿ ವ್ಯವಸ್ಥೆ ಇರುತ್ತದೆ. ಹೋಟೆಲ್ ದಿವಾನ್ ರೆಸಿಡೆನ್ಸಿ, ದಿವಾನ್ ರಸ್ತೆ, (ಹೋಟೆಲ್ ಶ್ರೀಂಗಾರ್ ಎದುರು) ಮೈಸೂರು
9845155940

100% TEAK WOOD
FACTORY FINISH DOORS & FRAMES
@ FACTORY DEPOT RATES

10 YEARS WARRANTY* ISI
9845426862
9901291267

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ಸ್ (ಹೂಟಗಳ್ಳಿ, ಬನ್ನಿಮಂಟಪ, ಸುತ್ತೂರು)
2) ಹೌಸ್‌ಕೀಪಿಂಗ್ (ಮೇಟಗಳ್ಳಿ, ಹಿನಕಲ್)
ESI + PF ಸೌಲಭ್ಯವಿರುತ್ತದೆ.
Mob: 9739166772

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8861401315

ಕಳೆದಿದೆ
ಆವೀಶ ಹೆಚ್.ಎಂ., ಲೀಲಾವತಿ ಬಡಾವಣೆ, ಮದ್ದೂರು ಟೌನ್, ಮಂಡ್ಯದಲ್ಲಿ ವಾಸ ವಾಗಿದ್ದು 2016ನೇ ಸಾಲಿನಲ್ಲಿ ಮೈಸೂರಿನ ಕೆಹೆಚ್‌ಬಿ ವತಿಯಿಂದ ಮಂಜೂರಾಗಿದ್ದ ನಿವೇಶನದ Sale Deed No. MYW-01-04176-2016-17 ದಾಖಲೆಯು ಮನೆ ಸ್ವಚ್ಛಗೊಳಿಸುವ ಸಮಯ ದಲ್ಲಿ ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ.
Mob: 8105366941

ಉದ್ಯೋಗವಕಾಶ
ಮೈಸೂರಿನ ಪ್ರತಿಷ್ಠಿತ ಆಸ್ಪತ್ರೆ ಮತ್ತು ಹೋಟೆಲ್‌ಗಳಲ್ಲಿ 1) ಆಯಾ ಕೆಲಸಕ್ಕೆ ಮಹಿಳೆಯರು ಮತ್ತು ವಾರ್ಡ್ ಬಾಯ್ಸ್, 2) ಹೌಸ್ ಕೀಪಿಂಗ್ ಸೂಪರ್‌ವೈಸರ್, 3) ಹೌಸ್ ಕೀಪಿಂಗ್ ಕೆಲಸಕ್ಕೆ ಹುಡುಗರು ಮತ್ತು ಮಹಿಳೆಯರು, 4) ಸೆಕ್ಯೂರಿಟಿ ಗಾರ್ಡ್ಸ್, ಸೆಕ್ಯೂರಿಟಿ ಸೂಪರ್‌ವೈಸರ್ ಕೆಲಸಕ್ಕೆ ಬೇಕಾಗಿದ್ದಾರೆ. ಯಾವುದೇ ಶುಲ್ಕ ಇರುವುದಿಲ್ಲ. ಉತ್ತಮ ಸಂಬಳ ಮತ್ತು ESI, PF ಸೌಲಭ್ಯವಿರುತ್ತದೆ.
8884286321, 8884286123
8884339446

MUDA APP SITE KAMADHENU LAYOUT, SRIRAMPURA
30x40
East South Corner Site
Price - 64 Lakhs
Within Ring Road
8660105902

SITES FOR SALE
30x40, East Facing MUDA and RERA Approved Sites for Sale In Bogadi Road & Bank Loan Also Available
7795551693

ಬೇಕಾಗಿದ್ದಾರೆ
ಬೋಗಾದಿ ಹತ್ತಿರ ಇರುವ ಅಪಾರ್ಟ್ ಮೆಂಟ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ನುರಿತ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ESI & PF ಸೌಲಭ್ಯವಿರುತ್ತದೆ.
ವಿದ್ಯಾರ್ಹತೆ: SSLC.
8073642734, 9035050654

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.
9731891409

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

ಟೈಲರ್‌ಗಳು ಬೇಕಾಗಿದ್ದಾರೆ.
ಲೇಡಿಸ್ ಮೇಕರ್ಸ್
ಕುವೆಂಪುನಗರ, ಮೈಸೂರು
8217316783

ಬೇಕಾಗಿದ್ದಾರೆ /Wanted
ಮೈಸೂರಿನ ಕಾಳಿದಾಸ ರಸ್ತೆ, ಪಂಚವಟಿ ಸರ್ಕಲ್ ಹತ್ತಿರ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್‌ಗೆ ಅನುಭವವುಳ್ಳ (1) ಸೌತ್ ಅಡುಗೆ ಭಟ್ರು South Indian chef, (2) ಸಪ್ಲೈಯರ್, ವೇಟರ್ Indian Chef All rounder ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಬಳ, ವಸತಿ ಹಾಗೂ ESI ಉತ್ತಮ ಸೌಲಭ್ಯಗಳನ್ನು ನೀಡಲಾಗುತ್ತದೆ. ಸಂಪರ್ಕಿಸಿ:
9019916266

ಮನೆ ಬಾಡಿಗೆಗೆ
3 BHK
ದಟ್ಟಗಳ್ಳಿ 3ನೇ ಸ್ಟೇಜ್ (ಭೋಗ್ಯಕ್ಕೆ ಇಲ್ಲ)
9738683107
9916173160

HOUSE FOR LEASE
8123532073

2.5 BHK HOME INTERIORS @
₹ 2.5 Lacs*
Home Space Mart
TALK TO OUR DESIGN TEAM
8197310113

ವಿ.ಕೆ.ಎಂಟರ್‌ಪ್ರೈಸಸ್
ಗ್ಯಾಸ್ ಪೈಪ್‌ಲೈನ್ ಮತ್ತು ಗ್ಯಾಸ್ ಸುರಕ್ಷತೆ ಸೇವೆ ಗಿರೀಶ್‌ಗೌಡ ಬಿ.ವಿ. ಲೈಸೆನ್ಸ್ ಹೊಂದಿರುವವರು
www.gaspiplinemysore.in
9686594241
9019094163

ಚಾಮುಂಡೇಶ್ವರಿ ಮ್ಯಾರೇಜ್ ಬ್ಯೂರೋ
ಒಕ್ಕಲಿಗ, ಮಡಿವಾಳ, ಕುಂಬಾರ, ಕೂರ್ಗಿ, ಬಲಿಜ ನಾಯ್ಡು, ತಮಿಳು, ಲಿಂಗಾಯತ್, ಬ್ರಾಹ್ಮಣ, SC ಲೆಫ್ಟ್ Engg. ಹಾಗೂ ಈಡಿಗ, ವಿಶ್ವಕರ್ಮ, ಈಡಿಗ, ನಾಯಕ, ದೇವಾಂಗ, ಮೊದಲನೇ ಮತ್ತು 2ನೇ ಮರು ಮದುವೆಯಾಗುವ ವಧುವರರು ಫೋಟೋ ವಾಟ್ಸಪ್ ಮಾಡಿ (55 ವರ್ಷ ವಿಧವೆಗೆ ವರಬೇಕು. (Caste No Bar)
8951241381

ಲಾವಣ್ಯ ಗೌಡಾಸ್ ವಧು–ವರರ ಮಾಹಿತಿ ಕೇಂದ್ರ
PUC, BA, BSc, B.Com, MA, MSc, M.Com, MBA, Doctors, Engineer ಇತರೆ ವಿದ್ಯಾರ್ಥತೇಯ ವಧು–ವರರ ವಿವಾಹ ನೊಂದಣಿಗೆ ಕರೆ ಮಾಡಿ
91647-43059

WANTED URGENT
ಯುವಕರು – 8, ಯುವತಿಯರು– 4 ಅವಕಾಶಗಳು ಮಾತ್ರ Age (18-24) Only Freshers, 10th, PUC, BBM ಯಾದ Earn (8500/- 16500/-) PM ಯಾವುದೇ ಶುಲ್ಕ ಇರುವುದಿಲ್ಲ. ಪರಸ್ಥಳದವರಿಗೆ ಮಾತ್ರ ವಸತಿ!
Meet Today Join Tomorrow
SPRINGS MYSORE,
MEET US (11 AM to 3PM)
KAVYA- 9342827788

ಮನೆ ಬಾಡಿಗೆಗೆ ಇದೆ
ಚಾಮುಂಡಿವಿಹಾರ ಲೇಔಟ್ ಚಾಮುಂಡಿವಿಹಾರ ಸ್ಟೇಡಿಯಂ ಹಿಂಭಾಗ, ನಜರ್‌ಬಾದ್
2 BHK, Ist Floor, Fully Furnished
8105896904
9845734058

ಸೈಟು ಮಾರಾಟಕ್ಕಿದೆ
36x50 ಪೂರ್ವ ದಿಕ್ಕು ಶಿಕ್ಷಕರ ಬಡಾವಣೆ ಮೈಸೂರು, ಯರಗನಹಳ್ಳಿ, ನಗರ ಪಾಲಿಕೆ, ವ್ಯಾಪ್ತಿಗೆ ಸೇರುವ ನಿವೇಶನ
8711880861

ಬೇಕಾಗಿದ್ದಾರೆ
ಸ್ವಚ್ಛತಾ ಕೆಲಸಗಾರರು (ಪುರುಷರು) House Keeper ವೇತನ 12500/– + ವಾರದ ರಜೆ, ಇಎಸ್‌ಐ, ಪಿ.ಎಫ್ ಸೌಲಭ್ಯವಿರುತ್ತದೆ. ಸಂಪರ್ಕಿಸಿ: ಕರ್ನಾಟಕ ಸೆಕ್ಯೂರಿಟಿ ಏಜೆನ್ಸಿ ನಂ.513, ಬುಲೆಟ್ ಷೋರೂಂ ಹತ್ತಿರ, ಕೆ.ಎನ್.ಅಗ್ರಹಾರ, ಮೈಸೂರು
0821-4247385

ಜಮೀನು ಮಾರಾಟಕ್ಕಿದೆ
ತೇಗದ ಮರ ಮತ್ತು ತೆಂಗಿನ ಮರಗಳಿರುವ 21 ಮತ್ತು 16 ಗುಂಟೆ ಜಮೀನು ಮಾರಾಟಕ್ಕಿದೆ. ಸ್ಥಳ: ಶೆಟ್ಟಿಹಳ್ಳಿ, ಕಡಬೂರು ಪೋಸ್ಟ್, ಹುಲ್ಲಹಳ್ಳಿ, ನಂಜನಗೂಡು ಫಾರ್ಮ್‌ಹೌಸ್ ಮಾಡಿಕೊಳ್ಳಲು ಸೂಕ್ತವಾದ ಜಾಗ ನಂಜನಗೂಡಿನಿಂದ 25 ಕಿ.ಮೀ. ದೂರ ಹುಲ್ಲಹಳ್ಳಿ ಮಾರ್ಗವಾಗಿ ಶೆಟ್ಟಿಹಳ್ಳಿ ತಲುಪಬೇಕು.
9480420666

ಮನೆ ಬಾಡಿಗೆಗೆ
30x40
ಮಾನಸಿನಗರ (ದೇವೇಗೌಡ ಸರ್ಕಲ್, ಬನ್ನೂರು ರಸ್ತೆ,) ಮೈಸೂರು
9480168137
8453308930

ನಿವೃತ್ತ ನೌಕರರಿಗೆ ಉದ್ಯೋಗಾವಕಾಶ ಸೆಮಿನಾರ್
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Benifits : Fixed Salary + PF + ESI + ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು 1) ಫೋಟೊ 2) ಪಾನ್‌ಕಾರ್ಡ್ 3) ಆಧಾರ್ ಕಾರ್ಡ್, 4) ಬ್ಯಾಂಕ್ ಪಾಸ್‌ಬುಕ್. ಸ್ಥಳ, ದಿನಾಂಕ ಮತ್ತು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ.
7795039992

ಸಂಜೀವಿನಿ ಆಯುರ್ವೇದ
ಮಹಿಳೆಯರಿಗೆ ಮುಖದಲ್ಲಿ ಬಂಗು, ಕಪ್ಪುಕಲೆಗಳಿಗೆ 100% ಆಯುರ್ವೇದ ಚಿಕಿತ್ಸೆಗೆ ಕೂಡಲೇ ಕರೆ ಮಾಡಿ
9449408551

SITE FOR SALE
36x48 Byrapur New Extension (Thriveninagar) T.Narasipura
Rs.2500 Per Sqft. (Negotiable)
(NO BROKERS)
9449067640

ಬೇಕಾಗಿದ್ದಾರೆ
ವೃದ್ದರು ರೋಗಿಗಳನ್ನು ಆರೈಕೆ ಮಾಡಲು ಯುವಕ /ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ ಉಚಿತ ಊಟ ವಸತಿಯೊಂದಿಗೆ 16,000 ರಿಂದ 20,000ವರೆಗೆ
7411304177, 7411304176

HOUSE FOR SALE
@ Muda Layout 2+1, BHK 20x30 South Facing Site East Facing Door, Shanthaveri gopalgowda Nagar, Mysore
9738884777
9740019514

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ ಮತ್ತು ಜಯನಗರ ಅಪೋಲೋ ಆಸ್ಪತ್ರೆ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC, ಸಂಬಳ: 19000
ESI & PF ಊಟ ತಿಂಡಿ ಸೌಲಭ್ಯವಿರುತ್ತದೆ.
9620667819
9620777819

WANTED
Pharmacist
Receptionist
Typist
Accountant (Tally)
For Bhanavi Hospital
9972982665

ಬೇಕಾಗಿದ್ದಾರೆ
ಲೇಡಿಸ್ PG ಯಲ್ಲಿ ಅಡುಗೆ ಕೆಲಸಕ್ಕೆ, ಸಹಾಯಕಿ ಬೇಕಾಗಿದ್ದಾರೆ. ಊಟ ವಸತಿ ಇರುತ್ತದೆ. ಕಡ್ಡಾಯವಾಗಿ PGಯಲ್ಲೆ ಉಳಿಯಬೇಕು.
9164427143
7411223692

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಕಂಪನಿಗಳಿಗೆ ಶೋರೂಂಗಳಿಗೆ ಮತ್ತು ಆಫೀಸ್‌ಗಳಿಗೆ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ. Any Qualification, 7th, 10th, PUC, ITI, Degree (Pass/Fail), ಆದವರಿಗೆ ಅರ್ಹತೆಯ ತಕ್ಕಂತೆ ಕೆಲಸ ಸಂಬಳ 15,000 ರಿಂದ 38,000 (ESI+PF+OT)
9513829246
6364103418

ಬೇಕಾಗಿದ್ದಾರೆ
ಸೇಲ್‌ನಲ್ಲಿ ಅನುಭವವುಳ್ಳವರು ಫರ್ನಿಷಿಂಗ್ ಅಂಗಡಿಗೆ ಬೇಕಾಗಿದ್ದಾರೆ.
ಸಂಬಳ: 12 ರಿಂದ 20 ಸಾವಿರ
ಇರ್ವಿನ್ ರಸ್ತೆ ಮತ್ತು ಶಾರದಾದೇವಿನಗರ
8050744784

25x40
Vidyaranyapuram Semi-Commercial Site, West South Corner Old Demolish House for Sale, Price - 76 Lakhs Near Central Library Ground
8660105902

ಬೇಕಾಗಿದ್ದಾರೆ
ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ.
Salary + OT
18800/- 68000/-
9964435081
9731029241

ಬೇಕಾಗಿದ್ದಾರೆ
ಮೈಸೂರಿನ ಸರಸ್ವತಿಪುರಂ ರಿಯಲ್ ಎಸ್ಟೇಟ್ ಕಛೇರಿಯಲ್ಲಿ ಕಛೇರಿ ಸಹಾಯಕಿಯಾಗಿ ಕೆಲಸ ಮಾಡಲು ಮಹಿಳಾ ಸಹಾಯಕಿ ಬೇಕಾಗಿದ್ದಾರೆ. ಕಂಪ್ಯೂಟರ್ ಜ್ಞಾನದ ಅವಶ್ಯಕತೆವಿರುವುದಿಲ್ಲ. ವಿದ್ಯಾರ್ಹತೆ ಪಿಯುಸಿ. ಸಂಪರ್ಕಿಸಿ:
9449636424

WANTED
ಮೈಸೂರಿನ ಹೆಸರಾಂತ ಕಂಪನಿಗಳಿಗೆ Cashier, Billing Acccountant Reptionist, Data Entry, Telecalling, Team Leader, Q/C Packing, Helper, Drivers, ಬೇಕಾಗಿದ್ದಾರೆ. 7th, 10th, ITI, Diploma, Any Degree BA, BCom, MA, M.Com, MSc, Pass & Fail ಯುವಕ ಯುವತಿಯರು ಬೇಕಾಗಿದ್ದಾರೆ. (ESI+PF+OT) ನೊಂದಿಗೆ ಸಂಬಳ: 16000/- ರಿಂದ 30000 /-
9035143190, 9916641959

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ KRS Road ಕೆಲಸ ನಿರ್ವಹಿಸಲು ಪುರುಷರು ITI ಹಾಗೂ Helper (7th, 8th, 9th or 10th Pass) ಬೇಕಾಗಿದ್ದಾರೆ. ಒಳ್ಳೆಯ ವೇತನ ಹಾಗೂ ಇ.ಎಸ್.ಐ. ಪಿಎಫ್ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
9611238376
6360469984,9008912479

ಅನುಬಂಧ ಮ್ಯಾರೇಜಸ್
ವಧುವರರನ್ನು ಹುಡುಕಲು ಸಹಾಯ ಬೇಕೆ? ನಮಗೆ ಕರೆ ಮಾಡಿ
6361740552
ನಮ್ಮ ಸಂಸ್ಥೆಗೆ ಕೆಲಸ ಮಾಡಲು ವಿದ್ಯಾವಂತ ಯುವತಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೇರ ಸಂಪರ್ಕಿಸಿ:

ಶ್ರೀ ಪುಟ್ಟಸ್ವಾಮಿ ಚಿಟ್ ಫಂಡ್ಸ್ ಪ್ರೈವೇಟ್ ಲಿಮಿಟೆಡ್
"ಸರ್ಕಾರದಿಂದ ಮಾನ್ಯತೆ ಪಡೆದಿದೆ"
1 ಲಕ್ಷದಿಂದ 10 ಲಕ್ಷದವರೆಗಿನ ಚೀಟಿಗಳು ಪ್ರಾರಂಭವಾಗಿದೆ.
ಸಮಯ: ಬೆಳಿಗ್ಗೆ 10 ರಿಂದ ಸಂಜೆ 6 ವರೆಗೆ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
8747965423



ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತು ಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ
ರೂ. 630 ಮಾತ್ರ

ಮೇಲುಕೋಟೆಯಲ್ಲಿ ರಥಸಪ್ತಮಿ ಜಾನಪದ ಕಲಾ ವೈಭವ




ಮೇಲುಕೋಟೆಯಲ್ಲಿ ರಥಸಪ್ತಮಿಯಂದು ನಡೆದ ಜಾನಪದ ಉತ್ಸವದಲ್ಲಿ ಭಾಗವಹಿಸಿರುವ ಕಲಾತಂಡಗಳು.

ಮೇಲುಕೋಟೆ, ಫೆ.18– ರಥಸಪ್ತಮಿಯಂದು ನೂರಾರು ಕಲಾವಿದರ ಕಲಾ ಪ್ರದರ್ಶನದೊಂದಿಗೆ ನಡೆದ 25ನೇ ವರ್ಷದ ರಾಜ್ಯ ಮಟ್ಟದ ಜಾನಪದ ಕಲಾಮೇಳ ಮೇಲುಕೋಟೆಯ ಸಾಂಸ್ಕೃತಿಕ ಪರಂಪರೆಯಲ್ಲಿ ಇತಿಹಾಸ ಸೃಷ್ಟಿಸಿತು.

ಮೇಲುಕೋಟೆಯ ಸಾಂಸ್ಕೃತಿಕ ಪರಂಪರೆಯಲ್ಲಿ ಬೆಳ್ಳಿಹಬ್ಬದ ಆಚರಣೆ ಪೂರೈಸಿಕೊಂಡ ವೇಳೆ ಜನಪದ ಜಾತ್ರೆಯಂತಾಗಿದ್ದ ಮೇಲುಕೋಟೆಯ ಉತ್ಸವ ಗ್ರಾಮೀಣ ಪ್ರದೇಶದ ಜನಪದಕಲೆಗಳ ಅನಾವರಣಕ್ಕೆ ವೇದಿಕೆಯಾಗಿತ್ತು. ತಮಟೆ, ಡೊಳ್ಳು, ನಗಾರಿ, ಚಂಡೆ, ಮದ್ದಳೆ, ಚಾರಸಿ ಕರಡಿಮಜಲು ಡೋಲು ಮುಂತಾದ ವಾದ್ಯಗಳ ನೀನಾದ ಝೇಂಕರಿಸುತ್ತಿತ್ತು. ಮೇಲುಕೋಟೆಯ ಯತಿರಾಜದಾಸರ್ ಗುರುಪೀಠದ ಸ್ಥಾನೀಕಂ ನಾಗರಾಜ ಅಯ್ಯಂಗಾರ್ ನೇತೃತ್ವದಲ್ಲಿ ಸಾಂಸ್ಕೃತಿಕ ವೇದಿಕೆ ಕನ್ನಡ ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಆಯೋಜಿಸಿದ್ದ ಜಾನಪದ ಹಬ್ಬದಲ್ಲಿ 50 ತಂಡಗಳ 700ಕ್ಕೂ ಹೆಚ್ಚು ಕಲಾವಿದರು ಭಾಗಿಯಾಗಿ ಅಮೋಘ ಪ್ರದರ್ಶನ ನೀಡಿ ಚೆಲುವನಾರಾಯಣನಿಗೆ ಕಲಾರಾಧನೆಯ ಸೇವೆ ಮಾಡಿದರು.

ಬೆಳಿಗ್ಗೆ 6.15ಕ್ಕೆ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್ ಚೆಲುವರಾಯಸ್ವಾಮಿ, ಧನಲಕ್ಷ್ಮಿ ದಂಪತಿಗಳು ಕಲಾಮೇಳವನ್ನು ಉದ್ಘಾಟಿಸಿದರೆ ಬೆಳಿಗ್ಗೆ 7.30ಕ್ಕೆ ಹಂಗರಹಳ್ಳಿ ವಿದ್ಯಾಚೌಡೇಶ್ವರಿ ಮಹಾಸಂಸ್ಥಾನದ ಶ್ರೀ ಬಾಲಮಂಜುನಾಥ ಸ್ವಾಮೀಜಿ, ರೈತ ನಾಯಕಿ ಸುನೀತಾ ಪುಟ್ಟಣ್ಣಯ್ಯ ಸ್ವರ್ಣಲೇಪಿತ ಸೂರ್ಯಮಂಡಲದಲ್ಲಿ ವಿರಾಜಮಾನನಾದ ಚೆಲುವನಾಯಣನ ರಥಕ್ಕೆ ಚಾಲನೆ ನೀಡಿದರು. ಪಾಂಡವಪುರ ಎಸಿ ನಂದೀಶ್, ತಹಶೀಲ್ದಾರ್ ಶ್ರೇಯಸ್, ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿ ಸಂತೋಷ್, ಸಂಘಟಕರಾದ ಸ್ಥಾನಾಚಾರ್ಯ ಶ್ರೀನಿವಾಸನರಸಿಂಹನ್ ಗುರೂಜಿ, ಪತ್ರಕರ್ತೆ ಸೌಮ್ಯ ಸಂತಾನಂ, ಜನಪದ ಕಲಾವಿದ ಶಿವಣ್ಣಗೌಡ ಇದ್ದರು.



ರಥಸಪ್ತಮಿಯಂದು ಸ್ವರ್ಣಲೇಪಿತ ಸೂರ್ಯಮಂಡಲದಲ್ಲಿ ವಿರಾಜಮಾನನಾದ ಶ್ರೀ ಚೆಲುವನಾರಾಯಣ.

ಮೇಲುಕೋಟೆ ರಥಸಪ್ತಮಿಯಂದು ಕೇರಳದ ಚಂಡೆ, ಹುಬ್ಬಳ್ಳಿಯ ಜಗ್ಗಲಿಗೆ ಮೇಳ, ಹಗಲುವೇಷ, ಮೈಸೂರು ಜಿಲ್ಲೆಯ ಬ್ರಾಸ್ ಬ್ಯಾಂಡ್, ವಿಶೇಷ ತಮಟೆ ಮೇಳ, ಮೈಸೂರು ನಗಾರಿ, ನವಿಲಿನ ನೃತ್ಯ, ತಲಕಾಡಿನ ಬೃಹತ್ ಹನುಮಾನ್ ಸೇರಿದಂತೆ ರಾಜ್ಯದ 50ಕ್ಕೂ ಹೆಚ್ಚು ಜನಪದ ಕಲಾತಂಡಗಳು, ಮಂಡ್ಯ ಜಿಲ್ಲೆಯ ಡೊಳ್ಳು ಕುಣಿತ, ಪಟಾ ಕುಣಿತ, ಗಾರುಡಿಗೊಂಬೆ, ಕೋಲಾಟ, ಚಿಲಿಪಿಲಿ ಗೊಂಬೆ, ಪೂಜಾ ಕುಣಿತ, ಮಂಗಳವಾದ್ಯ, ಮೈಸೂರು ನಗಾರಿ, ನೃತ್ಯ ತಮಟೆ, ವೀರಮಕ್ಕಳ ಕುಣಿತ, ಜಡೆ ಕೋಲಾಟ, ದಾಸಯ್ಯರ ದರ್ಶನ, ಬೆಂಕಿ ಭರಾಟೆ, ಖಡ್ಗ ಪವಾಡ, ವೀರಭದ್ರನ ನೃತ್ಯ, ಜಾಂಜ್ ಮೇಳ, ನಾಸಿಕ್ ಡೋಲ್, ಮರಗಾಲು ಕುಣಿತ, ಯಕ್ಷಗಾನ ಗೊಂಬೆಗಳು, ಕರಡಿಮಜಲು, ಗ್ರಾಮೀಣ ಮಂಗಳವಾದ್ಯ ಸ್ಯಾಕ್ಸ್ ಪೋನ್ ತಂಡಗಳು ಭಾಗವಹಿಸಿದ್ದವು. ವಿವಿಧ ಶಾಲೆಗಳ 300ಕ್ಕೂ ಹೆಚ್ಚು ಪುಟಾಣಿಗಳು ನೂರೊಂದು ಕಳಸ, ವೇಷಭೂಷಣ ಹಾಗೂ ಇತರ ಪ್ರತಿಭಾ ಕಾರ್ಯಕ್ರಮದಲ್ಲಿ ಭಾಗಿಯಾಗಿ ಉತ್ಸವದ ಸಂಭ್ರಮಕ್ಕೆ ಮತ್ತಷ್ಟು ಮೆರಗು ನೀಡಿದರು.

ರಥಸಪ್ತಮಿ ಜಾನಪದ ರಸಸಂಜೆಯನ್ನು ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಉದ್ಘಾಟಿಸಿದರು. ಸಂಸ್ಕೃತ ಸಂಶೋಧನಾ ಕೇಂದ್ರದ ಕುಲಸಚಿವ ಕುಮಾರ್ ಅಧ್ಯಕ್ಷತೆ ವಹಿಸಿದ್ದರು ಜನಪದ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಕಲಾವಿದರನ್ನು ಸನ್ಮಾನಿಸಲಾಯಿತು. ಜಾನಪದ ಕಾರ್ಯಕ್ರಮ ಬೆಂಕಿಭರಾಟೆ ನೆರವೇರಿತು.

ವಿಜೃಂಭಣೆಯಿಂದ ನಡೆದ ಗ್ರಾಮದೇವತೆ ಹಬ್ಬ



ಪಾಂಡವಪುರದ ಚಿಕ್ಕಾಡೆ ಗ್ರಾಮದಲ್ಲಿ ನಡೆದ ದೇವಿರಮ್ಮನ ಹೆಬ್ಬಾರೆ ಉತ್ಸವ.

ಪಾಂಡವಪುರ, ಫೆ.18– ತಾಲೂಕಿನ ಚಿಕ್ಕಾಡೆ ಗ್ರಾಮದ ಹೊರ ವಲಯದಲ್ಲಿರುವ ಗ್ರಾಮದೇವತೆ ಶ್ರೀದೇವಿರಮ್ಮ ಹಬ್ಬ, ಜಾತ್ರಾ ಮಹೋತ್ಸವ ಹಾಗೂ ಹೆಬ್ಬಾರೆ ಉತ್ಸವವು ಸಡಗರ ಸಂಭ್ರಮದಿಂದ ಸಾವಿರಾರು ಭಕ್ತರ ಸಮ್ಮುಖದಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು.

ದೇವಿರಮ್ಮ ಹೆಬ್ಬಾರೆ ಉತ್ಸವವು ತನ್ನದೆಯಾದ ಇತಿಹಾಸ ಹೊಂದಿದೆ ವರ್ಷಕ್ಕೊಮ್ಮೆ ಮಾತ್ರ ನಡೆಯುವ ದೇವಿರಮ್ಮ ಹೆಬ್ಬಾರೆ ಉತ್ಸವ ನಡೆಯುವ ಎರಡು ದಿನ ಮಾತ್ರ ದೇವಾಲಯದ ಬಾಗಿಲು ತೆಗೆಯುವುದರಿಂದ ಎರಡು ದಿನ ಮಾತ್ರ ದೇವಿಯ ದರ್ಶನ ಪಡೆಯಬಹುದಾಗಿದ್ದು, ಹಬ್ಬ ಮುಗಿದ ಬಳಿಕ ಅಂದೇ ಬಾಗಿಲು ಮುಚ್ಚಿದರೆ ಮುಂದಿನ ವರ್ಷದ ನಡೆಯುವ ಹಬ್ಬದೊಂದು ಮಾತ್ರ ದೇವಸ್ಥಾನದ ಬಾಗಿಲು ತೆಯುವುದು. ರಥಸಪ್ತಮಿಯ ನಂತರದಲ್ಲಿ ಬರುವ ಮೊದಲ ಸೋಮವಾರದೊಂದು ದೇವಿರಮ್ಮನ ಹೆಬ್ಬಾರೆ ಉತ್ಸವವನ್ನು ನಡೆಸಿಕೊಂಡು ಬರಲಾಗುತ್ತಿದೆ. ಹಬ್ಬದ ಪ್ರಯುಕ್ತವಾಗಿ ಸೋಮವಾರ ಮಧ್ಯಾಹ್ನ ಪುರೋಹಿತರು, ಯಜಮಾನರು ಹಾಗೂ ದಲಿತ ಸಮುದಾಯದ ಮುಖಂಡರ ನೇತೃತ್ವದಲ್ಲಿ ದೇವಸ್ಥಾನದ ಬಾಗಿಲು ತೆಗೆದು ದೇವರಿಗೆ ಅಭಿಷೇಕ ಸಲ್ಲಿಸಿ ಪೂಜೆ–ಪುನಸ್ಕಾರಗಳನ್ನು ಸಲ್ಲಿಸಲಾಗುತ್ತದೆ.

ಸೋಮವಾರ ಮಧ್ಯಾಹ್ನ ಗ್ರಾಮದ ಶ್ರೀ ಹುಚ್ಚಮ್ಮ ದೇವಾಲಯದಿಂದ ಹೆಬ್ಬಾರೆಗಳನ್ನು ತೆಗೆದುಕೊಂಡು ಚಿಕ್ಕಾಡೆ–ದೇವೇಗೌಡನಕೊಪ್ಪಲು ಮಧ್ಯೆ ಇರುವ ಚಿಕ್ಕಬೆಟ್ಟದ ಹೆಬ್ಬಾರೆ ಕಟ್ಟೆಯ ಬಳಿ ತೆಗೆದುಕೊಂಡು ಹೋಗಿ, ಅಲ್ಲಿ ಹೆಬ್ಬಾರೆ ಕಟ್ಟಲಾಗುತ್ತದೆ. ಬಳಿಕ ಕುಂತಿಬೆಟ್ಟದ ತಪ್ಪಲ್ಲಿನ ಬಳಿ ಹಿರೇಮರಳಿ ಗ್ರಾಮಸ್ಥರು ಪೂಜೆಸಲ್ಲಿಸುತ್ತಾರೆ. ಮತ್ತೆ ದೇವೇಗೌಡನಕೊಪ್ಪಲು ಬಳಿಯ ಕಾಚೇನಹಳ್ಳಿ ಅಮ್ಮನವರ ದೇವಸ್ಥಾನಕ್ಕೆ ತೆಗೆದುಕೊಂಡು ಬಂದು ಹೂವುಗಳಿಂದ ಅಲಂಕರಿಸಿದ ಬಳಿಕ ದೇವೇಗೌಡನ ಕೊಪ್ಪಲು ಗ್ರಾಮಸ್ಥರು ಪೂಜೆಸಲ್ಲಿಸುತ್ತಾರೆ.

ಬಳಿಕ ಅದ್ದೂರಿ ಮೆರವಣಿಗೆ ಮೂಲಕ ಹೆಬ್ಬಾರೆಗಳನ್ನು ರಾತ್ರಿ ವೇಳೆಗೆ ಚಿಕ್ಕಾಡೆ ಗ್ರಾಮಕ್ಕೆ ತೆಗೆದುಕೊಂಡು ಬಂದು ನಾರಾಯಣಸ್ವಾಮಿ ದೇವಸ್ಥಾನದಲ್ಲಿ ಇರಿಸಲಾಗುತ್ತದೆ. ದೇವಸ್ಥಾನದ ಬಳಿ ಹರಕೆ ಹೊತ್ತು ಭಕ್ತರಿಗೆ ಬಾಯಿಬೀಗ ಹಾಕಲಾಗುತ್ತದೆ. ಮಂಗಳವಾರ ಮಧ್ಯಾಹ್ನ ಮೆರವಣಿಗೆ ಮೂಲಕ ಗ್ರಾಮದ ಹೊರವಲಯದಲ್ಲಿರುವ ದೇವಿರಮ್ಮನ ದೇವಸ್ಥಾನಕ್ಕೆ ತೆಗೆದು ಕೊಂಡು ಹೋಗಲಾಗುತ್ತದೆ. ಈ ವೇಳೆ ಹರಕೆ ಹೊತ್ತು ಭಕ್ತರು, ಸಾರ್ವಜನಕರು ಹೆಬ್ಬಾರೆ ಕೆಳಗೆ ಕುಳಿತುಕೊಳ್ಳುವ ಮೂಲಕ ದೇವರ ಕೃಪೆಗೆ ಪಾತ್ರರಾಗುತ್ತಾರೆ. ಬಳಿಕ ಹರಕೆ ಹೊತ್ತ ಭಕ್ತರು ದೇವಿರಮ್ಮನ ದೇವಸ್ಥಾನಕ್ಕೆ ಬಾಳೆಹಣ್ಣಿನ ಗೊನೆಗಳು, ಕಜ್ಜಾಯವನ್ನು ಅರ್ಪಿಸುತ್ತಾರೆ. ದೇವಸ್ಥಾನದಲ್ಲಿ ಸಂಜೆಯವರೆಗೂ ಪೂಜೆ ಪುನಸ್ಕಾರಗಳನ್ನು ಸಲ್ಲಿಸುತ್ತಾರೆ. ನಂತರ ಮಂಗಳವಾರ ರಾತ್ರಿ ಗ್ರಾಮದ ಯಜಮಾನರು, ಪುರೋಹಿತರು, ದಲಿತ ಮುಖಂಡರು ಸಮ್ಮುಖದಲ್ಲಿ ಮತ್ತೆ ದೇವಸ್ಥಾನವನ್ನು ಮುಚ್ಚಲಾಗುತ್ತದೆ.

ಮಾ.2, 3 ರಂದು ಬೂದನೂರು ಉತ್ಸವ

ಮಂಡ್ಯ: ಮಂಡ್ಯ ತಾಲೂಕು ಬೂದನೂರು ಉತ್ಸವವನ್ನು ಮಾರ್ಚ್ 2 ಹಾಗೂ 3 ರಂದು ಹಮ್ಮಿಕೊಳ್ಳಲಾಗುವುದು. ಅಗತ್ಯ ಸಿದ್ಧತೆ ಮಾಡಿಕೊಳ್ಳಿ ಎಂದು ಜಿಲ್ಲಾಧಿಕಾರಿ ಡಾ. ಕುಮಾರ ತಿಳಿಸಿದರು.

ತಮ್ಮ ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವೇದಿಕೆ, ಆಹಾರ, ಸ್ವಾಗತ, ಸೇರಿದಂತೆ ವಿವಿಧ ಸಮಿತಿಗಳನ್ನು ರಚಿಸಲಾಗಿದೆ. ಕಾರ್ಯಕ್ರಮಗಳು ಉತ್ತಮವಾಗಿ ಸಂಘಟಿಸಲು ಕಾರ್ಯ ಪ್ರವೃತ್ತರಾಗಬೇಕು ಎಂದರು. ಕಾರ್ಯಕ್ರಮ ನಡೆಯುವ ಸ್ಥಳ ಹಾಗೂ ಸುತ್ತಮುತ್ತಲಿನ ಪ್ರದೇಶದ ಸ್ವಚ್ಛತೆ ಕೆಲಸಗಳು ಪ್ರಾರಂಭವಾಗಬೇಕು. ಸಣ್ಣ–ಪುಟ್ಟ ರಸ್ತೆ ದುರಸ್ತಿ ಕೆಲಸಗಳಿದ್ದಲ್ಲಿ ಅವುಗಳನ್ನು ಶೀಘ್ರವಾಗಿ ಪ್ರಾರಂಭಿಸಿ ಪೂರ್ಣಗೊಳಿಸಬೇಕು ಎಂದರು.

ವಾಹನಗಳ ನಿಲುಗಡೆ ಪ್ರದೇಶವನ್ನು ಸಮತಟ್ಟು ಮಾಡಿ ವಿದ್ಯುತ್ ದೀಪಗಳ ವ್ಯವಸ್ಥೆ ಮಾಡಿ. ಕಾರ್ಯಕ್ರಮ ನಡೆಯುವ ಸ್ಥಳ ಹಾಗೂ ಅವಶ್ಯಕತೆ ಇರುವ ಪ್ರದೇಶಗಳಲ್ಲಿ ಸಿಸಿಟಿವಿ ವ್ಯವಸ್ಥೆ ಮಾಡಿಕೊಳ್ಳಿ ಎಂದರು.

ಇದೇ ಮೊದಲ ಬಾರಿಗೆ ಗ್ರಾಮ ಮಟ್ಟದಲ್ಲಿ ಉತ್ಸವ ಆಯೋಜನೆ ಮಾಡಲಾಗುತ್ತಿದ್ದು, ಕುಡಿಯುವ ನೀರು ಹಾಗೂ ತಾತ್ಕಾಲಿಕ ಶೌಚಾಲಯದ ವ್ಯವಸ್ಥೆ ಮಾಡುವಂತೆ ತಿಳಿಸಿದರು.

ಆಹಾರ ಮೇಳವನ್ನು ಆಯೋಜಿಸಿ ಮಳಿಗೆಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಿ ಎಂದರು.

ಫೆ.26ರಿಂದ ಮಂಡ್ಯದಲ್ಲಿ ಬೃಹತ್ ಉದ್ಯೋಗ ಮೇಳ

ಮಂಡ್ಯ, ಫೆ.18– ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ವತಿಯಿಂದ ಬೆಂಗಳೂರಿನ ಅರಮನೆ ಆವರಣದಲ್ಲಿ ಫೆಬ್ರವರಿ 26 ಮತ್ತು 27 ರಂದು ಬೆಳಿಗ್ಗೆ 9 ಗಂಟೆಗೆ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ.

18 ರಿಂದ 35 ವರ್ಷದ ಆಸಕ್ತ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ, ಪಿ.ಯು.ಸಿ, ಐ.ಟಿ.ಐ, ಡಿಪ್ಲೋಮೊ ಯಾವುದೇ ಪದವಿಯ ಕನಿಷ್ಠ ವಿದ್ಯಾರ್ಹತೆಯನ್ನು ಹೊಂದಿದ್ದು, ತಮ್ಮ ಎಲ್ಲಾ ಮೂಲ ಸ್ವ-ವಿವರ (Resume) ಪತ್ರಗಳ ಜೆರಾಕ್ಸ್ ಮತ್ತು ಆಧಾರ್ ಕಾರ್ಡ್ ನಕಲು ಪ್ರತಿಯನ್ನು ತೆಗೆದುಕೊಂಡು ಭಾಗವಹಿಸಬಹುದಾಗಿದೆ. ಹೆಸರಾಂತ ಕಂಪನಿಗಳು ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಿದ್ದು, https://udyogamela.skillconnect.kaushalkar.com/candidaterRegistrationರಲ್ಲಿ ನೋಂದಾಯಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ದೂ.ಸಂ.08232–295010 ಮತ್ತು ಸಹಾಯವಾಣಿ: 1800 5999918 ಅನ್ನು ಸಂಪರ್ಕಿಸಬಹುದು ಎಂದು ಮಂಡ್ಯ ಕೌಶಲ್ಯಾಭಿವೃದ್ಧಿ ಅಧಿಕಾರಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪರ ಸರ್ಕಾರಿ ವಕೀಲರಾಗಿ ಕಿಕ್ಕೇರಿ ಕೆ.ಪಿ.ಯೋಗಣ್ಣ



ಕಿಕ್ಕೇರಿ: ಬೆಂಗಳೂರಿನ ಉಚ್ಚ ನ್ಯಾಯಾಲಯದ ಅಪರ ಸರ್ಕಾರಿ ವಕೀಲರಾಗಿ ಕಿಕ್ಕೇರಿಯ ಕೆ.ಪಿ.ಯೋಗಣ್ಣ(ಬೀರನಹಳ್ಳಿ ಯೋಗಣ್ಣ) ನೇಮಕವಾಗಿದ್ದಾರೆ. ಹೊಸದಾಗಿ ಸೃಜಿಸಿರುವ ಈ ಹುದ್ದೆಗೆ ಸರ್ಕಾರದ ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಅಧೀನ ಕಾರ್ಯದರ್ಶಿ ಆದಿನಾರಾಯಣ ನೇಮಕ ಆದೇಶ ಹೊರಡಿಸಿದ್ದಾರೆ.

ಸ್ವಾತಂತ್ರ್ಯ ಹೋರಾಟಗಾರ ಲೇ.ಮಾಯಣ್ಣ ಅವರ ಧರ್ಮಪತ್ನಿ ನಾಗರತ್ನಮ್ಮ ನಿಧನ



ಕೆ.ಆರ್.ಪೇಟೆ, ಫೆ.18– ತಾಲೂಕಿನ ಕಸಬಾ ಹೋಬಳಿಯ ಬೊಮ್ಮನಾಯಕನಹಳ್ಳಿ ಗ್ರಾಮದ ಸ್ವಾತಂತ್ರ್ಯ ಹೋರಾಟಗಾರರಾದ ಲೇ.ಬಿ.ವಿ.ಮಾಯಣ್ಣ ಅವರ ಧರ್ಮಪತ್ನಿ ಶ್ರೀಮತಿ ನಾಗರತ್ನಮ್ಮ (ತಾಲೂಕು ಬೋರ್ಡ್ ಮಾಜಿ ಸದಸ್ಯೆ) ವಯೋಸಹಜ ಖಾಯಿಲೆಯಿಂದ ಭಾನುವಾರ ನಿಧನರಾಗಿದ್ದಾರೆ. ಅವರಿಗೆ 85 ವರ್ಷ ವಯಸ್ಸಾಗಿತ್ತು. ಮೃತರು ನಾಲ್ವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಸ್ವಗ್ರಾಮ ಬೊಮ್ಮನಾಯಕನಹಳ್ಳಿ ಗ್ರಾಮದ ಮೃತರ ಜಮೀನಿನಲ್ಲಿ ಸೋಮವಾರ ಮಧ್ಯಾಹ್ನ 1 ಗಂಟೆಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಜ್‌ಕೋಟ್‌ನಲ್ಲಿ ಭಾರತಕ್ಕೆ ಭರ್ಜರಿ ಜಯ



ರಾಜ್‌ಕೋಟ್, ಫೆ.18– ಯಶಸ್ವಿ ಜೈಸ್ವಾಲ್ ಅಮೋಘ ದ್ವಿಶತಕ ಹಾಗೂ ರವೀಂದ್ರ ಜಡೇಜಾ ಅವರ ಸ್ಪಿನ್ ದಾಳಿ ನೆರವಿನಿಂದ ಭಾರತ ಇಂಗ್ಲೆಂಡ್ ವಿರುದ್ಧದ 3ನೇ ಟೆಸ್ಟ್ ಪಂದದಲ್ಲಿ 434 ರನ್‌ಗಳ ಜಯ ಸಾಧಿಸಿದೆ. ಆ ಮೂಲಕ ಐದು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ 2–1 ಅಂತರದಲ್ಲಿ ಮುನ್ನಡೆ ದಾಖಲಿಸಿದೆ.

ಭಾರತ ನೀಡಿದ 557 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಇಂಗ್ಲೆಂಡ್ ದ್ವಿತೀಯ ಇನ್ನಿಂಗ್ಸ್‌ನಲ್ಲಿ 122 ರನ್‌ಗಳಿಗೆ ಆಲೌಟ್ ಆಗುವ ಮೂಲಕ ಸೋಲು ಅನುಭವಿಸಿತು. ತಂಡದ ಪರ ಮಾರ್ಕ್ ವುಡ್ 33 ರನ್ ಗಳಿಸಿದ್ದು, ಬಿಟ್ಟರೆ ಉಳಿದವರು ಪೆವಿಲಿಯನ್ ಪರೇಡ್ ನಡೆಸಿದರು. ಉಳಿದಂತೆ ಬೆನ್ ಡಕೆಟ್ 4, ಝಕ್ ಕ್ರಾಲಿ 11, ಓಲ್ಲಿ ಪೋಪ್ 3, ಜಾನಿ ಬೇರ್‌ಸ್ಟೋ 4, ಜೋ ರೂಟ್ 7, ಬೆನ್ ಸ್ಟೋಕ್ಸ್ 15, ಬೆನ್ ಫೋಕ್ಸ್ ಹಾಗೂ ಟಾಮ್ ಹಾರ್ಟ್ಲಿ ತಲಾ 16 ರನ್ ಗಳಿಸಿದರು. ಭಾರತದ ಪರ ರವೀಂದ್ರ ಜಡೇಜಾ 5, ಕುಲದೀಪ್ ಯಾದವ್ 2, ಬೂಮ್ರಾ, ರವಿಚಂದ್ರನ್ ಅಶ್ವಿನ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

2 ವಿಕೆಟ್ ನಷ್ಟಕ್ಕೆ 195 ರನ್‌ಗಳಿಂದ 4ನೇ ದಿನದಾಟ ಆರಂಭಿಸಿದ ಭಾರತ ಎರಡನೇ ಇನಿಂಗ್ಸ್‌ನಲ್ಲಿ 4 ವಿಕೆಟ್ ನಷ್ಟಕ್ಕೆ 430 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ತಂಡದ ಪರ ಯಶಸ್ವಿ ಜೈಸ್ವಾಲ್ 236 ಎಸೆತಗಳಲ್ಲಿ 12 ಸಿಕ್ಸರ್, 14 ಬೌಂಡರಿ ಒಳಗೊಂಡ 214 ರನ್ ಗಳಿಸಿ ಅಜೇಯರಾಗುಳಿದರು. ಉಳಿದಂತೆ ಶುಭ್‌ಮನ್ ಗಿಲ್ 91, ಕುಲದೀಪ್ ಯಾದವ್ 27, ಸರ್ಫರಾಜ್ ಖಾನ್ 68 ರನ್ ಗಳಿಸಿದರು. ಇಂಗ್ಲೆಂಡ್ ಪರ ರೂಟ್, ಹಾರ್ಟ್ಲಿ ಹಾಗೂ ರೆಹಾನ್ ಅಹಮ್ಮದ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ರವೀಂದ್ರ ಜಡೇಜಾ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ವ್ಯಕ್ತಿ ನಾಪತ್ತೆ

ಪಿರಿಯಾಪಟ್ಟಣ, ಫೆ.18– ಶುಂಠಿ ವ್ಯವಸಾಯ ಮಾಡಿಕೊಂಡಿದ್ದ ವ್ಯಕ್ತಿಯೋರ್ವ ನಾಪತ್ತೆಯಾಗಿರುವ ಘಟನೆ ಪಿರಿಯಾಪಟ್ಟಣ ತಾಲೂಕಿನ ರಾಣಿಗೇಟು ಗ್ರಾಮದಲ್ಲಿ ನಡೆದಿದೆ. ಮೂಲತಃ ಸೋಮವಾರಪೇಟೆ ತಾಲೂಕಿನ ಹೊಸಗುತ್ತಿ ಗ್ರಾಮದ ನಿವಾಸಿ ಹೆಚ್.ಎನ್. ವೆಂಕಟೇಶ್(43) ನಾಪತ್ತೆಯಾದವರು. ಕಳೆದ 2 ವರ್ಷಗಳಿಂದ ಪಿರಿಯಾಪಟ್ಟಣ ತಾಲೂಕಿನ ರಾಣಿಗೇಟು ಗ್ರಾಮದಲ್ಲಿರುವ ತಮ್ಮ ತಂಗಿಯ ಮನೆಯಲ್ಲಿ ಉಳಿದುಕೊಂಡು ಶುಂಠಿ ವ್ಯವಸಾಯ ಮಾಡಿಕೊಂಡಿದ್ದ ವೆಂಕಟೇಶ್, ಜ.17 ರಂದು ಬೆಳಗ್ಗೆ 10.30ಕ್ಕೆ ಶುಂಠಿಗೆ ನೀರು ಹಾಯಿಸುವುದಾಗಿ ಬೈಕ್‌ನಲ್ಲಿ (ಕೆ.ಎ.12.ಆರ್.8638) ಹೋದವರು ತಿಂಗಳಾದರೂ ಮನೆಗೆ ವಾಪಸ್ಸಾಗಿಲ್ಲ. ಎಂದು ವೆಂಕಟೇಶ್ ಬಾಮೈದ(ತಂಗಿ ಪತಿ) ಕುಮಾರ್, ಬೈಲುಕುಪ್ಪೆ ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಮಾಹಿತಿ ದೊರೆತಲ್ಲಿ ಬೈಲುಕುಪ್ಪೆ ಠಾಣೆ ದೂ.ಸಂ.08223–254433 ಗೆ ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆಯಲ್ಲಿ ಕೋರಲಾಗಿದೆ.



ಮುಖ್ಯಪೇದೆ ಎಸ್.ಕೆಂಡಗಣ್ಣ ಸ್ವಾಮಿ ನಿಧನ



ಹೆಚ್.ಡಿ.ಕೋಟೆ,ಫೆ.18– ಬನ್ನೂರು ಪೊಲೀಸ್ ಠಾಣೆಯ ಮುಖ್ಯಪೇದೆ ಸರಗೂರು ತಾಲೂಕಿನ ಮೇಟಿಕುಪ್ಪೆ ನಿವಾಸಿ ಸೋಮಣ್ಣ ಅವರ ಪುತ್ರ ಎಸ್.ಕೆಂಡಗಣ್ಣಸ್ವಾಮಿ (40) ಭಾನುವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ಸ್ವಗ್ರಾಮ ಮೇಟಿಕುಪ್ಪೆಯ ಮೃತರ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ತೆರಿಗೆ ವಿಚಾರದಲ್ಲಿ ದ್ರೋಹ ಮಾಡಿದ ಬಿಜೆಪಿಗೆ ತಕ್ಕ ಪಾಠ ಕಲಿಸಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ


ಮಳವಳ್ಳಿ, ಫೆ.18– ಕರ್ನಾಟಕಕ್ಕೆ ತೆರಿಗೆ ವಿಚಾರದಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ದ್ರೋಹ ಬಗೆದಿದ್ದು, ಈ ದ್ರೋಹದ ವಿರುದ್ಧ ಅವರಿಗೆ ಪಾಠ ಕಲಿಸಬೇಕು ಎಂದರೆ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಬೆಂಬಲ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ಮಳವಳ್ಳಿಯ ಶಾಂತಿ ಕಾಲೇಜು ಮೈದಾನದಲ್ಲಿ ಭಾನುವಾರ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆ ಮತ್ತು ಸರ್ಕಾರದ ಗ್ಯಾರೆಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್‌ನವರು ಏನೇ ಆಮಿಷಗಳನ್ನು ತೋರಿಸಿದರೂ ಕೂಡ ಅದಕ್ಕೆ ಮಣಿಯದೇ ರಾಜ್ಯದ ಜನರು ನಮ್ಮ ಅಭ್ಯರ್ಥಿಯನ್ನು ಆಯ್ಕೆ ಮಾಡಿ ದ್ದಾರೆ. ಮಳವಳ್ಳಿಯಲ್ಲಿ ನೀಡಿದ್ದ ಭಾರವಸೆಯಂತೆ 470 ಕೋಟಿ ರೂ.ಗಳ ಅಂದಾಜು ಮೊತ್ತದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ತಿಳಿಸಿದರು.

ಜೂನ್ 11ರಿಂದ ಈವರೆಗೆ ಶಕ್ತಿ ಯೋಜನೆಯಡಿ 155 ಕೋಟಿ ಮಹಿಳೆಯರು ಸರ್ಕಾರಿ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣ ಮಾಡಿದ್ದಾರೆ. ಪ್ರತಿದಿನ 60 ಲಕ್ಷ ಮಹಿಳೆಯರು ಓಡಾಡುತ್ತಿದ್ದಾರೆ ಎಂದು ವಿವರಿಸಿದರು.

ಜನರು ಹಸಿದು ಮಲಗಬಾರದು, ರಾಜ್ಯ ಹಸಿವು ಮುಕ್ತವಾಗಬೇಕೆಂದು ಅನ್ನಭಾಗ್ಯ ಜಾರಿ ಮಾಡಲಾಯಿತು. ಬಡವರಿಗೆ ಅಕ್ಕಿ ನೀಡದ ಕೇಂದ್ರದ ಬಿಜೆಪಿ ಪಕ್ಷಕ್ಕೆ ಜನರು ಮತ ಹಾಕಬಾರದು. ಗ್ಯಾರಂಟಿ ಜಾರಿ ಮಾಡಿದರೆ ರಾಜ್ಯ ದಿವಾಳಿಯಾಗುತ್ತದೆ ಎಂದು ಪ್ರಧಾನಿ ಮೋದಿಯವರು ಟೀಕಿಸಿದ್ದರು. ನಾನು ಮಂಡಿಸಿದ ಬಜೆಟ್‌ನಲ್ಲಿ ಗ್ಯಾರಂಟಿಗಳಿಗೆ 52 ಸಾವಿರ ಕೋಟಿ ರೂ.ಗಳನ್ನು ಇಡಲಾಗಿದೆ. 8 ತಿಂಗಳ ಅವಧಿಯಲ್ಲಿ ಎಲ್ಲ 5 ಗ್ಯಾರಂಟಿಗಳನ್ನು ಸರ್ಕಾರ ಜಾರಿ ಮಾಡಿದೆ ಎಂದರು.

ಕಾಂಗ್ರೆಸ್ ಪಕ್ಷದ ಸ್ಥಳೀಯ ನಾಯಕರು, ಜನರ ಬೇಡಿಕೆಯನ್ನು ನಮ್ಮ ಸರ್ಕಾರ ಈಡೇರಿಸಿದೆ. ಬಿಜೆಪಿಯ ಅನ್ವರ್ಥ ನಾಮವೆಂದರೆ ಸುಳ್ಳಿನ ಪಕ್ಷ. ಸ್ವತಂತ್ರ ಭಾರತದಲ್ಲಿ ಪ್ರಧಾನಿ ಮೋದಿಯವರಷ್ಟು ಸುಳ್ಳು ಹೇಳುವ ಪ್ರಧಾನಿ ಮತ್ತೊಬ್ಬರಿಲ್ಲ. 15 ಲಕ್ಷ ಹಣವನ್ನು ದೇಶದ ಜನರ ಖಾತೆಗೆ ಹಾಕುವ, ರೈತರ ಆದಾಯ ದುಪ್ಪಟ್ಟು, 7 ಕೋಟಿ ಉದ್ಯೋಗ ಸೃಷ್ಟಿಸುವ ಸುಳ್ಳು ಭರವಸೆಯನ್ನು ನೀಡಿ, ಈಡೇರಿಸಲಿಲ್ಲ ಎಂದು ಕಿಡಿಕಾರಿದರು.



ಮಳವಳ್ಳಿಯ ಶಾಂತಿ ಕಾಲೇಜು ಮೈದಾನದಲ್ಲಿ ನಡೆದ ಗ್ಯಾರಂಟಿ ಯೋಜನೆ ಫಲಾನುಭವಿಗಳ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಫಲಾನುಭವಿಗಳಿಗೆ ಸವಲತ್ತು ವಿತರಿಸಿದರು. ಚಿತ್ರದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ, ಶಾಸಕ ನರೇಂದ್ರಸ್ವಾಮಿ ಇನ್ನಿತರರಿದ್ದರು.

480 ಕೋಟಿ ರೂ ವೆಚ್ಚದಲ್ಲಿ ಮಳವಳ್ಳಿ ತಾಲೂಕಿನ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ಇಂದು ನೆರವೇರಿಸಲಾಗಿದೆ. ಇದರ ಜೊತೆಗೆ ತಾಲ್ಲೂಕಿನ ಅಭಿವೃದ್ಧಿಗಾಗಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಅವರು ಅನುದಾನಕ್ಕೆ ಮನವಿ ಸಲ್ಲಿಸಿದ್ದು, ಅವುಗಳನ್ನು ಸಹ ಈಡೇರಿಸಲಾಗುವುದು. ಜೂನ್ 11ರಿಂದ ಈವರೆಗೆ ಶಕ್ತಿ ಯೋಜನೆಯಡಿ 155 ಕೋಟಿ ಉಚಿತ ಟಿಕೆಟ್ ಪಡೆದು ಮಹಿಳೆಯರು ಸರ್ಕಾರಿ ಬಸ್ಸುಗಳಲ್ಲಿ ಪ್ರಯಾಣ ಮಾಡಿದ್ದಾರೆ. ಪ್ರತಿದಿನ 60 ಲಕ್ಷ ಉಚಿತ ಟಿಕೆಟ್ ಗಳನ್ನು ಪಡೆದು ಮಹಿಳೆಯರು ಓಡಾಡುತ್ತಿದ್ದಾರೆ ಎಂದು ವಿವರಿಸಿದರು.

ಯಾವುದೇ ಧರ್ಮ, ಜಾತಿಗೆ ಸೀಮಿತ ಮಾಡದೇ ಪಂಚ ಗ್ಯಾರಂಟಿ ನೀಡಿ ಸಾರ್ವಜನಿಕರ ಅಭಿವೃದ್ಧಿಗೆ ಶ್ರಮಿಸಲಾಗುತ್ತಿದೆ. 100 ರೂ ತೆರಿಗೆಯನ್ನು ಸಂಗ್ರಹಿಸಿ ಕೇಂದ್ರಕ್ಕೆ ನೀಡಿದರೆ ಕರ್ನಾಟಕಕ್ಕೆ ಕೇವಲ 13 ರೂ ಹಿಂದಿರುಗಿಸಿ ನಮಗೆ ನೀಡಲಾಗುತ್ತಿದೆ. ಒಂದು ವರ್ಷಕ್ಕೆ 4,30,000 ಕೋಟಿ ರೂ ಕರ್ನಾಟಕದಲ್ಲಿ ತೆರಿಗೆ ವಸೂಲಾತಿಯಾಗುತ್ತಿದೆ. ನಮಗೆ ಹಿಂದಿರುಗಿ, ಬರುವುದು 50,257 ಕೋಟಿ ರೂ ಮಾತ್ರ ಎಂದರು.

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಮಾತನಾಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಇತಿಹಾಸದಲ್ಲಿ 77 ವರ್ಷಗಳ ನಂತರ ರಾಜ್ಯದ ಸಾರ್ವಜನಿಕರ ಅಭಿವೃದ್ಧಿಗಾಗಿ ಪಂಚ ಗ್ಯಾರಂಟಿಗಳಿಗೆ 57,000 ಕೋಟಿ ರೂ ಗಳನ್ನು ಆಯವ್ಯಯದಲ್ಲಿ ರಾಜ್ಯ ಸರ್ಕಾರ ಮೀಸಲಿರಿಸಿದೆ. ರೈತರ ಸಾಲ ಮನ್ನ ಮಾಡಿದರೆ 15 ರಿಂದ 20 ಸಾವಿರ ಕೋಟಿ ರೂ ಬೇಕಾಗುತ್ತದೆ. ಗ್ಯಾರಂಟಿ ಯೋಜನೆಗಳಿಗೆ ಪ್ರತಿ ವರ್ಷ 50,000 ಕೋಟಿ ರೂ ವೆಚ್ಚದಂತೆ, 5 ವರ್ಷಕ್ಕೆ 2,50,000 ಕೋಟಿ ರೂ ವೆಚ್ಚವಾಗಲಿದೆ. ಇದರಿಂದ ಅರ್ಹ ಕುಟುಂಬಗಳಿಗೆ ಪ್ರತಿ ಮಾಹೆ ಸಿಗಲಿದೆ. ಈ ಅನುದಾನ ರಾಜ್ಯದ ಜನತೆಯನ್ನು ಸಬಲೀಕರಣಗೊಳಿಸಲಿದೆ ಎಂದರು.

ಶಾಸಕ ಪಿ.ಎಂ.ನರೇಂದ್ರಸ್ವಾಮಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಶಾಸಕರಾದ ರಮೇಶ್‌ಬಾಬು ಬಂಡಿಸಿದ್ದೇಗೌಡ, ಕೆ.ಎಂ. ಉದಯ್‌ಗೌಡ, ಗಣಿಗ ರವಿಕುಮಾರ್, ಮರಿತಿಬ್ಬೇಗೌಡ, ದಿನೇಶ್‌ಗೂಳಿಗೌಡ, ಮಧು ಜಿ.ಮಾದೇಗೌಡ, ಜಿಲ್ಲಾಧಿಕಾರಿ ಡಾ.ಕುಮಾರ್, ಎಸ್ಪಿ ಎನ್.ಯತೀಶ್, ಜಿ.ಪಂ. ಸಿಇಓ ಶೇಖ್ ತನ್ವೀರ್ ಆಸೀಫ್, ಉಪವಿಭಾಗಾಧಿಕಾರಿ ಎಂ.ಶಿವಮೂರ್ತಿ, ತಹಶೀಲ್ದಾರ್ ಲೋಕೇಶ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ದಡದಪುರ ಶಿವಣ್ಣ ಸೇರಿದಂತೆ ಹಲವು ಮಂದಿ ಗಣ್ಯರು ಉಪಸ್ಥಿತರಿದ್ದರು.

> ಹಿಂದೊಮ್ಮೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಮುಂದಿನ ಜನ್ಮದಲ್ಲಿ ಮುಸಲ್ಮಾನನಾಗಿ ಹುಟ್ಟುತ್ತೇನೆ ಎಂದಿದ್ದರು. ಈಗ ಕೋಮುವಾದಿ ಬಿಜೆಪಿ ಯವರ ಜೊತೆಗೆ ಸೇರಿದ್ದಾರೆ. ಈಗ ನಾನೇ ಮಗನನ್ನು ಬಿಜೆಪಿಗೆ ಕಳುಹಿಸಿದೆ ಎನ್ನುತ್ತಾರೆ. ನಿಮ್ಮ ಜನತಾದಳ ಜಾತ್ಯಾತೀತದಲ್ಲಿ ಜಾತ್ಯಾತೀತ ಎನ್ನುವ ಪದ ತೆಗೆಯಿರಿ. ಹಾಗೆ ಇಟ್ಟುಕೊಳ್ಳಲು ನಿಮಗೆ ಯಾವುದೇ ನೈತಿಕತೆ ಇಲ್ಲ. ಜೆಡಿಎಸ್ ಪಕ್ಷದವರು ತಮ್ಮ ಪಕ್ಷ ಸೋಲುತ್ತದೆ ಎಂಬ ಕಾರಣಕ್ಕೆ ಬಿಜೆಪಿ ಜೊತೆಗೆ ಮೈತ್ರಿ ಮಾಡಿಕೊಂಡಿದ್ದಾರೆ. ಜಾತ್ಯಾತೀತ ಪಕ್ಷ ಎಂದು ಹೇಳಿಕೊಂಡ ಜೆಡಿಎಸ್ ಅವರು ಜಾತಿವಾದಿಗಳ ಜೊತೆ ಸೇರಿಕೊಂಡಿದ್ದಾರೆ.
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ತೆರಿಗೆ ಹಂಚಿಕೆ ಅನ್ಯಾಯದ ವಿರುದ್ಧ ಅಹೋರಾತ್ರಿ ಧರಣಿಗೆ ನಿರ್ಧಾರ

ಮೈಸೂರು, ಫೆ.18(ಎಂಕೆ)– ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕಾಗುತ್ತಿರುವ ತೆರಿಗೆ ಹಂಚಿಕೆ ಅನ್ಯಾಯದ ವಿರುದ್ಧ ಕರ್ನಾಟಕದ ಜನತೆಯ ಪರವಾಗಿ ಅಹೋರಾತ್ರಿ ಹೋರಾಟಕ್ಕೆ ವಿವಿಧ ಸಂಘಟನೆಗಳಿಂದ ಒಮ್ಮತದ ತೀರ್ಮಾನ ಕೈಗೊಳ್ಳಲಾಯಿತು.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿ ಭಾನುವಾರ ವಿವಿಧ ಸಂಘಟನೆಗಳನ್ನೊಳಗೊಂಡ ಕರ್ನಾಟಕ ಜನರಂಗ ಹೋರಾಟ ಸಮಿತಿ ಸಭೆಯಲ್ಲಿ ರಾಜ್ಯಕ್ಕೆ ನ್ಯಾಯಯುತವಾಗಿ ನೀಡಬೇಕಿದ್ದ ತೆರಿಗೆ ಪಾಲನ್ನು ನೀಡ ಕೇಂದ್ರ ಸರ್ಕಾರದ ವಿರುದ್ಧ ಪಕ್ಷಾತೀತವಾಗಿ ಮೊದಲ ಹಂತದಲ್ಲಿ ಫೆ.21 ಮತ್ತು 22 ರಂದು 48 ಗಂಟೆಗಳ ಕಾಲ ಅಹೋರಾತ್ರಿ ಧರಣಿಗೆ ಒಕ್ಕೊರಲ ತೀರ್ಮಾನಕ್ಕೆ ಬರಲಾಯಿತು.



ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ರಂಗಕರ್ಮಿ ಜನಾರ್ಧನ್(ಜನ್ನಿ), ಅಹೋರಾತ್ರಿ ಧರಣಿ ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಕ್ಕಾಗುತ್ತಿರುವ ಅನ್ಯಾಯದ ವಿರುದ್ಧವೇ ಹೊರತು ಯಾವುದೇ ಪಕ್ಷದ ಪರ ಅಥವಾ ವಿರೋಧವಲ್ಲ. ಜನರ ಪರವಾಗಿ ನಡೆಸುತ್ತಿರುವ ಹೋರಾಟ ಇದಾಗಿದ್ದು, ಪಕ್ಷದ ಚಿಹ್ನೆ ಬಿಟ್ಟು ಯಾರು ಬೇಕಾದರೂ ಭಾಗವಹಿಸಬಹುದು. ನಾವು ಧರಣಿ ಮೂಲಕ ಜನ ರಾಜಕೀಯ ಮಾಡುತ್ತಿದ್ದೇವೆ ಎಂದರು.

ಪತ್ರಕರ್ತ ಗುರುರಾಜ್ ಮಾತನಾಡಿ, ಹಿರಿಯ ಸಾಹಿತಿ ದೇವನೂರು ಮಹಾದೇವ ಧರಣಿಗೆ ಚಾಲನೆ ನೀಡಲಿದ್ದು, ತೆರಿಗೆ ಹಂಚಿಕೆ ಕುರಿತು ಸಂಪನ್ಮೂಲ ವ್ಯಕ್ತಿಗಳು, ವಿಚಾರವಾದಿಗಳು, ಪ್ರಗತಿಪರ ಚಿಂತಕರು, ರೈತ ಮುಖಂಡರು ಮುಕ್ತವಾಗಿ ಮಾತನಾಡಬಹುದಾಗಿದೆ ಎಂದಲ್ಲದೆ 2ನೇ ಹಂತದಲ್ಲಿ ರಾಜ್ಯಮಟ್ಟದ ವಿಚಾರ ಸಂಕಿರಣ, 3ನೇ ಹಂತದಲ್ಲಿ ಸತ್ಯಾಗ್ರಹ ಹಾಗೂ 4ನೇ ಹಂತದಲ್ಲಿ ಅಮರಣಾಂತ ಸತ್ಯಾಗ್ರಹ ನಡೆಸಲಾಗುವುದು ಎಂದು ಮಾಹಿತಿ ನೀಡಿದರು.

ಚಿಕ್ಕಗಡಿಯಾರ: 48 ಗಂಟೆಗಳ ಕಾಲ ಅಹೋರಾತ್ರಿ ಧರಣಿ ನಡೆಸಲು ದೇವರಾಜ ಮಾರುಕಟ್ಟೆ ಎದುರಿನ ಚಿಕ್ಕಗಡಿಯಾರ ಸೂಕ್ತ ಸ್ಥಳವೆಂದು ಹಲವು ಸಂಘಟನೆಗಳ ಮುಖಂಡರು ತಿಳಿಸಿದ್ದಾರೆ. ಅದಾಗ್ಯೂ ಪೊಲೀಸರಿಂದ ಅನುಮತಿ ದೊರೆಯದಿದ್ದರೆ ಬೇರೆ ಸೂಕ್ತ ಸ್ಥಳ ತಿಳಿಸಲಾಗುವುದು. ಈಗಾಗಲೇ ಧರಣಿ ಸಂಬಮಧ ಕರಪತ್ರ ಸಿದ್ಧವಾಗಿದ್ದು, ಎಲ್ಲೆಡೆ ಹಂಚಲಾಗುವುದು ಎಂದು ತಿಳಿಸಿದರು.

ನಿವೃತ್ತ ಪ್ರಾಧ್ಯಾಪಕ ಪ್ರೊ.ನಂಜರಾಜೇ ಅರಸ್, ಒಡನಾಡಿಯ ಸ್ಟ್ಯಾನ್ಲಿ, ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಂ, ಅಶೋಕಪುರಂ ರಾಜು, ಸವಿತಾ ಪ.ಮಲ್ಲೇಶ್ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಸಭೆಯಲ್ಲಿ ಭಾಗವಹಿಸಿದ್ದರು.

ಮೂವರು ಅಂತರ್ ಜಿಲ್ಲಾ ಕಳ್ಳರ ಬಂಧನ

ಚಿನ್ನಾಭರಣ, ನಗದು, ಜಮೀನಿನ ಮೂಲ ದಾಖಲೆ ಪತ್ರಗಳ ವಶ


ಸುದೀಪ್


ಎಂ.ಎಂ.ನಿಶಾಂತ್


ಇಬ್ರಾಹಿಂ

ಮಡಿಕೇರಿ,ಫೆ.18– ಮೂವರು ಅಂತರ್ ಜಿಲ್ಲಾ ಕಳ್ಳರನ್ನು ಮಡಿಕೇರಿ ಗ್ರಾಮಾಂತರ ಠಾಣಾ ಪೊಲೀಸರು ಬಂಧಿಸಿದ್ದಾರೆ. ಮೂರ್ನಾಡು ಸಮೀಪದ ಬಲಮುರಿ ನಿವಾಸಿ ಟಿ.ಎಸ್. ಸುದೀಪ್(23), ಎಂ.ಬಾಡಗ ನಿವಾಸಿ ಎಂ.ಎಂ.ನಿಶಾಂತ್(27) ಮತ್ತು ನಾಪೋಕ್ಲು ಹಳೆ ತಾಲೂಕು ನಿವಾಸಿ ಇಬ್ರಾಹಿಂ(29) ಬಂಧಿತ ಆರೋಪಿಗಳು. ಈ ಕಳ್ಳರ ತಂಡ ಮಂಗಳೂರು, ಹಾಸನ, ಮದ್ದೂರು, ಚನ್ನಪಟ್ಟಣ, ರಾಮನಗರ ಭಾಗಗಳಲ್ಲಿ ಕಳ್ಳತನ ಮಾಡಿರುವ ಕುರಿತು ಪೊಲೀಸ್ ತನಿಖೆಯಲ್ಲಿ ಪತ್ತೆಯಾಗಿದೆ.

ಪ್ರಕರಣ ಹಿನ್ನೆಲೆ: ಫೆ.8ರಂದು ಮಡಿಕೇರಿ ತಾಲೂಕಿನ ಸಂಪಾಜೆಯ ಕೆ.ಕೆ. ವಿಜಯ್ ಕುಮಾರ್ ಅವರ ಮನೆಯಲ್ಲಿ ಕಳ್ಳತನವಾಗಿದ್ದು, ಮನೆಯಲ್ಲಿದ್ದ 47 ಗ್ರಾಂ ಚಿನ್ನಾಭರಣ, ನಗದು ಕಳವು ಮಾಡಲಾಗಿತ್ತು. ಈ ಕುರಿತು ವಿಜಯ್ ಕುಮಾರ್ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ನಡೆಸಿ 3 ಮಂದಿ ಆರೋಪಿಗಳನ್ನು ಬಂಧಿಸಿ ಅವರ ಬಳಿ ಇದ್ದ 30 ಗ್ರಾಂ ಚಿನ್ನಾಭರಣ, 4860ರೂ ನಗದು ವಶಕ್ಕೆ ಪಡೆದಿದ್ದಾರೆ. ಆರೋಪಿಗಳನ್ನು ಹೆಚ್ಚಿನ ವಿಚಾರಣೆ ನಡೆಸಿದ ಸಂದರ್ಭ ಫೆ.9ರಂದು ಕುಶಾಲನಗರ ಠಾಣಾ ವ್ಯಾಪ್ತಿಯ ಮಾದಾಪುರ ಗ್ರಾಮದ ನಿವಾಸಿ ಡಿ.ಜೀವನ್ ಎಂಬುವರ ಮನೆಗೆ ನುಗ್ಗಿ 100 ಗ್ರಾಂ ಚಿನ್ನಾಭರಣ, 1.20 ಲಕ್ಷ ರೂ. ನಗದು, ಜಮೀನಿನ ಮೂಲ ದಾಖಲೆ ಪತ್ರಗಳನ್ನು ಕಳವು ಮಾಡಿರುವುದು ಬೆಳಕಿಗೆ ಬಂದಿದೆ. ಈ ಪ್ರಕರಣದಲ್ಲಿ 59 ಗ್ರಾಂ ಚಿನ್ನಾಭರಣ, 5990 ರೂ. ನಗದನ್ನು ವಶಕ್ಕೆ ಪಡೆಯಲಾಗಿದೆ. ಮಾತ್ರವಲ್ಲದೇ ಆರೋಪಿಗಳು ಬೇರೆ ಜಿಲ್ಲೆಗಳಲ್ಲೂ ಕಳವು ನಡೆಸಿರುವುದು ಪತ್ತೆಯಾಗಿದೆ. ಮಡಿಕೇರಿ ಡಿವೈಎಸ್‌ಪಿ ಮಹೇಶ್‌ಕುಮಾರ್, ವೃತ್ತ ನಿರೀಕ್ಷಕ ಯು.ಉಮೇಶ್, ಉಪ ನಿರೀಕ್ಷಕ ರಮೇಶ್ ಕರಕಿಟ್ಟಿ ಮತ್ತು ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದಾರೆ.

ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಗೆ ಸರಿದ ಬಸ್ಸು



ನಾಪೋಕ್ಲು: ಚಾಲಕನ ನಿಯಂತ್ರಣ ತಪ್ಪಿದ ಬಸ್ಸೊಂದು ರಸ್ತೆಯ ಬದಿಗೆ ಸರಿದ ಘಟನೆ ಕೋರಂಗಳ ಎಂಬಲ್ಲಿ ಜರುಗಿದೆ.

ಬೆಂಗಳೂರು ಕಡೆಯಿಂದ ಭಾಗಮಂಡಲಕ್ಕೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ರಾಜಹಂಸ ಬಸ್ಸೊಂದು ಅಯ್ಯಂಗೇರಿ ಗ್ರಾಮದ ಕೋರಂಗಲ ಶಾಲೆಯ ಸಮೀಪ ಚಾಲಕನ ನಿಯಂತ್ರಣ ತಪ್ಪಿ ಅಪಘಾತ ಸಂಭವಿಸಿದೆ. ಅಪಘಾತದಿಂದ ಬಸ್ಸಿಗೆ ಸಣ್ಣಪುಟ್ಟ ಹಾನಿಯಾಗಿದ್ದು ಅದೃಷ್ಟವಶಾತ್ ಬಸ್ಸಲ್ಲಿದ್ದ ಪ್ರಯಾಣಿಕರು ಪ್ರಾಣಪಾಯದಿಂದ ಪಾರಾಗಿದ್ದಾರೆ.

ಪಾದಚಾರಿ ಸಾವಿಗೆ ಕಾರಣನಾಗಿದ್ದ ಚಾಲಕನ ಬಂಧನ

ಡಿಕ್ಕಿ ಹೊಡೆದು ವಾಹನ ನಿಲ್ಲಿಸದೆ ಪರಾರಿಯಾಗಿದ್ದವನನ್ನು ಪತ್ತೆ ಹಚ್ಚಿದ ಕುಶಾಲನಗರ ಪೊಲೀಸರು



ಮಡಿಕೇರಿ,ಫೆ.18– ಪಾದಚಾರಿಗೆ ಡಿಕ್ಕಿಹೊಡೆದು ವಾಹನ ನಿಲ್ಲಿಸದೇ ಪರಾರಿಯಾಗಿ ಆತನ ಸಾವಿಗೆ ಕಾರಣನಾಗಿದ್ದ ವಾಹನದ ಮಾಲೀಕನನ್ನು ಕುಶಾಲನಗರ ಸಂಚಾರಿ ಠಾಣೆ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಶನಿವಾರಸಂತೆ ಸಮೀಪದ ಹುಲಸೆ ಗ್ರಾಮದ ಶಿರಂಗಾಲ ನಿವಾಸಿ ರಜಾಕ್ ಎಂ.ಎಂ(35) ಎಂಬಾತನೇ ಬಂಧಿತ ಆರೋಪಿಯಾಗಿದ್ದಾನೆ. ಪಾದಚಾರಿಗೆ ಡಿಕ್ಕಿಹೊಡೆದ ವಾಹನವನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಘಟನೆ ಹಿನ್ನೆಲೆ: ಹೆಬ್ಬಾಲೆ ಗ್ರಾಮದ ರಾಜ್ಯ ಹೆದ್ದಾರಿ 91ರ ರಸ್ತೆಯಲ್ಲಿ ಫೆ.6ರಂದು ಬೆಳಗಿನ 6.30 ಸಮಯದಲ್ಲಿ ಓರ್ವ ವ್ಯಕ್ತಿಯ ಮೃತದೇಹ ಪತ್ತೆಯಾಗಿತ್ತು. ಘಟನಾ ಸ್ಥಳಕ್ಕೆ ಕುಶಾಲನಗರ ಠಾಣೆ ಮತ್ತು ಸಂಚಾರಿ ಠಾಣಾ ಪೊಲೀಸರು ಹಾಗೂ ಸೆನ್ ಆಫ್ ಕ್ರೈಂ ತಂಡದ ಸಿಬ್ಬಂದಿಗಳು ಕೂಡ ತೆರಳಿ ಪರಿಶೀಲನೆ ನಡೆಸಿದ್ದರು. ಈ ಸಂದರ್ಭ ವ್ಯಕ್ತಿ ವಾಹನ ಅಪಘಾತದಲ್ಲಿ ಮೃತಪಟ್ಟಿರುವುದು ಪತ್ತೆಯಾಗಿತ್ತು. ಆತ ಮೂಲತಃ ಮೂಲ್ಕಿ ಮೂಲದ ಫೆಲಿಕ್ಸ್ ಡಿಸೋಜಾ ಎಂದು ಗುರುತು ಪತ್ತೆ ಮಾಡಿ ಬಳಿಕ ಮೃತದೇಹವನ್ನು ವಾರಸುದಾರರಿಗೆ ಹಸ್ತಾಂತರಿಸಲಾಗಿತ್ತು. ಈ 'ಹಿಟ್ ಆ್ಯಂಡ್ ರನ್' ಪ್ರಕರಣದ ಕುರಿತು ಕುಶಾಲನಗರ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು.

ವಾಹನ ಡಿಕ್ಕಿ ಹೊಡೆದು ವ್ಯಕ್ತಿಯ ಸಾವಿಗೆ ಕಾರಣವಾಗಿ ತಲೆಮರೆಸಿಕೊಂಡಿದ್ದ ಆರೋಪಿಯ ಪತ್ತೆಗಾಗಿ ಸೋಮವಾರಪೇಟೆ ಡಿವೈಎಸ್‌ಪಿ ಆರ್.ವಿ.ಗಂಗಾಧರಪ್ಪ, ಕುಶಾಲನಗರ ಪಟ್ಟಣ ಠಾಣೆಯ ಉಪ ನಿರೀಕ್ಷಕ ಬಿ.ಜಿ.ಪ್ರಕಾಶ್, ಸಂಚಾರಿ ಪೊಲೀಸ್ ಠಾಣೆಯ ಉಪ ನಿರೀಕ್ಷೆ ಕುಸುಮ ಮತ್ತು ಸಿಬ್ಬಂದಿಗಳ ಒಂದು ತಂಡವನ್ನು ರಚಿಸಲಾಗಿತ್ತು. ಸ್ಥಳದಲ್ಲಿ ದೊರೆತ ಮಾಹಿತಿ ಹಾಗೂ ಕೆಲವು ಸಾಕ್ಷಿಗಳ ಸಹಿತ ತನಿಖೆ ನಡೆಸಿದ ಪೊಲೀಸರು ಆರೋಪಿ ರಜಾಕ್‌ನನ್ನು ಬಂಧಿಸಿದ್ದಾರೆ. ಅಪಘಾತಕ್ಕೆ ಕಾರಣವಾಗಿದ್ದ ಕಾರು(ಕೆಎ.51.ಎಂ.ಪಿ–8173) ಅನ್ನು ವಶಕ್ಕೆ ಪಡೆಯಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ರಸ್ತೆ ಬದಿ ತೋಡಿಗೆ ತ್ಯಾಜ್ಯ ಸುರಿದ ಬೇಕರಿ ಮಾಲೀಕರಿಗೆ 10 ಸಾವಿರ ರೂ. ದಂಡ

ಮಡಿಕೇರಿ,ಫೆ.18– ರಸ್ತೆ ಬದಿಯ ತೋಡಿಗೆ ತ್ಯಾಜ್ಯ ಸುರಿದ ಬೇಕರಿ ಮಾಲೀಕನಿಗೆ ಗೋಣಿಕೊಪ್ಪಲು ಅರುವತ್ತೊಕ್ಲು ಗ್ರಾಮ ಪಂಚಾಯಿತಿ 10 ಸಾವಿರ ರೂ. ದಂಡ ವಿಧಿಸುವ ಮೂಲಕ ಬಿಸಿ ಮುಟ್ಟಿಸಿದ ಘಟನೆ ನಡೆದಿದೆ.

ಕುಂದ ರಸ್ತೆಯ ಹಳ್ಳಿಗಟ್ಟು ತೋಡಿನ ಸೇತುವೆ ಬಳಿ ಮೋಟಾರ್ ಬೈಕಿನಲ್ಲಿ 3 ಚೀಲದಲ್ಲಿ ತ್ಯಾಜ್ಯವನ್ನು ತುಂಬಿ ತಂದಿದ್ದ ವ್ಯಕ್ತಿ ಹಳ್ಳಿಗಟ್ಟುವಿನ ಗದ್ದೆ ಬಳಿಯ ತೋಡಿನ ಸೇತುವೆ ಕೆಳಗೆ ರಾತ್ರಿ ಸುರಿಯುತ್ತಿದ್ದ. ಈ ಸಂದರ್ಭ ಸ್ಥಳೀಯರು ಆತನ್ನು ಹಿಡಿದು ಗ್ರಾಮ ಪಂಚಾಯಿತಿಗೆ ಒಪ್ಪಿಸಿದರು. ಈ ವಿಷಯ ಅರಿತು ಪಂಚಾಯಿತಿ ಉಪಾಧ್ಯಕ್ಷ ಮನೆಯಪಂಡ ಪ್ರಾಣ್ ಬೋಪ್ಪಣ್ಣ, ಸದಸ್ಯ ತಿತಮಾಡ ಸುಗುಣ ಸೋಮಯ್ಯ ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿ, ಈ ಕುರಿತು ಪೊನ್ನಂಪೇಟೆ ಪೊಲೀಸರಿಗೆ ದೂರು ನೀಡಿದರು. ಸ್ಥಳಕ್ಕೆ ಬಂದ ಪೊಲೀಸರು ಬೇಕರಿ ಮಾಲೀಕನಿಗೆ ಎಚ್ಚರಿಕೆ ನೀಡಿದ್ದಲ್ಲದೇ, ಕಸವನ್ನು ಸುರಿದ ವ್ಯಕ್ತಿಯಿಂದಲೇ ತ್ಯಾಜ್ಯ ತೆರವುಗೊಳಿಸಿದರು. ಇನ್ನು ಕಸ ಸುರಿದು ನೀರಿನ ಮೂಲದ ಮಾಲಿನ್ಯಕ್ಕೆ ಕಾರಣನಾದ ಪೊನ್ನಂಪೇಟೆಯ ಬೇಕರಿಯೊಂದರ ಮಾಲೀಕರಿಗೆ ಅರುವತ್ತೊಕ್ಲು ಗ್ರಾಪಂ 10 ಸಾವಿರ ದಂಡ ವಿಧಿಸಿತು. ಇನ್ನು ಮುಂದೆ ಈ ಸ್ಥಳದಲ್ಲಿ ಸಿ.ಸಿ. ಕ್ಯಾಮೆರಾ ಅಳವಡಿಸಲಾಗುವುದು. ರಸ್ತೆ ಬದಿ ಹಾಗೂ ಹೊಳೆ ದಡಗಳಲ್ಲಿ ತ್ಯಾಜ್ಯ ಸುರಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು.



ಕೇಟೋಳಿರ ಡಾ.ನಿಷ್ಮ ನಿಧನ

ನಾಪೋಕ್ಲು: ಎಮ್ಮೆಮಾಡು ಗ್ರಾಮದ ನಿವಾಸಿ ಚಾಮುಂಡಿ ಗ್ರೂಪ್ಸ್‌ನ ಮಾಲೀಕರು ಆಗಿರುವ ಕೇಟೋಳಿರ ಮೋಹನ್ ಅವರ ಪತ್ನಿ, ಡಾ.ನಿಷ್ಮ (41) ಶುಕ್ರವಾರ ನಿಧನರಾಗಿದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ ಕೊಳಕೇರಿಯ ತೋಟದಲ್ಲಿ ನೆರವೇರಿತು. ಮೃತರು ಪತಿ, ಓರ್ವ ಪುತ್ರ, ಪುತ್ರಿ, ಸೇರಿದಂತೆ ಅಪಾರ ಬಂಧು ಬಳಗದವರನ್ನು ಅಗಲಿದ್ದಾರೆ.

ವಿ.ವಿ. ಅಶ್ವತ್ ಕುಮಾರ್



ನಾಪೋಕ್ಲು: ಮೂರ್ನಾಡಿನ ಪಟ್ಟಣದ ನಿವಾಸಿ ವಿಸ್ಮಯ ಕಾಂಪ್ಲೆಕ್ಸ್ ನ ಮಾಲೀಕರಾದ ವಿ.ವಿ. ಅಶ್ವತ್ ಕುಮಾರ್ (ಅಶೋಕ್) ಭಾನುವಾರ ನಿಧನ ಹೊಂದಿದ್ದಾರೆ. ಅವರಿಗೆ 68 ವರ್ಷ ವಯಸ್ಸಾಗಿತ್ತು. ಮೃತರ ಅಂತ್ಯಕ್ರಿಯೆ ಭಾನುವಾರ ಮೂರ್ನಾಡಿನ ಮೃತರ ಸ್ವಗ್ರಾಮದಲ್ಲಿ ನೆರವೇರಿತು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿಯನ್ನು ಸೇರಿದಂತೆ ಅಪಾರ ಬಂಧು ಬಳಗದವರನ್ನು ಅಗಲಿದ್ದಾರೆ.

ವಿರಾಜಪೇಟೆಯಲ್ಲಿ ಸಂವಿಧಾನ ಜಾಗೃತಿ ಜಾಥಾ ಸಮಾರೋಪ

ತಾಲೂಕಿನ 38 ಗ್ರಾಪಂಗಳಲ್ಲಿ ಜಾಥಾ, ಅಧಿಕಾರಿಗಳು, ಜನಪ್ರತಿನಿಧಿಗಳಿಂದ ಸ್ವಾಗತ


ಸಂವಿಧಾನ ಜಾಗೃತಿ ಜಾಥಾ ಸಮಾರೋಪ ಸಮಾರಂಭದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮ.

ವಿರಾಜಪೇಟೆ, ಫೆ.18– ತಾಲೂಕಿನ 38 ಗ್ರಾಮ ಪಂಚಾಯಿತಿಗಳಲ್ಲಿ ಜಾಥಾ ನಡೆಸಿ ಸಮಾರೋಪ ಸಮಾರಂಭಕ್ಕಾಗಿ ವಿರಾಜಪೇಟೆ ಪುರಸಭೆ ವ್ಯಾಪ್ತಿಗೆ ಆಗಮಿಸಿದ ಸಂವಿಧಾನ ಜಾಗೃತಿ ಜಾಥಾವನ್ನು ಪುರಸಭೆ ಅಧಿಕಾರಿಗಳು ಮತ್ತು ಸದಸ್ಯರು ಬರಮಾಡಿಕೊಂಡರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ತಾಲೂಕು ಆಡಳಿತ, ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆಯ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಸಂವಿಧಾನ ಜಾಗೃತಿ ಜಾಥಾ ಗಡಿಯಾರ ಕಂಬದ ಬಳಿಯಿರುವ ಕಾರು ನಿಲ್ದಾಣದಲ್ಲಿ ಆಯೋಜಿಸಲಾಗಿದ್ದ ಸಮಾರೋಪ ಸಮಾರಂಭದ ಸ್ಥಳಕ್ಕೆ ಆಗಮಿಸಿತು.

ಈ ವೇಳೆ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಭಾವಚಿತ್ರಕ್ಕೆ ಅತಿಥಿ ಗಣ್ಯರು ಪುಷ್ಪ ನಮನ ಸಲ್ಲಿಸಿದರು. ಅಕ್ರಮ ಸಕ್ರಮ ಅಧ್ಯಕ್ಷ ಆರ್.ಕೆ.ಅಬ್ದುಲ್ ಸಲಾಂ ಅವರು ಜ್ಯೋತಿ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಸರಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಪವಿತ್ರ ರೈ ಮಾತನಾಡಿ ನಾವುಗಳು ಸಂವಿಧಾನವನ್ನು ರಕ್ಷಿಸಿದರೆ ಸಂವಿಧಾನ ನಮ್ಮನ್ನು ರಕ್ಷಿಸುತ್ತದೆ. ಭಾರತ ವಿಶ್ವದಲ್ಲಿಯೇ ಅತ್ಯಂತ ಬಲಿಷ್ಠ ಪ್ರಜಾಪ್ರಭುತ್ವ ರಾಷ್ಟ್ರ. ಹಲವಾರು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತ ನಮ್ಮ ಸಂವಿಧಾನಕ್ಕೆ 75ರ ಸಂಭ್ರಮ ಆಚರಿಸುತ್ತಿದೆ ಎಂದರು.

ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ಪ್ರೀತಿ ಚಿಕ್ಕಮಾದಯ್ಯ ಮಾತನಾಡಿ, ಭಾರತದ ಸಂವಿಧಾನ ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ ಕೊಡುಗೆ ಮತ್ತು ಅಮೂಲ್ಯವಾದದ್ದು, ಸಾಮಾಜಿಕ ಸಮಾನತೆ ಸಾರಿದ ಬುದ್ಧ ಮತ್ತು ಬಸವಣ್ಣ ಹಾಗೂ ಕಾವೇರಿ ಮಾತೆಯ ಪುತ್ಥಳಿಯನ್ನು ಸಂವಿಧಾನ ಜಾಗೃತಿ ಜಾಥದಲ್ಲಿ ಇರಿಸಿ ಜನತೆಯ ಉಳಿವಿಗಾಗಿ ಜನರಿಗೆ ಶಕ್ತಿ ನೀಡುವಂತೆ ಸರ್ವಕಡೆಗಳಲ್ಲಿ ಹೊತ್ತುಕೊಂಡು ಹೋಗುತ್ತಿದ್ದೇವೆ ಎಂದರು.

ವಕೀಲರಾದ ಅನುಪಮ ಕಿಶೋರ್ ಸಭೆಯನ್ನುದ್ದೇಶಿಸಿ ಮಾತನಾಡಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಪ್ರಕಾಶ್ ಪ್ರತಿಜ್ಞಾವಿಧಿ ಬೋಧಿಸಿದರು, ಅತಿಥಿಗಳಾಗಿ ಕ್ಷೇತ್ರ ಸಂಪನ್ಮೂಲ ಸಮನ್ವಾಯಧಿಕಾರಿ ವನಜಾಕ್ಷಿ, ಸಂವಿಧಾನ ಜಾಥಾದ ನೋಡಲ್ ಅಧಿಕಾರಿ ಬಾಲಸುಬ್ರಮಣ್ಯ, ಅಂಬೇಡ್ಕರ್ ಭವನ ಸಮಿತಿಯ ವಿ.ಕೆ.ಸತೀಶ್ ಕುಮಾರ್, ಮಹದೇವ್, ದಲಿತ ಸಂಘರ್ಷ ಸಮಿತಿಯ ಗಾಯತ್ರಿ ನರಸಿಂಹ, ಹೆಚ್.ಗೋಪಾಲ ಭಾಗವಹಿಸಿದ್ದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ ಪುರಸಭೆ ಸದಸ್ಯ ವಿ.ಆರ್.ರಜನಿಕಾಂತ್ ಕೂಡ ಮಾತನಾಡಿದರು. ಪುರಸಭೆ ಸದಸ್ಯ ಮೊಹ್ಮದ್ ರಫಿ ಸಂವಿಧಾನದ ಮಹತ್ವದ ಬಗ್ಗೆ ಮಾತನಾಡಿದರು. ಪುರಸಭೆ ಸದಸ್ಯರಾದ ಟಿ.ಎಂ. ಸುನಿತ ಜೂನ, ಹೆಚ್.ಪಿ.ಮಹದೇವ, ಫಸಿಹಾ ತಬಸುಮ್, ಅಗಸ್ಟಿನ್ ಬೆನ್ನಿ ಉಪಸ್ಥಿತರಿದ್ದರು. ಮುಖ್ಯಾಧಿಕಾರಿ ಚಂದ್ರಕುಮಾರ್ ಸ್ವಾಗತಿಸಿದರು. ಬಿಆರ್‌ಸಿ ಗೀತಾಂಜಲಿ ಮತ್ತು ರೋಟರಿ ಶಾಲಾ ವಿಶಾಲಾಕ್ಷಿ ನಿರೂಪಿಸಿದರೆ, ಪುರಸಭೆ ಸಿಬ್ಬಂದಿ ಸುಲೇಖ ವಂದಿಸಿದರು.

ಮೊದಲಿಗೆ ಸಂವಿಧಾನ ಜಾಗೃತಿ ಜಾಥಾ ವಿರಾಜಪೇಟೆಗೆ ಆಗಮಿಸಿದ್ದ ಸಂದರ್ಭ ಎಲ್ಲಾ ಶಾಲಾ ಕಾಲೇಜು ವಿದ್ಯಾರ್ಥಿಗಳು ಪಂಜಾರುಪೇಟೆ ಕಾರು ನಿಲ್ದಾಣದವರೆಗೆ ಮೆರವಣಿಗೆಯಲ್ಲಿ ಭಾಗವಹಿಸಿದ್ದರು ಈ ಸಂದರ್ಭ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಭಾರತದ ಸಂವಿಧಾನದ ಕುರಿತು 115 ಶಾಲೆಗಳ 168 ವಿದ್ಯಾರ್ಥಿಗಳಿಗೆ ಸ್ಪರ್ಧಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು, ಅತಿಥಿಗಳು ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ವಿತರಿಸಿದರು.

ವೇದಿಕೆಯ ಆವರಣದಲ್ಲಿ ವಿವಿಧ ಸಾಂಸ್ಕೃತಿಕ ನೃತ್ಯ, ಪೂಜಾ ಕುಣಿತ, ಹಾಡುಗಳು, ಮೈಸೂರಿನ ಮಡಿಲು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯಿಂದ ನಾಟಕ ಚೆನ್ನಾಗಿ ಮೂಡಿ ಬಂದಿತು. ಪುರಸಭೆ ವತಿಯಿಂದ ಭೋಜನದ ವ್ಯವಸ್ಥೆ ಮಾಡಲಾಗಿತ್ತು.

ನಾಲ್ವರ ದುರ್ಮರಣ

ಅಮರಾವತಿ: ಮಹಾರಾಷ್ಟ್ರದ ಅಮರಾವತಿಯಲ್ಲಿ ಟೆಂಪೋ–ಟ್ರಕ್ ನಡುವೆ ಡಿಕ್ಕಿ ಸಂಭವಿಸಿ ಭೀಕರ ಅಪಘಾತ ಸಂಭವಿಸಿದ್ದು, ಘಟನೆಯಲ್ಲಿ ನಾಲ್ವರು ಸಾವನ್ನಪ್ಪಿರುವ ಘಟನೆ ನಡೆದಿದೆ. ನಂದಗಾಂವ್ ಖಂಡೇಶ್ವರ ತಾಲೂಕಿನ ಶಿಂಗ್ಣಾಪುರ ಘಾಟಾದಲ್ಲಿ ಬೆಳಗ್ಗೆ 7:30 ರ ಸುಮಾರಿಗೆ ಅಪಘಾತ ಸಂಭವಿಸಿದ್ದು, ಟೆಂಪೋದಲ್ಲಿ ಅಮರಾವತಿ ನಗರದ ಕ್ರಿಕೆಟ್ ತಂಡದ 21 ಸದಸ್ಯರಿದ್ದರು.

ಕಾಗಲವಾಡಿಯಲ್ಲಿ ಮಡಿವಾಳ ಮಾಚಿದೇವರ ಜಯಂತಿ


ಕಾಗಲವಾಡಿಯಲ್ಲಿ ಶ್ರೀವೀರ ಮಡಿವಾಳ ಮಾಚಿದೇವರ ಜಯಂತಿ ಆಚರಿಸಲಾಯಿತು.

ಚಾಮರಾಜನಗರ, ಫೆ.18– ತಾಲೂಕಿನ ಕಾಗಲವಾಡಿಯಲ್ಲಿ ಮಡಿವಾಳ ಸಮಾಜದಿಂದ ಶ್ರೀವೀರ ಮಡಿವಾಳ ಮಾಚಿದೇವರ ಜಯಂತಿ ಆಚರಿಸಲಾಯಿತು.

ಗ್ರಾಮದ ವಿನಾಯಕ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಸಮುದಾಯದ ಮುಖಂಡರು ಮಡಿವಾಳ ಮಾಚಿದೇವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮೆರವಣಿಗೆಗೆ ಚಾಲನೆ ನೀಡಿದರು. ಮಡಿವಾಳ ಮಾಚಿದೇವರ ಭಾವಚಿತ್ರದ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿ ಗ್ರಾಮದ ಹೊಸ ಬಡಾವಣೆಯ ಮಡಿವಾಳರ ಬೀದಿಯಲ್ಲಿ ಮುಕ್ತಾಯಗೊಂಡಿತು. ವೀರಗಾಸೆ, ತಮಟೆ, ನಾದಸ್ವರ ಕಲಾ ತಂಡಗಳು ಮೆರವಣಿಗೆಗೆ ಮೆರಗು ನೀಡಿದವು.

ತಾಲೂಕು ಮಡಿವಾಳ ಸಮಾಜದ ಮಾಜಿ ಅಧ್ಯಕ್ಷ ಎ.ಸಿದ್ದಯ್ಯ ಮಾತನಾಡಿ, ವೀರ ಮಡಿವಾಳ ಮಾಚಿದೇವರು ಸರ್ವರಿಗೂ ಸಮಪಾಲು–ಸಮಬಾಳು ಒದಗಿಸಲು ಸಾಮಾಜಿಕ ಕ್ರಾಂತಿಯನ್ನೇ ಕೈಗೊಂಡಿದ್ದರು. ಅವರು ನಮ್ಮ ಸಮುದಾಯದ ಕುಲದೇವರಾಗಿರುವುದು ನಮ್ಮೆಲ್ಲರ ಸೌಭಾಗ್ಯ. ಅವರ ಆದರ್ಶಗಳನ್ನು ನಾವೆಲ್ಲರೂ ಮೈಗೂಡಿಸಿಕೊಳ್ಳಬೇಕು ಎಂದರು.

ತಾಲೂಕು ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಉಪಾಧ್ಯಕ್ಷ ನಾಗೇಂದ್ರ ಮಾತನಾಡಿ, ವೀರಮಡಿವಾಳ ಮಾಚಿದೇವರು ಕಾಯಕ ಯೋಗಿಯಾಗಿದ್ದು ಸಮಾನತೆಯ ಹರಿಕಾರರಾಗಿದ್ದರು. 12ನೇ ಶತಮಾನದಲ್ಲೇ ಬಸವಣ್ಣನವರ ತತ್ವಾದರ್ಶ ಅನುಸರಿಸಿ ಸಮಾನತೆಗಾಗಿ ಶ್ರಮಿಸಿದ್ದ ಅವರು ವಚನ ಸಾಹಿತ್ಯ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂದರು.

ಕಾರ್ಯಕ್ರಮದಲ್ಲಿ ವೀರ ಮಡಿವಾಳ ಸಮಾಜದ ಯಜಮಾನರಾದ ಸ್ವಾಮಿ, ವೆಂಕಟೇಶ್, ಚಿಕ್ಕ ಯಜಮಾನ ಮಧು, ಮುಖಂಡರಾದ ಕೆ.ಎನ್. ಮರಿಸ್ವಾಮಿ, ಎ.ಮಹದೇವಸ್ವಾಮಿ, ಬ್ಯಾಂಕ್ ನಾಗರಾಜು, ಪೊಲೀಸ್ ಮುರಳಿ, ಕೆ.ಎನ್.ನಂಜುಂಡಸ್ವಾಮಿ, ನಂಜುಂಡಸ್ವಾಮಿ, ಟೈಲರ್ ನಂಜುಂಡಸ್ವಾಮಿ, ರೇವಣ್ಣ, ನಾಗರಾಜು, ಡಾ.ನಾಗರಾಜು, ಬಸವರಾಜು, ರೇಚಣ್ಣ, ನಾಗೇಂದ್ರ, ರಾಜು, ವಿಜಯಕುಮಾರ್, ನಿತಿನ್ ಕುಮಾರ್, ಅಜಯ್ ಕುಮಾರ್, ಗೌತಮ್, ಚಂದು, ಭೋಜಶೆಟ್ಟಿ, ಲಿಂಗಪ್ಪ, ಪುಟ್ಟಶೆಟ್ಟಿ, ಪಿ.ಕೆ.ರಾಜಪ್ಪ, ಸುಧಾಕರ್, ಕೆ.ಎನ್.ಕೃಷ್ಣ, ಶ್ರೀಕಂಠಸ್ವಾಮಿ ಇತರರಿದ್ದರು.

ಗುಂಡ್ಲುಪೇಟೆ ತಾಲೂಕಿನ ವಿವಿಧ ಗ್ರಾಪಂ ವ್ಯಾಪ್ತಿಯಲ್ಲಿ

ಸಂವಿಧಾನ ಜಾಗೃತಿ ಜಾಥಾಗೆ ಸಂಭ್ರಮದ ಸ್ವಾಗತ



ಚಾಮರಾಜನಗರ, ಫೆ.18– ಗುಂಡ್ಲುಪೇಟೆ ತಾಲೂಕಿನ ಹಂಗಳ, ಮಂಗಲ, ಕಣ್ಣೇಗಾಲ ಗ್ರಾಪಂ ವ್ಯಾಪ್ತಿಯಲ್ಲಿ ಸಂವಿಧಾನ ಜಾಗೃತಿ ಜಾಥಾಗೆ ಸಂಭ್ರಮದ ಸ್ವಾಗತ ನೀಡಲಾಯಿತು.

ಮೊದಲಿಗೆ ಸಂವಿಧಾನ ಜಾಗೃತಿ ಜಾಥಾ ಹಂಗಳಕ್ಕೆ ಆಗಮಿಸಿದ ವೇಳೆ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಪುಷ್ಪಾರ್ಚನೆ ನೆರವೇರಿಸಲಾಯಿತು. ಬಳಿಕ ವಿವಿಧ ಕಲಾ ತಂಡಗಳೊಂದಿಗೆ ಸ್ತಬ್ಧಚಿತ್ರ ಮೆರವಣಿಗೆ ಮಾಡಲಾಯಿತು. ನೀಲಿ ಸೀರೆಯುಟ್ಟ ಮಹಿಳೆಯರು ಪೂರ್ಣಕುಂಭ ಹೊತ್ತು ಸಾಗಿದರು. ವಿದ್ಯಾರ್ಥಿಗಳು ಸಮವಸ್ತ್ರದಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರವುಳ್ಳ ಧ್ವಜ ಹಿಡಿದು ಗಮನ ಸೆಳೆದರು.

ಹಂಗಳದಲ್ಲಿ ಕಾಡಾ ಮಾಜಿ ಅಧ್ಯಕ್ಷ ಹೆಚ್.ಎಸ್. ನಂಜಪ್ಪ, ಗ್ರಾಪಂ ಅಧ್ಯಕ್ಷೆ ರೂಪಾ, ಉಪಾಧ್ಯಕ್ಷ ನಾಗರಾಜು, ಸದಸ್ಯರು, ಪಿಡಿಓ ಶಾಂತಮಲ್ಲಪ್ಪ, ನೋಡಲ್ ಅಧಿಕಾರಿ ಮಧುಸೂದನ್, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಪಾಲ್ಗೊಂಡರು.

ಮಂಗಲಕ್ಕೆ ಆಗಮಿಸಿದ ಸಂವಿಧಾನ ಜಾಗೃತಿ ಜಾಥಾದಲ್ಲಿ ಎತ್ತಿನಗಾಡಿಗಳ ಮೆರವಣಿಗೆ, ಅಂಬೇಡ್ಕರ್ ವೇಷಭೂಷಣ ಧರಿಸಿದ ಮಕ್ಕಳು ಭಾಗವಹಿಸಿದ್ದು ವಿಶೇಷವಾಗಿತ್ತು. ಕಳಶ ಹೊತ್ತ ಮಹಿಳೆಯರು ಮೆರವಣಿಗೆಯಲ್ಲಿ ಪಾಲ್ಗೊಂಡರು. ಮಕ್ಕಳಿಂದ ನೃತ್ಯ ಹಾಗೂ ಭಾಷಣ ಕಾರ್ಯಕ್ರಮ ನಡೆದವು. ಪುಸ್ತಕ ಜೋಳಿಗೆ ಗಮನ ಸೆಳೆಯಿತು.

ಮಂಗಲ ಗ್ರಾಪಂ ಅಧ್ಯಕ್ಷ ಬಿ.ಮಾದಪ್ಪ, ಉಪಾಧ್ಯಕ್ಷೆ ಕಮಲ, ಸದಸ್ಯರು, ನೋಡಲ್ ಅಧಿಕಾರಿ ತಾಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಹೇಮಾವತಿ, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

ಕಣ್ಣೇಗಾಲ ಗ್ರಾಮದಲ್ಲಿ ಸಂವಿಧಾನ ಜಾಗೃತಿ ಜಾಥಾಗೆ ಅದ್ಧೂರಿ ಸ್ವಾಗತ ನೀಡಲಾಯಿತು. ಬೈಕ್ ರ‍್ಯಾಲಿ, ಅಲಂಕೃತ ಎತ್ತಿನಗಾಡಿಗಳು ಜಾಥಾದೊಂದಿಗೆ ಸಾಗಿದವು. ಅಕ್ಕ ಐಎಎಸ್ ಅಕಾಡೆಮಿ ಡಾ.ಶಿವಕುಮಾರ್, ಗ್ರಾಪಂ ಅಧ್ಯಕ್ಷೆ ಮಂಗಳಮ್ಮ, ಉಪಾಧ್ಯಕ್ಷೆ ಯಮುನ, ಸದಸ್ಯರು, ವಿವಿಧ ಸಂಘಟನೆಗಳ ಪದಾಧಿಕಾರಿಗಳು ಜಾಥಾ ಬರಮಾಡಿಕೊಂಡರು.

ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾದ ಮಣಿಕಂಠಚಾರ್, ಕಾಡಾ ಮಾಜಿ ಅಧ್ಯಕ್ಷ ಹೆಚ್.ಎಸ್.ನಂಜಪ್ಪ, ಸಮಾಜ ಕಲ್ಯಾಣ ಇಲಾಖೆ ತಾಲೂಕು ಸಹಾಯಕ ನಿರ್ದೇಶಕ ಮೋಹನ್ ಕುಮಾರ್, ಕಾರ್ಯಕ್ರಮದ ನೋಡಲ್ ಅಧಿಕಾರಿ ಪಶುಸಂಗೋಪನಾ ಇಲಾಖೆ ಸಹಾಯಕ ನಿರ್ದೇಶಕ ಮೋಹನ್, ಪಿಡಿಓ ಪಾಲಾಕ್ಷಸ್ವಾಮಿ, ವಿವಿಧ ಸಂಘಟನೆಗಳ ಮುಖಂಡರು, ಇನ್ನಿತರ ಗಣ್ಯರು ಭಾಗವಹಿಸಿದ್ದರು.

ಜಲಾಶಯಗಳಿಂದ ಆದ್ಯತೆ ಮೇರೆಗೆ ಕೆರೆಗಳಿಗೆ ನೀರು

ಚಾಮರಾಜನಗರ, ಫೆ.18– ಜಿಲ್ಲೆಯ ಸುವರ್ಣಾವತಿ ಮತ್ತು ಚಿಕ್ಕಹೊಳೆ ಜಲಾಶಯಗಳಲ್ಲಿ ಲಭ್ಯವಿರುವ ನೀರಿನ ಮಟ್ಟ ಮತ್ತು ಸಂಗ್ರಹಣೆ ಪರಿಗಣಿಸಿ ಮತು ಜುಲೈವರೆಗೆ ಕುಡಿಯುವ ನೀರಿನ ಪೂರೈಕೆ ಗಮನದಲ್ಲಿಟ್ಟುಕೊಂಡು ಸುವರ್ಣಾವತಿ ಮತ್ತು ಚಿಕ್ಕಹೊಳೆ ಜಲಾಶಯದ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ನೀರಾವರಿ ಉದ್ದೇಶಕ್ಕೆ ನೀರು ಹರಿಸಲಾಗುವುದಿಲ್ಲ. ಬದಲಿಗೆ ಕುಡಿಯುವ ನೀರಿನ ಸಲುವಾಗಿ ಆದ್ಯತೆ ಮೇರೆಗೆ ಕೆರೆಗಳಿಗೆ ನೀರು ಹರಿಸಲಾಗುವುದು ಎಂದು ಕಾವೇರಿ ನೀರಾವರಿ ನಿಗಮ ತಿಳಿಸಿದೆ.

ಸುವರ್ಣಾವತಿ ಜಲಾಶಯ ಯೋಜನೆ ಬಲದಂಡೆ ನಾಲೆ ಹಾಗೂ ಎಡದಂಡೆ ನಾಲೆಯಿಂದ ಮತ್ತು ಚಿಕ್ಕಹೊಳೆ ಜಲಾಶಯ ಯೋಜನೆಯ ಬಂಡಿಗೆರೆ ನಾಲೆ ಹಾಗೂ ಎಡದಂಡೆ ನಾಲೆಯಿಂದ ನೀರಾವರಿ ಉದ್ದೇಶಕ್ಕಾಗಿ ನೀರು ಹರಿಸಲಾಗುವುದಿಲ್ಲ. ಕುಡಿಯುವ ನೀರನ್ನು ಆದ್ಯತೆ ಮೇರೆಗೆ ಹರಿಸಲಾಗುವುದು. ಫೆ.15ರಿಂದ ಮೇ ಅಂತ್ಯದವರೆಗೆ ನಾಲೆಗಳಲ್ಲಿ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಸಲುವಾಗಿ ಆದ್ಯತೆ ಮೇರೆಗೆ ಕೆರೆಗಳಿಗೆ ನೀರು ಹರಿಸಲಾಗುವುದು.

ಅಚ್ಚುಕಟ್ಟುದಾರರು ಯಾವುದೇ ಬೆಳೆ ಬೆಳೆಯಬಾರದು. ಬೆಳೆ ನಷ್ಟವಾದಲ್ಲಿ ಇಲಾಖೆ ಜವಾಬ್ದಾರರಲ್ಲ ಹಾಗೂ ರೈತ ಬಾಂಧವರಿಗೆ ಬೆಳೆ ಪರಿಹಾರ ಕೇಳುವ ಹಕ್ಕು ಇರುವುದಿಲ್ಲ. ಹಾಲಿ ಸುವರ್ಣಾವತಿ ನದಿಯು ಮೂಲ ಆಕೃತಿ ಕಳೆದುಕೊಂಡಿರುವುದರಿಂದ ನದಿ, ನಾಲೆಗಳ, ಕೆರೆಗಳಿಗಾಗಿ ಕುಡಿಯುವ ನೀರಿಗಾಗಿ ಜನ ಜಾನುವಾರುಗಳಿಗಾಗಿ ನೀರನ್ನು ಹರಿಸಲಾಗುವುದು. ಅಚ್ಚುಕಟ್ಟಿನ ರೈತ ಬಾಂಧವರು ಸಹಕರಿಸಬೇಕಾಗಿ ಕೋರಲಾಗಿದೆ ಎಂದು ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಲು ಒತ್ತು ನೀಡಿ



ಸಂತ ಜೋಸೆಫ್ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ವಾರ್ಷಿಕೋತ್ಸವದಲ್ಲಿ ಗಣ್ಯರನ್ನು ಗೌರವಿಸಲಾಯಿತು.

ಚಾಮರಾಜನಗರ, ಫೆ.18– ಶಿಕ್ಷಣದಿಂದ ಮಾತ್ರ ಪ್ರಗತಿ ಸಾಧ್ಯ ಹೀಗಾಗಿ ಪೋಷಕರು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸಲು ಹೆಚ್ಚಿನ ಒತ್ತು ನೀಡಬೇಕು ಎಂದು ಸಮಾಜ ಸೇವಕ ಎಲ್.ಸುರೇಶ್ ತಿಳಿಸಿದರು.

ನಗರದ ಸಂತ ಜೋಸೆಫ್ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ವಾರ್ಷಿಕೋತ್ಸವದ ಅಂಗವಾಗಿ ಏರ್ಪಡಿಸಿದ್ದ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮನೆಯೇ ಮೊದಲ ಪಾಠಶಾಲೆ ಎಂಬಂತೆ ಮನೆಯಿಂದಲೇ ಮಕ್ಕಳಿಗೆ ಶಿಕ್ಷಣ, ಸಂಸ್ಕಾರ ಹಾಗೂ ಶಿಸ್ತು ಕಲಿಸಬೇಕು. ಪೋಷಕರು ಮಕ್ಕಳನ್ನು ಶಾಲೆಗೆ ಸೇರಿಸುವ ಜೊತೆಗೆ ಅವರ ಕಲಿಕೆ ಬಗ್ಗೆ ಆಸಕ್ತಿ ವಹಿಸಿ ಇಂತಹ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬೇಕು ಎಂದರು.

ಎಲ್ಲಾ ರಂಗದಲ್ಲೂ ಮಕ್ಕಳು ಪ್ರಬುದ್ಧತೆ ಮೆರೆದಾಗ ಮಾತ್ರ ಪರಿಪೂರ್ಣ ಶಿಕ್ಷಣ ಅವರಿಗೆ ದೊರೆಯುತ್ತದೆ. ಆ ನಿಟ್ಟಿನಲ್ಲಿ ಸಂತ ಜೋಸೆಫ್ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳ ಭೌತಿಕ ವಿಕಸನಕ್ಕೆ ಹೆಚ್ಚಿನ ಒತ್ತು ನೀಡುತ್ತಿದೆ. ವಿಶಾಲವಾದ ಆಟದ ಮೈದಾನ, ಆಟೋಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ವಿಶಾಲ ವೇದಿಕೆ, ಗುಣಮಟ್ಟದ ಶಿಕ್ಷಣಕ್ಕೆ ಉತ್ತಮ ಬೋಧನಾ ವರ್ಗವಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು. ಶಾಲೆ ಮುಖ್ಯ ಶಿಕ್ಷಕಿ ಸಿಸ್ಟರ್ ಶಾಂತಿ ರೋಸ್ ಮಾತನಾಡಿ, ನರ್ಸರಿಯಿಂದ 7ನೇ ತರಗತಿವರೆಗೆ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಶ್ರಮಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು. ಈ ವೇಳೆ ಗೌರಿ, ಪೊಲೀಸ್ ಇಲಾಖೆಯ ಗುರುಪ್ರಸಾದ್, ಸಮಾಜ ಸೇವಕ ಎಲ್.ಸುರೇಶ್ ಅವರನ್ನು ಸನ್ಮಾನಿಸಲಾಯಿತು. ಸಹಶಿಕ್ಷಕ ವೃಂದದವರು ಇದ್ದರು.

ನೀರು ಹರಿಸುತ್ತಿರುವ ಕ್ರಮ ಖಂಡಿಸಿ ಪ್ರತಿಭಟನೆ

ಚಾಮರಾಜನಗರ, ಫೆ18– ತಮಿಳುನಾಡಿಗೆ ಕಾವೇರಿ ನೀರನ್ನು ಹರಿಸುತ್ತಿರುವ ಕ್ರಮ ಖಂಡಿಸಿ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು 168ನೇ ದಿನವಾದ ಭಾನುವಾರ ಕರಿಬೇವಿನಸೊಪ್ಪು ಹಿಡಿದು ಪ್ರತಿಭಟನೆ ನಡೆಸಿದರು. ನಗರದ ಭುವನೇಶ್ವರಿ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಹೆದ್ದಾರಿ ಸಂಚಾರ ತಡೆದು ಪ್ರತಿಭಟನೆ ನಡೆಸಿ ಕೇಂದ್ರ, ರಾಜ್ಯ ಹಾಗೂ ತಮಿಳುನಾಡು ಸರ್ಕಾರ ಮತ್ತು ಕಾವೇರಿ ನಿರ್ವಹಣಾ ಮಂಡಳಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ಸೇನಾ ಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ಸರ್ಕಾರಗಳು ಎಲೆಕ್ಷನ್ ಬಂದರೆ ಬರೀ ಓಟಿಗಾಗಿ ನಮ್ಮನ್ನು ಕರಿಬೇವಿನ ಸೊಪ್ಪಿನ ಹಾಗೆ ಬಳಸಿಕೊಳ್ಳುತ್ತಿದ್ದಾರೆಯೇ ವಿನಹ ಕಾವೇರಿ ವಿಚಾರ ಸೇರಿದಂತೆ ಇನ್ನಿತರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಿ ನ್ಯಾಯ ಒದಗಿಸುತ್ತಿಲ್ಲ ಎಂದು ಆರೋಪಿಸಿದರು.

ಎಲ್ಲಿಯವರೆಗೆ ನೀವು ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸುವುದನ್ನು ನಿಲ್ಲಿಸುವುದಿಲ್ಲವೋ ಅಲ್ಲಿಯವರೆಗೂ ಉಗ್ರ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಚಾ.ವೆಂ. ರಾಜ್‌ಗೋಪಾಲ್, ಗಡಿನಾಡು ಕನ್ನಡ ರಕ್ಷಣ ಹೋರಾಟ ವೇದಿಕೆ ಅಧ್ಯಕ್ಷ ಚಾ.ರಂ. ಕುಮಾರ್, ರಾಜು, ನಿಜಧ್ವನಿ ಗೋವಿಂದರಾಜು, ವೀರಭದ್ರ, ನಂಜುಂಡಶೆಟ್ಟಿ, ರಾಜಪ್ಪ, ರವಿಚಂದ್ರ, ಆಟೋ ನಾಗೇಶ್ ಮತ್ತಿತರರಿದ್ದರು.

ಶ್ರೀಲಕ್ಷ್ಮಿದೇವಿ ಜಾತ್ರೆಗೆ ಮೂಲಸೌಕರ್ಯ ಕಲ್ಪಿಸಲು ಅಗತ್ಯ ಕ್ರಮ


ಚಂದಕವಾಡಿ ಗ್ರಾಪಂನಲ್ಲಿ ನಡೆದ ವಿಶೇಷ ಸಭೆಯಲ್ಲಿ ಗ್ರಾಪಂ ಅಧ್ಯಕ್ಷ ನಟರಾಜು ಮಾತನಾಡಿದರು.

ಚಾಮರಾಜನಗರ: ತಾಲೂಕಿನ ಚಂದಕವಾಡಿಯಲ್ಲಿ ಮಾ.4ರಿಂದ 8 ರವರೆಗೆ ನಡೆಯುವ ಶ್ರೀಲಕ್ಷ್ಮಿದೇವಿ ಜಾತ್ರಾ ಮಹೋತ್ಸವಕ್ಕೆ ಆಗಮಿಸುವ ಸಾವಿರಾರು ಭಕ್ತರಿಗೆ ಕುಡಿಯುವ ನೀರು ಸೇರಿದಂತೆ ಮೂಲಸೌಕರ್ಯ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಗ್ರಾಪಂ ಅಧ್ಯಕ್ಷ ನಟರಾಜು ತಿಳಿಸಿದರು.

ಚಂದಕವಾಡಿ ಗ್ರಾಪಂನಲ್ಲಿ ನಡೆದ ವಿಶೇಷ ಸಭೆಯಲ್ಲಿ ಸದಸ್ಯರ ಅಭಿಪ್ರಾಯ ಪಡೆದು ಮಾತನಾಡಿದ ಅವರು, ಶ್ರೀಲಕ್ಷ್ಮಿದೇವಿ ಜಾತ್ರಾ ಮಹೋತ್ಸವದಲ್ಲಿ ಕುಡಿಯುವ ನೀರು ಹಾಗೂ ಶುಚಿತ್ವಕ್ಕೆ ಹೆಚ್ಚು ಆದ್ಯತೆ ನೀಡಲಾಗುವುದು. ಅಲ್ಲದೇ ಅವಶ್ಯವಿರುವ ಕಡೆ ಫ್ಲೋಕಸ್ ದೀಪಗಳನ್ನು ಅಳವಡಿಸಲಾಗುವುದು. ಜಾತ್ರಾ ಮಹೋತ್ಸವದ ಅಂಗವಾಗಿ ಎತ್ತುಗಳ ಮೆರವಣಿಗೆ, ಉತ್ತಮ ರಾಸುಗಳಿಗೆ ಬಹುಮಾನ ವಿತರಣೆ, ಕೊಂಡ, ರಥೋತ್ಸವ ಅದ್ಧೂರಿಯಾಗಿ ನಡೆಯಲಿದ್ದು, ಜಾತ್ರೆಗೆ ಆಗಮಿಸುವ ಭಕ್ತರನ್ನು ಗ್ರಾಪಂ ವತಿಯಿಂದ ಸ್ವಾಗತಿಸಲಾಗುವುದು ಎಂದರು.

ಸಭೆಯಲ್ಲಿ ಉಪಾಧ್ಯಕ್ಷೆ ರಾಜೇಶ್ವರಿ, ಸದಸ್ಯರಾದ ಸಂತೋಷ್, ಸುಮಿತ್ರ, ನಟರಾಜು, ಡಿ.ಪುಟ್ಟಸ್ವಾಮಿ, ಬೇಬಿ ಜಾನ್, ರಾಜೇಂದ್ರ, ಮಹೇಶ್ವರಿ, ಅನುಷಾ, ಗಂಗಮ್ಮ, ವರಲಕ್ಷ್ಮಿ, ಮಹೇಶ, ಚಿನ್ನಸ್ವಾಮಿ, ಜ್ಯೋತಿ, ಪಿಡಿಓ ಸಿದ್ದರಾಜು, ಕಾರ್ಯದರ್ಶಿ ಮಾದಪ್ಪ, ಬಿಲ್ ಕಲೆಕ್ಟರ್ ಶಿವಣ್ಣ ಇತರರು ಇದ್ದರು.

ಒಂದನೇ ಪುಟದಿಂದ

ಮೋದಿ ಟಾರ್ಗೆಟ್

ಅನಿವಾರ್ಯತೆಯಾಗಿದೆ ಎಂದು ಪ್ರಧಾನಿ ಹೇಳಿದರು. ಕೋಟಿಗಟ್ಟಲೆ ಮಹಿಳೆಯರು, ಬಡವರು, ಯುವಕರ ಕನಸು ಮೋದಿಯವರ ಕನಸಾಗಿದೆ. ನಾವು ದೇಶವನ್ನು ಮೊಗಾ ಹಗರಣಗಳು ಮತ್ತು ಭಯೋತ್ಪಾದಕ ದಾಳಿಗಳಿಂದ ಮುಕ್ತಗೊಳಿಸಿದ್ದು, ಬಡ ಮತ್ತು ಮಧ್ಯಮ ವರ್ಗದವರ ಜೀವನ ಮಟ್ಟವನ್ನು ಸುಧಾರಿಸಲು ಪ್ರಯತ್ನಿಸಿದ್ದೇವೆ. ನಾನು ಮೂರನೇ ಅವಧಿಗೆ ಅಧಿಕಾರವನ್ನು ಅನುಭವಿಸಲು ಬಯಸುತ್ತಿಲ್ಲ, ಆದರೆ ರಾಷ್ಟ್ರಕ್ಕಾಗಿ ಕೆಲಸ ಮಾಡಲು ಬಯಸುತ್ತಿದ್ದೇನೆ. ನನ್ನ ಮನೆಯ ಬಗ್ಗೆ ಯೋಚಿಸಿದ್ದರೆ ಕೋಟಿ ಕೋಟಿ ಜನರಿಗೆ ಮನೆ ಕಟ್ಟಲು ಸಾಧ್ಯವಾಗುತ್ತಿರಲಿಲ್ಲ ಎಂದರು.

ನಾನು ತನ್ನ ಸ್ವಂತ ಸಂತೋಷಕ್ಕಾಗಿ ಬದುಕುವವನಲ್ಲ, ಬಿಜೆಪಿ ಮೂರನೇ ಅವಧಿಗೆ ಪ್ರತಿಪಾದಿಸುತ್ತಿರುವುದು ರಾಜಕೀಯ ಲಾಭಕ್ಕಾಗಿ ಅಲ್ಲ, ಆದರೆ ಭಾರತದ ಲಾಭಕ್ಕಾಗಿ. ನನ್ನ ಪ್ರಯತ್ನಗಳು ಭಾರತದ ಜನತೆಗೆ ಸಮರ್ಪಿತವಾಗಿವೆ. ಭಾರತೀಯರ ಕನಸುಗಳು ನನ್ನ ಬದ್ಧತೆಗಳಾಗಿವೆ ಎಂದು ಅವರು ಹೇಳಿದರು. ಒಮ್ಮೆ ಹಿರಿಯ ನಾಯಕರೊಬ್ಬರು ನನಗೆ ಪ್ರಧಾನಿ ಮತ್ತು ಸಿಎಂ ಆಗಿ ಸಾಕಷ್ಟು ಕೆಲಸ ಮಾಡಿದ್ದೇನೆ, ನಾನು ವಿಶ್ರಾಂತಿ ಪಡೆಯಬೇಕು ಎಂದು ಹೇಳಿದ್ದರು. ಆದರೆ ನಾನು 'ರಾಷ್ಟ್ರನೀತಿ'ಗಾಗಿ ಕೆಲಸ ಮಾಡುತ್ತಿದ್ದೇನೆ, 'ರಾಜನೀತಿ'ಗಾಗಿ ಅಲ್ಲ' ಎಂದು ಪ್ರಧಾನಿ ಮೋದಿ ಹೇಳಿದರು.

ಚುನಾವಣೆ ಮಹಾಭಾರತದ ಯುದ್ಧದಂತೆ

ಇಂಡಿಯಾ ಮೈತ್ರಿಕೂಟ ಎಲ್ಲಾ ಕುಟುಂಬ ರಾಜಕಾರಣದ ಮೈತ್ರಿಯಾಗಿದ್ದು, ಇದು ಭ್ರಷ್ಟಾಚಾರ, ತುಷ್ಟೀಕರಣದ ರಾಜಕೀಯವನ್ನು ಪೋಷಿಸುತ್ತದೆ, ಆದರೆ ಬಿಜೆಪಿ ನೇತೃತ್ವದ ಎನ್‌ಡಿಎ ರಾಷ್ಟ್ರದ ತತ್ವಗಳನ್ನು ಅನುಸರಿಸುವ ಪಕ್ಷಗಳ ಮೈತ್ರಿಯಾಗಿದೆ" ಈ ಬಾರಿಯ ಚುನಾವಣೆಯಲ್ಲಿ ಯಾವುದಕ್ಕೆ ಜನಾದೇಶ ನೀಡಬೇಕೆಂದು ದೇಶದ ಜನರು ನಿರ್ಧರಿಸಬೇಕು ಎಂದರು. ವಿರೋಧ ಪಕ್ಷಗಳು 2G, 3G ಮತ್ತು 4G" ಪಕ್ಷಗಳಿಂದ ತುಂಬಿದೆ. ಕುಟುಂಬಗಳ ಎರಡು, ಮೂರು ಮತ್ತು ನಾಲ್ಕನೇ ತಲೆಮಾರು ಈ ಪಕ್ಷಗಳನ್ನು ಮುನ್ನಡೆಸುತ್ತಿವೆ. ಇಂಡಿಯಾ ಮೈತ್ರಿಕೂಟಗಳ ವಂಶಾಡಳಿತ, ಭ್ರಷ್ಟಾಚಾರ, ತುಷ್ಟೀಕರಣ ಮತ್ತು ಜಾತಿ ರಾಜಕಾರಣವನ್ನು ಕೊನೆಗಾಣಿಸುವ ಮೂಲಕ ಪ್ರಧಾನಿ ಮೋದಿ ಅಭಿವೃದ್ಧಿಯ ರಾಜಕಾರಣವನ್ನು ಕೇಂದ್ರ ಹಂತಕ್ಕೆ ತಂದಿದ್ದಾರೆ ಎಂದರು.

ಇಬ್ಬರು ಸೇರಿ ಮೂವರ ದುರ್ಮರಣ

ಅವರಲ್ಲಿ ನಾಲ್ವರು ಕೆಂಗೇರಿಯಲ್ಲಿ ಇಳಿದಿದ್ದು, ಉಳಿದವರು ಮೈಸೂರಿಗೆ ಪ್ರಯಾಣ ಮುಂದುವರೆಸಿದ್ದರು. ಆದರೆ ಬೈರಪಟ್ಟಣದ ಚಾಮುಂಡೇಶ್ವರಿ ವೈದ್ಯಕೀಯ ಕಾಲೇಜು ಬಳಿ ಟಿಟಿ ವಾಹನ ಮುಂದೆ ಹೋಗುತ್ತಿದ್ದ ಲಾರಿಗೆ ಡಿಕ್ಕಿ ಹೊಡೆದು, ಪಲ್ಟಿಯಾದ ಪರಿಣಾಮ ವಧುವಿನೊಂದಿಗೆ ಬಂದಿದ್ದ ರಾಜೇಶ್ವರಿ ದೇಸಾಯಿ, ವರನ ಸಂಬಂಧಿಕರಾದ ಸೋಮಲಿಂಗಪ್ಪ ಹಾಗೂ ಶಿವಲಿಂಗಪ್ಪ ಸಾವನ್ನಪ್ಪಿದ್ದಾರೆ.

ಘಟನೆಯಲ್ಲಿ ಟಿಟಿ ವಾಹನ ನಜ್ಜುಗುಜ್ಜಾಗಿದ್ದು, ಸಾರ್ವಜನಿಕರ ಸಹಾಯದೊಂದಿಗೆ ಪೊಲೀಸರು ಗಾಯಾಳುಗಳನ್ನು ರಕ್ಷಿಸಿ, ಆಸ್ಪತ್ರೆಗೆ ಕಳುಹಿಸಿದ್ದಾರೆ. ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದ್ದು, ಕೆಲವರನ್ನು ಬೆಂಗಳೂರಿನ ರಾಜರಾಜೇಶ್ವರಿ ವೈದ್ಯಕೀಯ ಕಾಲೇಜು ಆಸ್ಪತ್ರೆ ಐಸಿಯುಗೆ ರವಾನಿಸಲಾಗಿದೆ. ಘಟನೆಯಿಂದ ಎಕ್ಸ್‌ಪ್ರೆಸ್ ವೇಯಲ್ಲಿ ಕೆಲಕಾಲ ಸಂಚಾರ ಅಸ್ತವ್ಯಸ್ತವಾಗಿತ್ತು. ಪೊಲೀಸರು ಜಖಂ ಆಗಿದ್ದ ಟಿಟಿ ವಾಹನವನ್ನು ತೆರವುಗೊಳಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಟಿಟಿ ವಾಹನ ಚಾಲಕನ ಅಜಾಗರೂಕತೆಯೇ ಅಪಘಾತಕ್ಕೆ ಕಾರಣ ಎನ್ನಲಾಗಿದೆ. ದೂರದ ಪ್ರಯಾಣದಿಂದ ಆಯಾಸಗೊಂಡಿದ್ದ ಚಾಲಕ, ಅತೀ ವೇಗವಾಗಿ ವಾಹನ ಚಾಲನೆ ಮಾಡುತ್ತಿದ್ದುದನ್ನು ಅರಿತು, ಜಾಗರೂಕತೆಯಿಂದ ಚಾಲನೆ ಮಾಡುವಂತೆ ಎಚ್ಚರಿಸಿದ್ದಾಗಿ ಗಾಯಾಳುಗಳು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಭೈರಪಟ್ಟಣದ ಬಳಿ ವಾಹನವೊಂದನ್ನು ಹಿಂದಿಕ್ಕುವ ಭರದಲ್ಲಿ ಚಾಲಕ ಮುಂದೆ ಸಾಗುತ್ತಿದ್ದ ಲಾರಿಗೆ ಡಿಕ್ಕಿ ಹೊಡೆದಿದ್ದಾನೆ. ಸುರಕ್ಷಿತ ಚಾಲನೆಯ ಅರಿವಿನ ಕೊರತೆಯಿಂದ ಈ ಘಟನೆ ಸಂಭವಿಸಿದೆ ಎಂದು ಪೊಲೀಸ್ ಮೂಲಗಳಿಂದ ತಿಳಿದುಬಂದಿದೆ. ಚನ್ನಪಟ್ಟಣ ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸಿದ್ದರಾಮಯ್ಯ ಬಿಜೆಪಿಗೆ ಕಳಿಸುತ್ತಿದ್ದಾರೆ

ಪ್ರಧಾನಮಂತ್ರಿ ಮೋದಿ ರಾಜೀನಾಮೆ ಕೊಟ್ಟು ಬಾ ಮುಂದಿನ ಮೂರು ವರ್ಷ ಮುಖ್ಯಮಂತ್ರಿ ಆಗು ಎಂದಿದ್ದರು. ನಿಮ್ಮನ್ನು ನಂಬಿದ್ದಕ್ಕೆ ನಮ್ಮ ಕುತ್ತಿಗೆ ಕುಯ್ದಿರಲ್ಲಾ, ಚಾಕು ಹಾಕಿಸಿಕೊಳ್ಳಲು ನಿಮ್ಮ ಜೊತೆ ಇರಬೇಕಾ? ಈ ಚುನಾವಣೆ ಆಗಲಿ ಆಮೇಲೆ ಉತ್ತರ ಕೊಡೋಣ ಎಂದರು. ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿದ್ದೇವೆ. ಜನಗಳ ಅಭಿಪ್ರಾಯ ಏನಿದೆ, ಜನ ಏನು ಬಯಸುತ್ತಾರೆ ಅದನ್ನು ಮಾಡುತ್ತೇವೆ. ಜನಾಭಿಪ್ರಾಯಕ್ಕೆ ಏನು ತೀರ್ಮಾನ ಮಾಡಬೇಕು ಅದನ್ನು ಮಾಡುತ್ತೇವೆ ಎಂದು ಕುಮಾರಸ್ವಾಮಿ ಹೇಳಿದರು.

ಮಂಡ್ಯದಿಂದ ಸ್ಪರ್ಧೆ ವಿಚಾರವಾಗಿ ಮಾತನಾಡಿದ ಕುಮಾರಸ್ವಾಮಿ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು ಎಲ್ಲಾ ಕಡೆ ಪ್ರೀತಿಯಿಂದ ಹೇಳುತ್ತಾರೆ. ನಾನು ಕರ್ನಾಟಕ ಬಿಟ್ಟು ಹೋಗಲ್ಲ, ಕರ್ನಾಟಕದಲ್ಲೇ ಇರುತ್ತೇನೆ. ಸದ್ಯಕ್ಕೆ ರಾಜ್ಯದ ಕೆಲಸ ಮುಗಿಯಲಿ. ರಾಜ್ಯದ ಜನತೆಯ ಹಲವಾರು ಸಮಸ್ಯೆಗಳಿವೆ. ಆ ಸಮಸ್ಯೆಗಳಿಗೆ ಮೊದಲು ಪರಿಹಾರ ದೊರಕಬೇಕು ಎಂದರು. ಹಾಸನದಿಂದ ಹಾಲಿ ಸಂಸದ ಪ್ರಜ್ವಲ್ ಅಭ್ಯರ್ಥಿ ಎಂದು ಮಾಜಿ ಪ್ರಧಾನಿ ದೇವೇಗೌಡರು ಹೇಳಿದ್ದರು. ಆದರೆ ಹಾಸನದಿಂದ ಜೆಡಿಎಸ್ ಅಭ್ಯರ್ಥಿ ಸ್ಪರ್ಧೆ ಮಾಡುತ್ತಾರೆ. ಅಭ್ಯರ್ಥಿ ಯಾರೆಂದು ಎಲ್ಲರೂ ಕೂತು ತೀರ್ಮಾನ ಮಾಡುತ್ತೇವೆ ಎಂದು ಹೇಳುವ ಮೂಲಕ ಪರೋಕ್ಷವಾಗಿ ಪ್ರಜ್ವಲ್ ರೇವಣ್ಣ ಹೆಸರು ಹಾಸನ ಲೋಕಸಭಾ ಕ್ಷೇತ್ರಕ್ಕೆ ಅಂತಿಮ ಆಗಿಲ್ಲ ಎಂದರು.

ಮೈತ್ರಿ ಸೀಟು ಹಂಚಿಕೆ ವಿಚಾರವಾಗಿ ಮಾತನಾಡಿದ ಕುಮಾರಸ್ವಾಮಿ, ಇನ್ನೊಂದು ವಾರದಲ್ಲಿ ಎಲ್ಲಾ ಮುಗಿಯುತ್ತದೆ ಎಂದರು. ಬೆಂಗಳೂರು ಗ್ರಾಮಾಂತರದಲ್ಲಿ ದೇವೇಗೌಡರು, ಕುಮಾರಸ್ವಾಮಿ ಎದುರಿಸಿ ಚುನಾವಣೆ ಗೆದ್ದಿದ್ದೇವೆ ಎಂಬ ಡಿಕೆ ಶಿವಕುಮಾರ್ ಹೇಳಿಕೆಗೆ ತಿರುಗೇಟು ನೀಡಿದ ಅವರು, ಈಗಲೂ ಎದುರಿಸಲು ತಯಾರು. ಚುನಾವಣೆಯಲ್ಲಿ ನಾವು ಎದುರಿಸಲು ಸಿದ್ಧವಾಗಿದ್ದೇವೆ. ಅವರ ಘರ್ಜನೆಗೆ ಹೆದರಿಕೊಂಡು ಓಡಿ ಹೋಗಲ್ಲ ಎಂದರು.

ರೈತರ ಬೇಡಿಕೆಗಳನ್ನು ಒಪ್ಪಿಕೊಳ್ಳಿ

ಜಾರಿಯಾಗುವವರೆಗೆ ಸಭೆ ನಡೆಸಿ, ನಂತರ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಏನೂ ಮಾಡಲು ಸಾಧ್ಯವಿಲ್ಲ ಎಂದು ಹೇಳಿದರೆ ರೈತರು ಹಿಂತಿರುಗುತ್ತಾರೆ ಎಂದು ಸರ್ಕಾರ ಭಾವಿಸಿದ್ದರೆ ರೈತರು ಹಿಂತಿರುಗುವುದಿಲ್ಲ ಎಂದು ದಲ್ಲೆವಾಲ್ ಎಚ್ಚರಿಕೆ ನೀಡಿದ್ದಾರೆ. ನೀತಿ ಸಂಹಿತೆ ಜಾರಿಯಾಗುವ ಮುನ್ನ ಸರಕಾರ ನಮ್ಮ ಬೇಡಿಕೆಗಳಿಗೆ ಪರಿಹಾರ ಕಂಡುಕೊಳ್ಳಬೇಕು ಎಂದು ದಲ್ಲೆವಾಲ್ ಹೇಳಿದ್ದಾರೆ.

ಕೆಂಪುಕೋಟೆ ಭೇಟಿಗೆ ಹೇರಿದ್ದ ನಿರ್ಬಂಧ ವಾಪಸ್: ರೈತರ ಪ್ರತಿಭಟನೆಯ ಕಾರಣದಿಂದ ಐತಿಹಾಸಿಕ ಕೆಂಪುಕೋಟೆಯ ಪ್ರವೇಶಕ್ಕೆ ಹೇರಿದ್ದ ನಿರ್ಬಂಧವನ್ನು ವಾಪಸ್ ಪಡೆದು, ಪ್ರವಾಸಿಗರಿಗೆ ಮುಕ್ತಗೊಳಿಸಲಾಗಿದೆ ಎಂದು ಅಧಿಕೃತ ಮೂಲಗಳು ಭಾನುವಾರ ತಿಳಿಸಿವೆ. ಕಳೆದ ಸೋಮವಾರ ರಾತ್ರಿ ಏಕಾಏಕಿ ಸ್ಮಾರಕದ ಬಾಗಿಲುಗಳನ್ನು ಮುಚ್ಚಲಾಗಿತ್ತು. ಎರಡು ದಿನಗಳ ಹಿಂದೆಯೇ ಇದನ್ನು ಪ್ರವಾಸಿಗರಿಗೆ ಮುಕ್ತಗೊಳಿಸಲಾಗಿದೆ. ಈ ಬಗ್ಗೆ ಇನ್ನೂ ಅಧಿಕೃತ ಆದೇಶ ಹೊರಬಿದ್ದಿಲ್ಲ ಎಂದು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಮೂಲಗಳು ತಿಳಿಸಿವೆ. ರೈತರು 'ದೆಹಲಿ ಚಲೋ' ಪ್ರತಿಭಟನಾ ಮೆರವಣಿಗೆ ಆರಂಭಿಸಿದ್ದರಿಂದ ಭದ್ರತಾ ಕಾರಣಕ್ಕಾಗಿ ಕೆಂಪುಕೋಟೆಗೆ ಪ್ರವಾಸಿಗರ ಭೇಟಿಗೆ ತಾತ್ಕಾಲಿಕ ನಿರ್ಬಂಧ ಹೇರಲಾಗಿತ್ತು. ಜೊತೆಗೆ ಪೊಲೀಸ್ ಮತ್ತು ಅರೆಸೇನಾ ಪಡೆಯ ಅಪಾರ ಸಂಖ್ಯೆಯ ಸಿಬ್ಬಂದಿಯನ್ನು ಸ್ಥಳದಲ್ಲಿ ನಿಯೋಜಿಸಲಾಗಿತ್ತು.

ಪ್ರಾಣಿ ಗಣತಿ ಆರಂಭ

ಈ ಬಾರಿಯೂ ಎರಡು ಹಂತದಲ್ಲಿ ಸಮೀಕ್ಷೆ ನಡೆಸಲು ನಿರ್ಧರಿಸಿ, ಮೊದಲ ಹಂತದಲ್ಲಿ ಅಂತರಿಕ ಗಣತಿ ಕಾರ್ಯ ಯಶಸ್ವಿಯಾಗಿ ನಡೆಸಲಾಗಿದೆ.

ಮೊದಲ ಹಂತದಲ್ಲಿ 305 ಗ್ರಿಡ್(ಬ್ಲಾಕ್)ನಲ್ಲಿ ಒಂದೊಂದು ಗ್ರಿಡ್‌ನಲ್ಲೂ ತಲಾ ಎರಡರಂತೆ ಒಟ್ಟು 610 ಸುಸಜ್ಜಿತ ಕ್ಯಾಮರಾ ಟ್ರ್ಯಾಪ್ ಬಳಸಿ ಸಮೀಕ್ಷೆ ನಡೆಸಲಾಗಿದೆ. 25 ದಿನ ಅರಣ್ಯ ಪ್ರದೇಶದಲ್ಲಿಯೇ ಇಡಲಾಗಿದ್ದ ಕ್ಯಾಮರಾ ಟ್ರ್ಯಾಪ್‌ನಲ್ಲಿ ದಿನದ 24 ಗಂಟೆಯೂ ಆ ಭಾಗದಲ್ಲಿ ಸಂಚರಿಸಿದ ಎಲ್ಲಾ ಪ್ರಾಣಿಗಳ ಸಾವಿರಾರು ಚಿತ್ರಗಳನ್ನು ಸೆರೆ ಹಿಡಿದಿದ್ದು, ಅವುಗಳನ್ನು ಸಂರಕ್ಷಿಸುವ ಕಾರ್ಯ ನಡೆಸಲಾಗುತ್ತಿದೆ. ಅದಕ್ಕಾಗಿಯೇ ಸಾಫ್ಟ್‌ವೇರ್‌ವೊಂದನ್ನು ಅಭಿವೃದ್ಧಿ ಪಡಿಸಲಾಗಿದ್ದು, ಅದರಲ್ಲಿ ಹುಲಿ ಸೇರಿದಂತೆ ವಿವಿಧ ಪ್ರಾಣಿಗಳ ಚಿತ್ರಗಳನ್ನು ಅಪ್ಲೋಡ್ ಮಾಡಲಾಗಿದೆ. ಇದರಿಂದ ಸಂಗ್ರಹಿಸಿದ ಡಾಟ ಸುರಕ್ಷಿತವಾಗಿಡಲು ಸಹಕಾರಿಯಾಗಿದೆ. ಮೊದಲ ಹಂತದ ಅಂತರಿಕ ಗಣತಿ ಮುಗಿದಿರುವುದರಿಂದ ಇದೀಗ ಎರಡನೇ ಹಂತದಲ್ಲಿ ಉಳಿದ 305 ಬ್ಲಾಕ್‌ಗಳಲ್ಲಿ ಕ್ಯಾಮರಾ ಟ್ರ್ಯಾಪ್ ಅಳವಡಿಸಲಾಗುತ್ತಿದ್ದು, ಅಂತಿಮ ಹಂತದ ಗಣತಿಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಇನ್ನು 25 ದಿನ ಕ್ಯಾಮರಾ ಟ್ರ್ಯಾಪ್‌ಗಳು ಅರಣ್ಯದಲ್ಲೇ ಇರುವುದರಿಂದ ಪ್ರಾಣಿಗಳ ಚಲನವಲನದ ಮೇಲೆ ಹದ್ದಿನ ಕಣ್ಣಿಡಲಿವೆ.

ಫೆ.23ರಂದು ಸಿಬ್ಬಂದಿಗಳಿಗೆ ತರಬೇತಿ: ಕ್ಯಾಮರಾ ಟ್ರ್ಯಾಪ್ ಗಣತಿ ಪೂರ್ಣಗೊಳ್ಳುತ್ತಿದ್ದಂತೆಯೇ ಸಿಬ್ಬಂದಿಗಳಿಂದ ಟ್ರ್ಯಾನ್ಸಾಕ್ಟರ್ ಸಮೀಕ್ಷೆ ನಡೆಯಲಿದೆ. ಅದಕ್ಕಾಗಿ ನಿಯೋಜನೆಗೊಂಡಿರುವ ಸಿಬ್ಬಂದಿಗಳಿಗೆ ಫೆ.23ರಂದು ತರಬೇತಿ ನೀಡಲು ಉದ್ದೇಶಿಸಲಾಗಿದೆ. ಈ ವೇಳೆ ಟ್ರ್ಯಾನ್ಸಾಕ್ಟರ್ ಸಮೀಕ್ಷೆಯಲ್ಲಿ ಸತತ ಮೂರು ದಿನ ಸಿಬ್ಬಂದಿಗಳು ಬೆಳಗ್ಗಿನಿಂದ ಸಂಜೆವರೆಗೆ 2 ಕಿ.ಮೀ ಕಾಲ್ನಡಿಗೆಯಲ್ಲಿ ತೆರಳಿ ತಾವು ಕಂಡ ಪ್ರಾಣಿಗಳನ್ನು ಗಮನಿಸಿ, ದಾಖಲಿಸಿಕೊಳ್ಳಲಿದ್ದಾರೆ. ಇದರಿಂದ ಅಂತರಿಕ ಸಮೀಕ್ಷೆಗೆ ಇನ್ನಷ್ಟು ಅಂಕಿ ಅಂಶ ಸೇರ್ಪಡೆಯಾಗಿ ಗಟ್ಟಿಗೊಳ್ಳಲಿದೆ.

ವಿಜ್ಞಾನ ಲೇಖಕ ಡಾ.ಎಸ್.ಎನ್.ಹೆಗಡೆ ಅವರ ಆರು ಕೃತಿಗಳ ಬಿಡುಗಡೆ

ಯಾವುದೇ ಕಲಿಕೆಯಾದರೂ ಮಾತೃಭಾಷೆಯಲ್ಲಿ ಇದ್ದರೆ ಹೆಚ್ಚು ಪರಿಣಾಮಕಾರಿ

ವಿಶ್ರಾಂತ ಕುಲಪತಿಗಳೂ ಆದ ವಿಜ್ಞಾನಿ ಪ್ರೊ.ಕೆ.ಎಸ್.ರಂಗಪ್ಪ ಅಭಿಮತ

ಮೈಸೂರು,ಫೆ.18(ಪಿಎಂ)– ವಿಜ್ಞಾನ ಸೇರಿದಂತೆ ಯಾವುದೇ ವಿಷಯದ ಕಲಿಕೆಯಾದರೂ ಮಾತೃಭಾಷೆಯಲ್ಲಿ ಇದ್ದರೆ ಅದು ಹೆಚ್ಚು ಪರಿಣಾಮಕಾರಿ ಆಗಲಿದ್ದು, ಆ ಮೂಲಕ ಆಯಾಯ ವಿಷಯದಲ್ಲಿ ಪರಿಣಾಮಕಾರಿ ಆವಿಷ್ಕಾರವೂ ಸಾಧ್ಯವಾಗಲಿದೆ ಎಂದು ಮೈಸೂರು ವಿವಿ ಮತ್ತು ಮುಕ್ತ ವಿವಿ ವಿಶ್ರಾಂತ ಕುಲಪತಿಗಳೂ ಆದ ವಿಜ್ಞಾನಿ ಪ್ರೊ.ಕೆ.ಎಸ್.ರಂಗಪ್ಪ ಅಭಿಪ್ರಾಯಪಟ್ಟರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಕನ್ನಡ ಸಾಹಿತ್ಯ ಕಲಾಕೂಟ ಮತ್ತು ಇನ್ನೋವೇಟಿವ್ ಜಂಟಿ ಆಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಹಿರಿಯ ವಿಜ್ಞಾನ ಲೇಖಕ ಡಾ.ಎಸ್.ಎನ್.ಹೆಗಡೆ ಅವರ ವಿಜ್ಞಾನಕ್ಕೆ ಸಂಬಂಧಿಸಿದ ಆರು ಕೃತಿಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಡಾ.ಎಸ್.ಎನ್.ಹೆಗಡೆ ಅವರಂತವರಿಂದ ವಿಜ್ಞಾನ ವಿಷಯಗಳನ್ನು ಕನ್ನಡದಲ್ಲಿ ಕಲಿಯಲು ಇಂದು ಸಾಕಷ್ಟು ಸುಧಾರಣೆ ಸಾಧ್ಯವಾಗಿದೆ. ಆದರೆ ನಾನು ಶಾಲಾ–ಕಾಲೇಜಿನಲ್ಲಿ ಓದುವಾಗ ಪರಿಸ್ಥಿತಿ ಕಷ್ಟಕರವಾಗಿತ್ತು. ಇಂಗ್ಲಿಷ್ ಗೊತ್ತಿಲ್ಲದೇ ಎಂಎಸ್‌ಸಿಯಲ್ಲಿ ಸಾಕಷ್ಟು ಕಷ್ಟಪಟ್ಟಿದ್ದೇನೆ. ಈ ಪದವಿ ಪೂರೈಸಿದ ಬಳಿಕ ನನಗೆ ಪೂರ್ಣ ಪ್ರಮಾಣದಲ್ಲಿ ಇಂಗ್ಲಿಷ್ ಕಲಿಯಲು ಸಾಧ್ಯವಾಯಿತು. ಜ್ಞಾನ ಪಡೆಯಲು ಮಾತೃಭಾಷೆ ಪರಿಣಾಮಕಾರಿ. ಹಾಗಾಗಿ ನನ್ನ ಭಾಷೆ ಕನ್ನಡದಲ್ಲಿ ವಿಜ್ಞಾನ ಕಲಿತಿದ್ದರೆ ಇನ್ನೂ ಒಳ್ಳೆಯ ವಿಜ್ಞಾನಿ ಆಗುತ್ತಿದ್ದೆ. ನನ್ನ ಭಾಷೆಯಲ್ಲೇ ಕೆಮಿಸ್ಟ್ರಿ, ಫಿಜಿಕ್ಸ್ ಓದಿದ್ದರೆ ಹೆಚ್ಚಿನ ರೀತಿಯಲ್ಲಿ ಆವಿಷ್ಕಾರ ಮಾಡಲು ಸಾಧ್ಯವಾಗುತ್ತಿತ್ತು ಎಂದು ತಿಳಿಸಿದರು.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಭಾನುವಾರ 6 ಕೃತಿಗಳನ್ನು ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಬಿಡುಗಡೆ ಮಾಡಿದರು.

ನಾನು ಮೈಸೂರು ವಿವಿ ಕುಲಪತಿ ಆಗಿದ್ದಾಗ ಎಸ್.ಎನ್.ಹೆಗಡೆ ಅವರು ಯಾವುದೇ ಬೇಡಿಕೆ ಮುಂದಿಡಲಿಲ್ಲ. 'ಕರ್ನಾಟಕ ವಿಶ್ವವಿದ್ಯಾ ಕೋಶ' ಮಾಡಿದ್ದು ಅವರೇ. ಆದರೆ ಇಂದಿಗೂ ಯಾರೂ ಅದನ್ನು ಮುಂದುವರೆಸಲು ಸಾಧ್ಯವಾಗಿಲ್ಲ. ಯಾವುದೇ ಕೆಲಸ ವಹಿಸಿದರು ಎಸ್.ಎನ್.ಹೆಗಡೆ ಉತ್ತಮವಾಗಿ ನಿರ್ವಹಿಸುತ್ತಿದ್ದರು. ಅಚ್ಚುಕಟ್ಟಾಗಿ ಕೆಲಸ ಮಾಡುತ್ತಾರೆ ಎಂಬ ಕಾರಣಕ್ಕೆ ಹೆಗಡೆಯವರಿಗೆ ಮೈಸೂರು ವಿವಿಯಲ್ಲಿ ಹೆಚ್ಚು ಕೆಲಸ ಕೊಡುತ್ತಿದ್ದೆ. ಜಿ.ಎಸ್.ಭಟ್, ಡಾ.ಎಸ್.ಎನ್.ಹೆಗಡೆ, ಡಾ.ಎಂ.ಚಂದ್ರಕುಮಾರ್, ಡಿ.ಕೆ.ರಾಜೇಂದ್ರ ಮೊದಲಾದ ವಿದ್ವತ್ ಹೊಂದಿರುವವರು ಸೇರಿ ಮೈಸೂರು ವಿವಿಗೆ ಗೌರವ ತಂದುಕೊಟ್ಟಿದ್ದಾರೆ. 1980ರಿಂದ ಡಾ.ಎಸ್.ಎನ್.ಹೆಗಡೆ ಮತ್ತು ನಾನು ಸ್ನೇಹಿತರು. ಅಂದಿನಿಂದಲೂ ಅವರದು ಸರಳ–ಸಜ್ಜನಿಕೆಯ ವ್ಯಕ್ತಿತ್ವ ಎಂದು ನುಡಿದರು.

ಮುಚ್ಚುವ ಸ್ಥಿತಿಯತ್ತ ಮುಕ್ತ ವಿವಿ ಪ್ರಸಾರಾಂಗ: ಮುಕ್ತ ವಿವಿಯಲ್ಲಿ ಕುಲಪತಿಯಾಗಿದ್ದಾಗ ಡಿ.ಕೆ.ರಾಜೇಂದ್ರ, ಜಿ.ಎಸ್.ಭಟ್ ಅವರು 'ಮೈಸೂರು ದರ್ಶನ' ಕನ್ನಡದ ಸಂಪುಟಗಳ ಸಂಪಾದಿಸಿದರು. ಇವರ ಈ ಅತ್ಯುತ್ತಮ ಕಾರ್ಯದಿಂದ ಕುಲಪತಿಯಾಗಿದ್ದ ನನಗೆ ಒಳ್ಳೆಯ ಹೆಸರು ಬಂದಿತು. ವಿವಿಯ ಪ್ರಸಾರಾಂಗವನ್ನು ಉತ್ತಮವಾಗಿ ಬೆಳೆಸಿದರು. ಸಾಕಷ್ಟು ಪುಸ್ತಕಗಳು ಹೊರಬಂದವು. ಆದರೆ ಈಗ ಯಾರಿಗೂ ಆಸಕ್ತಿ ಇಲ್ಲದ ಹಿನ್ನೆಲೆಯಲ್ಲಿ ಪ್ರಸಾರಾಂಗ ಹಿಂದುಳಿಯುವಂತಾಗಿದೆ. ಇಂತಹ ಪ್ರಜ್ಞಾವಂತರೂ ಇಲ್ಲದಿರುವುದೇ ಇದಕ್ಕೆ ಕಾರಣ ಎಂದು ನಾನು ಭಾವಿಸಿದ್ದೇನೆ. ಇದು ದುರಾದೃಷ್ಟಕರ. ಏಕೆಂದರೆ ಅದು ಮುಚ್ಚುವ ಸ್ಥಿತಿಗೆ ಹೋಗುತ್ತದೆಂದರೆ ಕುಲಪತಿಯಾದವರು ಯೋಚನೆ ಮಾಡಬೇಕು ಎಂದು ಪ್ರೊ.ರಂಗಪ್ಪ ವಿಷಾದಿಸಿದರು.

ಕೃತಿಗಳ ಕುರಿತು ಮಾತನಾಡಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ವಿಜ್ಞಾನ, ವಾಣಿಜ್ಯ ಸೇರಿದಂತೆ ಯಾವುದೇ ಸಾಹಿತ್ಯವಾದರೂ ಸೃಜನಾಶೀಲತೆ ಮುಖ್ಯ. ಈ ಎಲ್ಲಾ ಆರು ಕೃತಿಗಳಲ್ಲಿ ಸೃಜನಾಶೀಲ ಬರವಣಿಗೆ ಇದ್ದು, ಅತ್ಯಂತ ಉಪಯುಕ್ತ ಅಂಶಗಳನ್ನು ಕೃತಿಗಳಲ್ಲಿ ದಾಖಲು ಮಾಡಲಾಗಿದೆ. 'ಜೀವವೈವಿಧ್ಯ, ವನ್ಯಜೀವಿಗಳು ಮತ್ತು ಸಂರಕ್ಷಣೆ' ಕೃತಿಯಲ್ಲಿ ಅಳಿವಿನಂಚಿನಲ್ಲಿರುವ ಪ್ರಾಣಿ–ಸಸ್ಯಗಳ ಬಗ್ಗೆ ಬರೆದಿದ್ದು, ಅವುಗಳ ಸಂರಕ್ಷಣೆಯಲ್ಲಿ ಆಧುನಿಕ ತಂತ್ರಗಳು ಯಾವ ರೀತಿಯಲ್ಲಿ ಇರಬೇಕೆಂಬ ಬಗ್ಗೆ ಮಹತ್ವದ ಮಾಹಿತಿ ನೀಡಲಾಗಿದೆ ಎಂದು ತಿಳಿಸಿದರು.

ಸಂಸ್ಕೃತಿ ಚಿಂತಕ ಡಾ.ಕೆ.ರಘುರಾಂ ವಾಜಪೇಯಿ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಇನೋವೇಟಿವ್ ಅಧ್ಯಕ್ಷ ಜಿ.ಎಸ್.ಭಟ್, ಕಾರ್ಯದರ್ಶಿ ವಿದ್ವಾನ್ ಹೇರಂಭ ಆರ್.ಭಟ್, ಕೃತಿಗಳ ಲೇಖಕ ಡಾ.ಎಸ್.ಎನ್.ಹೆಗಡೆ, ಸಹ ಲೇಖಕ ಡಾ.ಎಂ.ಚಂದ್ರಕುಮಾರ್, ಮಹಿಮಾ ಪ್ರಕಾಶನದ ಕೆ.ವಿ.ಶ್ರೀನಿವಾಸ್ ಮತ್ತಿತರರು ಹಾಜರಿದ್ದರು.

ಬಿಡುಗಡೆಗೊಂಡ 6 ಕೃತಿಗಳು...

'ವ್ಯಾಯಾಮ ಶರೀರ ಕ್ರಿಯಾವಿಜ್ಞಾನದ ಮೂಲ ತತ್ವಗಳು', 'ವೈದ್ಯಕೀಯ ಕ್ಷೇತ್ರದ ನೊಬೆಲ್ ಪುರಸ್ಕೃತರು ಸಂಪುಟ 4 ಮತ್ತು 5', 'ಜೀವ ವೈವಿಧ್ಯ, ವನ್ಯಜೀವಿಗಳು ಮತ್ತು ಸಂರಕ್ಷಣೆ', 'ತಳಿ ವಿಜ್ಞಾನ ತತ್ವಗಳು', 'ಕಡಲತೀರದ ಅಕಶೇರುಕಗಳು' ಎಂಬ 6 ಕೃತಿಗಳು ಬಿಡುಗಡೆಗೊಂಡವು.

ರಥಸಪ್ತಮಿ; ಸಾಮೂಹಿಕ 108 ಸೂರ್ಯ ನಮಸ್ಕಾರ



ಮೈಸೂರು, ಫೆ.18(ಎಸ್‌ಬಿಡಿ)– ರಥಸಪ್ತಮಿ ಪ್ರಯುಕ್ತ ಮೈಸೂರಿನ ರಾಮಾನುಜ ರಸ್ತೆಯ ನಮೋ ಯೋಗ ಭವನ ಆವರಣದಲ್ಲಿ ಸಾಮೂಹಿಕವಾಗಿ 108 ಸೂರ್ಯ ನಮಸ್ಕಾರ ಸಮರ್ಪಿಸಲಾಯಿತು.

ನಮೋ ಯೋಗ ಭವನ ಸಮಿತಿ ಗೌರವಾಧ್ಯಕ್ಷ, ಮಾಜಿ ಕಾರ್ಪೊರೇಟರ್ ಬಿ.ವಿ.ಮಂಜುನಾಥ್ ಕಾರ್ಯಕ್ರಮ ಉದ್ಘಾಟಿಸಿ, ರಥಸಪ್ತಮಿ ಆಚರಣೆ ಬಗ್ಗೆ ವಿವರಿಸಿದರು. ಸಮಿತಿ ಉಪಾಧ್ಯಕ್ಷೆ ರೂಪಾ, ಯೋಗಪಟುಗಳೊಂದಿಗೆ ವೇದ ಘೋಷ ನಡೆಸಿಕೊಟ್ಟರು. ಯೋಗ ಶಿಕ್ಷಕ ಎಂ.ಮಲ್ಲಿಕಾರ್ಜುನ ಸ್ವಾಮಿ ಮಾತನಾಡಿ, ನಿತ್ಯ ಯೋಗ ಮಾಡುವುದರಿಂದ ಆರೋಗ್ಯಕರ ಜೀವನ ಸಾಧ್ಯವಿದೆ. ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ಅನುಕೂಲವಾಗಲೆಂದು ನಮೋ ಯೋಗ ಭವನದಲ್ಲಿ ಬೆ.5.45ರಿಂದ 7 ಗಂಟೆ ಮತ್ತು ಸಂಜೆ 6.15ರಿಂದ 7.30ರವರೆಗೆ ಉಚಿತವಾಗಿ ಯೋಗ, ಧ್ಯಾನ, ಪ್ರಾಣಾಯಾಮ ಮತ್ತು ಪ್ರತಿ ಭಾನುವಾರ ಬೆಳಗ್ಗೆ 6ರಿಂದ 8ರವರೆಗೆ ವೇದ ತರಗತಿಗಳನ್ನು ನಡೆಸಲಾಗುತ್ತಿದ್ದು, ಆಸಕ್ತರು ಸದುಪ ಯೋಗ ಪಡೆಯಬಹುದು ಎಂದರು. ಪ್ರಧಾನ ಕಾರ್ಯದರ್ಶಿ ಸೇತುರಾಮ್, ಜಂಟಿ ಕಾರ್ಯದರ್ಶಿ ಡಾ.ಜಿ.ರವಿಶಂಕರ್, ಲಲಿತಾ, ರಾಣಿ, ದಿವ್ಯ, ಅನ್ನಪೂರ್ಣ, ಗಾಯತ್ರಿ, ನಂದಕುಮಾರ್, ಶ್ರೀಕಂಠಸ್ವಾಮಿ, ನಾಗೇಶ್, ಹೊನ್ನೇಗೌಡ, ಪವನ್ ಮತ್ತಿ ತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

'ಸಾಹಿತ್ಯ ಶತಕ' ಕೃತಿ ಲೋಕಾರ್ಪಣೆ



ಮೈಸೂರು ಸಾಹಿತ್ಯ ದಾಸೋಹ ಶತಕೋತ್ಸವ ಸಂಭ್ರಮ ಕಾರ್ಯಕ್ರಮದಲ್ಲಿ ಹಾಸ್ಯ ಸಾಹಿತಿ ಎಂ.ಎಸ್.ನರಸಿಂಹಮೂರ್ತಿ ಅವರು 'ಸಾಹಿತ್ಯ ಶತಕ' ಕೃತಿ ಲೋಕಾರ್ಪಣೆ ಮಾಡಿದರು.

ಮೈಸೂರು, ಫೆ.18(ಎಂಟಿವೈ)– ಹೊಸ ಸಾಹಿತಿಗಳು ಹಿರಿಯ ಸಾಹಿತಿಗಳ ಚಿಂತನೆಗಳನ್ನು ಅನುಸರಿಸಿ ವರ್ತಮಾನದ ಸಾಹಿತ್ಯ ರಚನೆಗೆ ಗಮನ ಹರಿಸಬೇಕು ಎಂದು ಜೆಎಸ್‌ಎಸ್ ಸಂಸ್ಥೆಯ ಪ್ರಕಟಣ ವಿಭಾಗದ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ ಸಲಹೆ ನೀಡಿದ್ದಾರೆ.

ಮೈಸೂರಿನ ವಿಜಯನಗರದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಭವನದಲ್ಲಿ ಭಾನುವಾರ ಕಸಾಪ ಮತ್ತು ಮೈಸೂರು ಸಾಹಿತ್ಯ ದಾಸೋಹ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಮೈಸೂರು ಸಾಹಿತ್ಯ ದಾಸೋಹ ಶತಕೋತ್ಸವ ಸಂಭ್ರಮ ಮತ್ತು 'ಸಾಹಿತ್ಯ ಶತಕ' ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 12ನೇ ಶತಮಾನದಲ್ಲಿ ಬಸವಾದಿ ಶರಣರು ಎಲ್ಲ ಸಮುದಾಯದವರನ್ನು ಸಮಾನ ದೃಷ್ಟಿಯಿಂದ ಜೊತೆಗೆ ಕೊಂಡೊಯ್ದು, ಅನುಭವ ಮಂಟಪದ ಮೂಲಕ ಮಾತನಾಡುತ್ತಿದ್ದರು. ಇಂದು ಬಿಡುಗಡೆಯಾದ ಸಾಹಿತ್ಯ ಶತಕ ಕೃತಿಯಲ್ಲಿಯೂ 35 ಮಂದಿ ತಮ್ಮ ಮಾತುಗಳನ್ನು ಸಾಹಿತ್ಯದ ಮೂಲಕ ದಾಖಲು ಮಾಡಿದ್ದಾರೆ ಎಂದು ಹೇಳಿದರು.

ಹಾಸ್ಯ ಸಾಹಿತಿ ಎಂ.ಎಸ್.ನರಸಿಂಹ ಮೂರ್ತಿ ಮಾತನಾಡಿ, ಸಾಹಿತ್ಯದಲ್ಲಿ ಶೃಂಗಾರ ಹಾಗೂ ಹಾಸ್ಯಕ್ಕೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ಶೃಂಗಾರಕ್ಕೆ ಒತ್ತು ನೀಡಿದರೆ ಸಮಾಜ ಬೆಳೆಯುತ್ತದೆ. ಹಾಸ್ಯಕ್ಕೆ ಒತ್ತು ನೀಡಿದಲ್ಲಿ ವ್ಯಕ್ತಿತ್ವ ಬೆಳೆಯುತ್ತದೆ ಎಂದು ಅಭಿಪ್ರಾಯಪಟ್ಟರು.

ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಾಹಿತ್ಯ ಶತಕ ಕೃತಿಯನ್ನು ಕನ್ನಡ ಸತ್ಯ ಪ್ರತಿಷ್ಠಾನದ ಸಂಚಾಲಕ ಬೊ.ರವೀಂದ್ರ ಬಿಡುಗಡೆ ಮಾಡಿದರು. ಸಮಾರಂಭದಲ್ಲಿ ಸಾಹಿತ್ಯ ದಾಸೋಹದ ಸಂಚಾಲಕರಾದ ಎಂ.ಆರ್.ಆನಂದ್, ಪದ ಆನಂದ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಮೇಲುಕೋಟೆ ವೆಂಗೀಪುರ ನಂಬಿಮಠದ ಶ್ರೀಇಳೈ ಆಳ್ವಾರ್ ಸ್ವಾಮೀಜಿ , ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಎಂ.ಲೋಲಾಕ್ಷಿ ಕೆರೋಡಿ, ಕನ್ನಡ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಉಪಸ್ಥಿತರಿದ್ದರು.

ಇತರರ ಸೇವೆಯಲ್ಲಿದೆ ನಿಜವಾದ ಸಂತೋಷ

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್

ಮೈಸೂರು,ಫೆ.18(ಪಿಎಂ)– ಇತರರ ಸೇವೆಯಲ್ಲಿ ತೊಡಗಿಸಿಕೊಳ್ಳುವವರು ತಮ್ಮ ಬದುಕಿನಲ್ಲಿ ನಿಜವಾದ ಸಂತೋಷ ಕಾಣುತ್ತಾರೆ ಎಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಹೇಳಿದರು.

ಬೆಲವತ್ತ ಗ್ರಾಮದ ಪುಷ್ಪಗಿರಿಯಲ್ಲಿ ಸಾಲ್ವೇ ಮರಿಯಾ ಚಾರಿಟಬಲ್ ಟ್ರಸ್ಟ್, ಇನ್ನರ್ ವ್ಹೀಲ್ ಕ್ಲಬ್ ಮಿಡ್‌ಟೌನ್ ಮೈಸೂರು ಜಂಟಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಮಧುಮೇಹ ಮತ್ತು ಹೃದಯ ರೋಗಗಳ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬರಲ್ಲೂ ಸೇವಾ ಮನೋಭಾವ ಇರುವುದು ಮುಖ್ಯ. ಇದರಿಂದ ಸಮಾಜ ಸದೃಢಗೊಳ್ಳಲಿದೆ. ಈ ನಿಟ್ಟಿನಲ್ಲಿ ಇಂದು ಶಿಬಿರದಲ್ಲಿ ಡಾ.ಆರ್.ಎನ್.ಸುರೇಶ ಅವರ ಸೇವಾ ಕಾರ್ಯ ಪ್ರಶಂಸನೀಯ. ಅವರ 39 ವರ್ಷಗಳ ಆರೋಗ್ಯ ಸೇವೆ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಡಾ.ಆರ್.ಎನ್.ಸುರೇಶ ಅವರ ನೇತೃತ್ವದಲ್ಲಿ 220 ಮಂದಿಗೆ ಇಸಿಜಿ, ರಕ್ತದ ಸಕ್ಕರೆ ಪರೀಕ್ಷೆ, ರಕ್ತದೊತ್ತಡ ಪರೀಕ್ಷೆ ನಡೆಸಲಾಯಿತು. ಇದೇ ವೇಳೆ ಟ್ರಸ್ಟ್‌ನಿಂದ 'ಅತ್ಯುತ್ತಮ ಆರೋಗ್ಯ ಸೇವಾ ಪ್ರಶಸ್ತಿ'ಯನ್ನು ಡಾ.ಆರ್.ಎನ್.ಸುರೇಶ ಅವರಿಗೆ ಪ್ರದಾನ ಮಾಡಲಾಯಿತು. ಇನ್ನರ್ ವ್ಹೀಲ್ ಕ್ಲಬ್ ಮಿಡ್‌ಟೌನ್ ಮೈಸೂರು ಕಾರ್ಯದರ್ಶಿ ಸಂಧ್ಯಾ ತಮ್ಮ ಸಂಘಟನೆ ಸೇವಾ ಚಟುವಟಿಕೆಗಳನ್ನು ತಿಳಿಸಿದರು.

ಮೈಸೂರು ಡಯಾಗ್ನೋಸ್ಟಿಕ್ ಸೆಂಟರ್‌ನಿಂದ ಶಿಬಿರಕ್ಕೆ ಇಸಿಜಿ ಸೌಲಭ್ಯ ಪ್ರಾಯೋಜಿಸಲಾಗಿತ್ತು ಗ್ರಾಮದ ಮುಖಂಡ ಎ.ಸಿ.ಪ್ಯಾಟ್ರಿಕ್, ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಮರಿಯಾ ಮಾರ್ಕ್ ಅಲೆಕ್ಸಾಂಡರ್ ಮತ್ತಿತರರು ಹಾಜರಿದ್ದರು.



ಅತ್ಯುತ್ತಮ ಆರೋಗ್ಯ ಸೇವಾ ಪ್ರಶಸ್ತಿಯನ್ನು ಡಾ.ಆರ್.ಎನ್.ಸುರೇಶ ಅವರಿಗೆ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಪ್ರದಾನ ಮಾಡಿದರು.



ಮೈಸೂರಿನ ಕೆ.ಟಿ.ಸ್ಟ್ರೀಟ್‌ನ ಶ್ರೀ ಚೌಡೇಶ್ವರಿ ಅಮ್ಮನವರ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರನ್ನು ಅಭಿನಂದಿಸಲಾಯಿತು. ಈ ವೇಳೆ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಎಸ್.ಆರ್.ರವಿಕುಮಾರ್, ನಗರ ಪಾಲಿಕೆ ಮಾಜಿ ಸದಸ್ಯ ಬಾಲರಾಜ್, ದೇವಾಂಗ ಸಮಾಜದ ಮುಖಂಡ ಚೆಲುವರಾಜ, ಯುವ ಮುಖಂಡ ವಿಕಾಸ್ ಮತ್ತಿತರರಿದ್ದರು.

ಅಂಡಮಾನ್ ಅರಣ್ಯದಲ್ಲಿ ಮ್ಯಾನ್ಮಾರ್‌ನ 6 ಬೇಟೆಗಾರರು ಸಾವು

ಅಂಡಮಾನ್ & ನಿಕೋಬಾರ್, ಫೆ.18– ಮ್ಯಾನ್ಮಾರ್‌ನ 6 ಬೇಟೆಗಾರರು ಅಂಡಮಾನ್ ಅರಣ್ಯದಲ್ಲಿ ಆಹಾರ ಸಿಗದೇ ಸಾವನ್ನಪ್ಪಿದ್ದಾರೆ. ಬೇಟೆಗಾರರು ತಾವು ತಂದಿದ್ದ ಆಹಾರ ಪದಾರ್ಥಗಳು ಖಾಲಿಯಾದ ಪರಿಣಾಮ ಆಹಾರ ಸಿಗದೇ ಸಾವನ್ನಪ್ಪಿರಬಹುದು ಎಂದು ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ.

ಈ ಬೇಟೆಗಾರರು ಸಣ್ಣ ಜ್ವಾಲಾಮುಖಿ ದ್ವೀಪದಲ್ಲಿ ಸಿಲುಕಿದ್ದರು ಅವರು ಕೊಂಡೊಯ್ದಿದ್ದ ಸಣ್ಣ ಬೋಟ್‌ನಲ್ಲಿ ಸಹ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡು ವಾಪಸ್ ಆಗಲು ಅವರಿಗೆ ಸಾಧ್ಯವಾಗಿಲ್ಲ ಎಂದು ತಿಳಿದುಬಂದಿದೆ.

ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳಿಗೆ ಪೂರಕವಾದ ವಾತಾವರಣ ನಿರ್ಮಿಸಿ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ ರಾಘವೇಂದ್ರ ಸಲಹೆ

ಮೈಸೂರು, ಫೆ.18(ಎಂಟಿವೈ)– ವಿದ್ಯಾರ್ಥಿನಿಲಯಗಳಲ್ಲಿ ಶುಚಿತ್ವ ಕಾಪಾಡಿಕೊಂಡು, ವಿದ್ಯಾರ್ಥಿಗಳಿಗೆ ಪೂರಕವಾದ ವಾತಾವರಣ ನಿರ್ಮಿಸುಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ರಾಘವೇಂದ್ರ ಸಲಹೆ ನೀಡಿದ್ದಾರೆ.

ಮೈಸೂರಿನ ರಾಘವೇಂದ್ರ ನಗರದಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮಹಿಳಾ ಹಾಸ್ಟೆಲ್‌ನಲ್ಲಿ ಅಡುಗೆ ಸಿಬ್ಬಂದಿಗಳಿಗಾಗಿ ಆಯೋಜಿಸಿದ್ದ ಒಂದು ದಿನದ ಪುನಶ್ಚೇತನ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಕ್ಕೆ ಗ್ರಾಮೀಣ ಪ್ರದೇಶ ಹಾಗೂ ಬಡ ಕುಟುಂಬದ ವಿದ್ಯಾರ್ಥಿಗಳೇ ಸೇರುತ್ತಾರೆ. ಮನೆಗಳಲ್ಲಿ ಕಲಿಕೆಗೆ ಪೂರಕ ವಾತಾವರಣ ಇಲ್ಲದ ಕಾರಣ, ತಮ್ಮ ಮಕ್ಕಳು ಚೆನ್ನಾಗಿ ಓದಲೆಂಬ ಉದ್ದೇಶದಿಂದ ವಿದ್ಯಾರ್ಥಿನಿಲಯಕ್ಕೆ ಸೇರಿಸುತ್ತಾರೆ ಈ ಹಿನ್ನೆಲೆಯಲ್ಲಿ ಹಾಸ್ಟೆಲ್ ಸಿಬ್ಬಂದಿಗಳು ವಿದ್ಯಾರ್ಥಿಗಳ ಹಿತಾಯಲು ಮುಂದಾಗಬೇಕು ಎಂದು ಸಲಹೆ ನೀಡಿದರು.



ಮೈಸೂರಿನ ರಾಘವೇಂದ್ರ ನಗರದಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮಹಿಳಾ ಹಾಸ್ಟೆಲ್‌ನಲ್ಲಿ ಅಡುಗೆ ಸಿಬ್ಬಂದಿಗಳಿಗಾಗಿ ಆಯೋಜಿಸಿದ್ದ ಒಂದು ದಿನದ ಪುನಶ್ಚೇತನ ಕಾರ್ಯಾಗಾರವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ರಾಘವೇಂದ್ರ ಅವರು ಮಾಜಿ ಸಿಎಂ ದೇವರಾಜ ಅರಸು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಉದ್ಘಾಟಿಸಿದರು.

ಹಾಸ್ಟೆಲ್‌ಗಳಲ್ಲಿ ಶುಚಿತ್ವ ಕಾಪಾಡಿಕೊಳ್ಳಬೇಕು. ಅಡುಗೆ ಮನೆ ಸೂಕ್ಷ್ಮವಾಗಿರಬೇಕು. ಅಡುಗೆ ತಯಾರಿಕೆ ವೇಳೆ ನಿರ್ಲಕ್ಷ್ಯ ಮಾಡದೆ ಕಟ್ಟೆಚ್ಚರದಿಂದ ಕಾರ್ಯನಿರ್ವಹಿಸಬೇಕು. ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರವನ್ನು ನೀಡಬೇಕು. ತಮ್ಮ ತಮ್ಮ ಮನೆಯಲ್ಲಿ ಅಡುಗೆ ಮಾಡುವಂತೆ ಹಾಸ್ಟಲ್‌ಗಳಲ್ಲೂ ಮಕ್ಕಳಿಗೆ ಅಡುಗೆ ಮಾಡಿ ಊಟ ಬಡಿಸಿದಾಗ ಮಕ್ಕಳು ಸಂತೋಷದಿಂದ ಇರುತ್ತಾರೆ. ಇಲಾಖೆಯಿಂದ ಸರಬರಾಜು ಮಾಡುವ ಧವಸ–ಧಾನ್ಯಗಳನ್ನು, ತರಕಾರಿಗಳನ್ನು ಸ್ವಚ್ಛಗೊಳಿಸಿ ಇಟ್ಟುಕೊಳ್ಳಬೇಕು. ವಿದ್ಯಾರ್ಥಿಗಳಿಗೆ ಸರಿಯಾದ ಸಮಯಕ್ಕೆ ಊಟವನ್ನು ನೀಡಬೇಕು. ಸಂಪು ಮತ್ತು ವಾಟರ್ ಟ್ಯಾಂಕುಗಳನ್ನು ಸ್ವಚ್ಛಗೊಳಿಸಬೇಕು. ಸರ್ಕಾರದ ನಿಯಮಗಳನ್ನು ಪಾಲಿಸುವುದರೊಂದಿಗೆ ಸರಿಯಾದ ಸಮಯಕ್ಕೆ ಹಾಸ್ಟೆಲ್‌ಗೆ ಬರಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಕಲ್ಯಾಣಾಧಿಕಾರಿ ವಿಶ್ವನಾಥ್, ವಿಸ್ತಾರಣಾಧಿಕಾರಿ ಸತೀಶ್, ಸಂಪನ್ಮೂಲ ವ್ಯಕ್ತಿಗಳಾದ ಶರಣಪ್ಪ ಕೆ.ಸಿ, ಮಂಜುಳಾ, ಮಲ್ಲಣ್ಣ, ನಿಲಯಪಾಲಕರಾದ ಪರಶುರಾಂ, ಜಗದೀಶ್ ಕೋರಿ, ಯಶವಂತ್, ರಮ್ಯಾ, ಪೂರ್ಣಿಮಾ ತೇಜಸ್ವಿನಿ, ಭಾಗ್ಯಲಕ್ಷ್ಮಿ, ಸುಶೀಲಮ್ಮ ಉಪಸ್ಥಿತರಿದ್ದರು.

ಕರ್ನಾಟಕ ಗ್ರಾಮೀಣ ಬ್ಯಾಂಕ್ ರೈತರಿಗೆ ನೀಡಿದ

ಕೃಷಿ ಸಾಲ ವಸೂಲಿ ಪದ್ಧತಿ ವಿರೋಧಿಸಿ ಪ್ರತಿಭಟನೆ



ಕೃಷಿ ಸಾಲ ವಸೂಲಿ ಪದ್ಧತಿ ವಿರೋಧಿಸಿ ಪ್ರತಿಭಟನೆ, ಕರಪತ್ರ ಚಳುವಳಿ ನಡೆಸಲಾಯಿತು.

ಭೇರ್ಯ, ಫೆ.18– ಕರ್ನಾಟಕ ಗ್ರಾಮೀಣ ಬ್ಯಾಂಕ್ ರೈತರಿಗೆ ನೀಡಿದ ಕೃಷಿ ಸಾಲ ವಸೂಲಿ ಪದ್ಧತಿ ವಿರೋಧಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಗ್ರಾಮದ ಕರ್ನಾಟಕ ಗ್ರಾಮೀಣ ಬ್ಯಾಂಕ್ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಕೆಲಕಾಲ ಪ್ರತಿಭಟನೆ ನಡೆಸಿ ಕರಪತ್ರ ಚಳವಳಿ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯಾಧ್ಯಕ್ಷ ಮಾಧವ ರೆಡ್ಡಿ ಮಾತನಾಡಿ, ಕಳೆದ 3 ವರ್ಷಗಳಿಂದ ರಾಜ್ಯದಲ್ಲಿ ಪ್ರಕೃತಿ ವಿಕೋಪದಿಂದ ಬೆಳೆ ನಷ್ಟವಾಗಿದೆ. ಅಲ್ಲದೇ ರೈತರು ತಾವು ಬೆಳೆದ ಬೆಳೆಗಳಿಗೆ ಉತ್ತಮ ದರ ಸಿಗದೆ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದು, ಕೆಲವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ರೈತರ ಆತ್ಮಹತ್ಯೆ ತಪ್ಪಿಸಲು ಎಸ್‌ಬಿಐ ರೈತರ ಸಾಲದ ಅಸಲಿನ ಶೇ.10 ರಷ್ಟು ಪಾವತಿಸಿಕೊಂಡು ಉಳಿದ ಸಾಲ ಮನ್ನಾ ಮಾಡಿದೆ. ಆದರೆ ಕರ್ನಾಟಕ ಗ್ರಾಮೀಣ ಬ್ಯಾಂಕ್ ಯಾವುದೇ ರಿಯಾಯತಿ ನೀಡದೆ ವಕೀಲರ ಮೂಲಕ ಲೀಗಲ್ ನೋಟಿಸ್ ನೀಡಿದೆ ಎಂದು ಆರೋಪಿಸಿದರು.

ಸಾಲ ವಸೂಲಿಯಲ್ಲಿ ರೈತರನ್ನು ಕರ್ನಾಟಕ ಗ್ರಾಮೀಣ ಬ್ಯಾಂಕ್ ವಂಚಿಸುತ್ತಿದೆ. ಅಧಿಕ ಬಡ್ಡಿ ವಿಧಿಸಿ ರೈತರನ್ನು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿಗೆ ದೂಡುತ್ತಿದೆ. ಕೆ.ಆರ್.ನಗರ ಮತ್ತು ಸಾಲಿಗ್ರಾಮ ತಾಲೂಕಿನಲ್ಲಿ ಕರ್ನಾಟಕ ಗ್ರಾಮೀಣ ಬ್ಯಾಂಕ್‌ನವರ ಸಾಲ ವಸೂಲಿ ಕಾಟಕ್ಕೆ ಹಲವು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು, ಇದಕ್ಕೆ ಬ್ಯಾಂಕ್‌ನವರೇ ನೇರ ಕಾರಣ ಎಂದು ಆರೋಪಿಸಿದರು.

ಕರ್ನಾಟಕ ಗ್ರಾಮೀಣ ಬ್ಯಾಂಕ್ ಸಾಲ ವಸೂಲಿ ಪದ್ಧತಿ ಬಗ್ಗೆ ರಾಜ್ಯದ ರೈತರಿಗೆ ಅರಿವು ಮೂಡಿಸಲು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ಚೈತನ್ಯ ಯಾತ್ರೆ ಆರಂಭಿಸಲಾಗಿದೆ. ಈ ಬ್ಯಾಂಕ್‌ನಲ್ಲಿ 22 ಜಿಲ್ಲೆಯಲ್ಲಿ 54 ಲಕ್ಷ ರೈತರು 26 ಸಾವಿರ ಕೋಟಿ ಸಾಲ ಪಡೆದಿದ್ದರೇ, ಉದ್ಯಮಿಗಳಿಗೆ 50 ಸಾವಿರ ಕೋಟಿ ಸಾಲ ನೀಡಿದ್ದಾರೆ. ಆದರೆ ಶೇ.98ರಷ್ಟು ರೈತರಿಗೆ ಸಾಲ ನೀಡಿದ್ದೇವೆ ಎಂದು ಸುಳ್ಳು ಹೇಳಿ ದಾರಿ ತಪ್ಪಿಸಲಾಗುತ್ತಿದೆ. ಹೀಗಾಗಿ ರಾಜ್ಯದ ಎಲ್ಲಾ ಕರ್ನಾಟಕ ಬ್ಯಾಂಕ್ ಶಾಖೆ ಎದುರು ಪ್ರತಿಭಟನೆ ಮಾಡಲಾಗುತ್ತಿದೆ. ಅದರಂತೆ ಬಳ್ಳಾರಿ ಕೇಂದ್ರ ಕಚೇರಿ ಎದುರು ಮಾ.28 ರಂದು ಸಮಾರೋಪ ಸಮಾರಂಭ ನಡೆಯಲಿದ್ದು, ರೈತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕಾಗಿ ಮನವಿ ಮಾಡಿದರು.

> ಕರ್ನಾಟಕ ಗ್ರಾಮೀಣ ಬ್ಯಾಂಕ್ ಆಡಳಿತ ಮಂಡಳಿ ರೈತರ ಕೃಷಿ ಸಾಲ ವಸೂಲಾತಿ ಪದ್ಧತಿ ವಿರೋಧಿಸಿ ಮಾ.28ರಂದು ಬಳ್ಳಾರಿ ಕೇಂದ್ರ ಕಚೇರಿ ಎದುರು ರಾಜ್ಯಮಟ್ಟದ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.
> – ಮಾಧವರೆಡ್ಡಿ, ರೈತ ಹಾಗೂ ಹಸಿರು ಸೇನೆ ರಾಜ್ಯಾಧ್ಯಕ್ಷ.

ಇದೇ ವೇಳೆ ಕರ್ನಾಟಕ ಗ್ರಾಮೀಣ ಬ್ಯಾಂಕ್ ರೈತರ ಸಾಲ ವಸೂಲಿ ಪದ್ಧತಿ ಹಾಗೂ ಸುಸ್ತಿದಾರರಿಂದ ಅಧಿಕ ಬಡ್ಡಿ ವಸೂಲಿ ಮಾಡುತ್ತಿರುವ ಬಗ್ಗೆ ಚುಂಚನಕಟ್ಟೆ, ಸಾಲಿಗ್ರಾಮ, ಭೇರ್ಯ, ಮಾವತ್ತೂರು, ಹೆಬ್ಬಾಳು ಗ್ರಾಮದ ಕರ್ನಾಟಕ ಗ್ರಾಮೀಣ ಬ್ಯಾಂಕ್ ಶಾಖೆ ಎದುರು ಪ್ರತಿಭಟನೆ ಹಾಗೂ ಕರಪತ್ರ ಚಳುವಳಿ ನಡೆಸಿ ರೈತರಿಗೆ ಮಾಹಿತಿ ನೀಡಿ ಮನವರಿಕೆ ಮಾಡಲಾಯಿತು.

ಪ್ರತಿಭಟನೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲೇಪಾಕ್ಷಿ, ಜಿಲ್ಲಾ ಸಮಿತಿ ಸದಸ್ಯ ಕೆ.ಬಸವ ರೆಡ್ಡಿ, ಪದಾಧಿಕಾರಿಗಳಾದ ಸಲೀಂ, ವಿಶ್ವನಾಥ್, ಈಶ್ವರ್, ವಿರೂಪಾಕ್ಷ ರೆಡ್ಡಿ, ಓಂಕಾರ್ ರೆಡ್ಡಿ ಸೇರಿದಂತೆ ಇತರರಿದ್ದರು.

ಬಿ.ಸೋಮಶೇಖರ್‌ಗೆ ಚಾ.ನಗರ ಕ್ಷೇತ್ರದ ಟಿಕೆಟ್ ನೀಡಲು ಆಗ್ರಹ




ತಿ.ನರಸೀಪುರ, ಫೆ.18– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮಾಜಿ ಸಚಿವ ಬಿ.ಸೋಮಶೇಖರ್ ಅವರಿಗೆ ಚಾಮರಾಜನಗರ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ನೀಡುವಂತೆ ಸುತ್ತೂರು ಗ್ರಾಪಂ ಸದಸ್ಯರೂ ಆದ ರಾಜ್ಯ ಗ್ರಾಪಂ ಮಹಾ ಒಕ್ಕೂಟದ ರಾಜ್ಯ ಕಾರ್ಯದರ್ಶಿ ಜಿ.ಮರಳ್ಳಿ ರಂಗಸ್ವಾಮಿ ಆಗ್ರಹಿಸಿದ್ದಾರೆ.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಬಾರಿ ಬಿ.ಸೋಮಶೇಖರ್ ಅವರಿಗೆ ಟಿಕೆಟ್ ನೀಡಿದರೆ ಲಕ್ಷಕ್ಕೂ ಅಧಿಕ ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ. ನಮಗೆ ಪಕ್ಷ ಬಹಳ ಮುಖ್ಯ ಎಂದ ಅವರು, ಸಚಿವ ಡಾ.ಹೆಚ್.ಸಿ. ಮಹದೇವಪ್ಪ ನಮ್ಮ ನಾಯಕರು. ಅವರು ಈಗಾಗಲೇ ನಾನು ಚಾ.ನಗರ ಲೋಕಸಭಾ ಕ್ಷೇತ್ರದ ಆಕಾಂಕ್ಷಿಯಲ್ಲ ಎಂದು ತಿಳಿಸಿದ್ದು, ಅವರು ಸಚಿವರಾಗಿ ಮುಂದುವರೆಯಬೇಕು ಎಂದರು. ಮೈಸೂರು–ಚಾಮರಾಜನಗರ ಮುಖ್ಯಮಂತ್ರಿಗಳ ತವರು ಕ್ಷೇತ್ರದಲ್ಲಿ ಈಗಾಗಲೇ ಪ್ರಚಾರ ಆರಂಭಿಸಿರುವ ಮಾಜಿ ಸಚಿವ ಬಿ.ಸೋಮಶೇಖರ್ ಅವರಿಗೆ ಟಿಕೆಟ್ ಕೊಟ್ಟರೇ ಅವರ ಗೆಲುವು ಖಚಿತ ಎಂದ ಅವರು, ಮಾಜಿ ಸಂಸದ ದಿ. ಧ್ರುವನಾರಾಯಣ್ ಅವರ ಅಭಿವೃದ್ಧಿಗೆ ಸೋಮಶೇಖರ್ ಅವರೊಬ್ಬರೇ ಸಾಟಿ ಎಂದರು.

ಸೋಮಶೇಖರ್ 3 ಬಾರಿ ಸಚಿವರಾಗಿದ್ದವರು. ಅನುಭವವುಳ್ಳ ನಾಯಕರು. ಅವರು ಸದ್ದಿಲ್ಲದೇ ಕಳೆದ 3 ವರ್ಷಗಳಿಂದ ಚಾಮರಾಜ ನಗರ ಲೋಕಸಭಾ ಕ್ಷೇತ್ರದೊಂದಿಗೆ ಒಡನಾಟವಿಟ್ಟುಕೊಂಡಿದ್ದಾರೆ. ಆದ್ದರಿಂದ ಅವರನ್ನು ಪರಿಗಣಿಸಿ ಟಿಕೆಟ್ ನೀಡಬೇಕು. ನಾವೆಲ್ಲರೂ ಸೋಮಶೇಖರ್ ಪರ ಕೆಲಸ ಮಾಡಿ ಗೆಲ್ಲಿಸಿಕೊಂಡು ಬರುತ್ತೇವೆ ಎಂದರು.

ಇಂದಿನಿಂದ ಶ್ರೀಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ



ಹೆಚ್.ಡಿ.ಕೋಟೆ, ಫೆ.18– ತಾಲೂಕಿನ ಶ್ರೀಕ್ಷೇತ್ರ ಭೀಮನಕೊಲ್ಲಿ ಶ್ರೀಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ಫೆ.19ರಿಂದ 21ರವರೆಗೆ ನಡೆಯಲಿದೆ.

ಫೆ.19ರಂದು ಗ್ರಾಮದ ಮಹದೇಶ್ವರ ದೇವಸ್ಥಾನದಲ್ಲಿ ಬೆಳಗ್ಗೆ 6 ಗಂಟೆಗೆ ಹೋಮ, ರುದ್ರಾಭಿಷೇಕ, 9 ಗಂಟೆಗೆ ಮಹಾಮಂಗಳಾರತಿ ನಡೆಯಲಿದ್ದು, ಬಳಿಕ ಕಳಸ ಪ್ರತಿಷ್ಠಾಪನೆ ಹಾಗೂ ಕುಂಬಾಭಿಷೇಕ, ಗೋಧೂಳಿ ಲಗ್ನದಲ್ಲಿ ಶ್ರೀಗಣಪತಿ ಹೋಮ, ಪುಣ್ಯಾಹ, ಧ್ವಜಾರೋಹಣ ಸೇರಿದಂತೆ ಇನ್ನಿತರ ಪೂಜಾ ಕೈಂಕರ್ಯ ನೆರವೇರಲಿವೆ. ರಾತ್ರಿ 12 ಗಂಟೆಗೆ ಹಾಲರವಿ ಸೇವೆ, ಮಹದೇಶ್ವರನ ಮೆರವಣಿಗೆ ಮತ್ತು ಕೊಂಡೋತ್ಸವ ನಡೆಯಲಿದೆ.

ಫೆ.20 ರಂದು ಬೆಳಗ್ಗೆ 6 ಗಂಟೆಗೆ ಬಿಲ್ವಾರ್ಚನೆ, 9 ಗಂಟೆಗೆ ಮಹಾ ಮಂಗಳಾರತಿ, ರಾತ್ರಿ 12 ಗಂಟೆಗೆ ಆನೆ ಮಹೋತ್ಸವ, ಫೆ.21ರಂದು ಬೆಳಗ್ಗೆ 6 ಗಂಟೆಗೆ ಸಹಸ್ರ ಬಿಲ್ವಾರ್ಚನೆ ಹಾಗೂ ಇತರೆ ಪೂಜಾ ಕೈಂಕರ್ಯಗಳು, 9 ಗಂಟೆಗೆ ಮಹಾ ಮಂಗಳಾರತಿ, ರಾತ್ರಿ 12 ನಂತರ ಕಬಿನಿ ಹಿನ್ನೀರಿನಲ್ಲಿ ತೆಪ್ಪೋತ್ಸವ ನಡೆಯಲಿದೆ. ಜಾತ್ರೆಗೆ ಬರುವ ಭಕ್ತರಿಗೆ ವಿಶೇಷ ಬಸ್ ವ್ಯವಸ್ಥೆ ಕಲ್ಪಿಸಲಾಗಿದ್ದು, ಕಪಿಲಾ ನದಿ ದಾಟಿ ಬರುವವರಿಗೆ ಯಂತ್ರಚಾಲಿತ ದೋಣಿ ವ್ಯವಸ್ಥೆ ಮಾಡಲಾಗಿದೆ. ದೋಣಿ ಸಂಚಾರ ಬೆಳಗ್ಗೆ 7 ರಿಂದ ಸಂಜೆ 7ರವರೆಗೆ ನಿಗದಿಗೊಳಿಸಲಾಗಿದೆ. ಅಲ್ಲದೇ ಭಕ್ತರಿಗೆ 3 ದಿನಗಳ ಕಾಲ ಬೆಳಗ್ಗೆ ತಿಂಡಿ, ಮಧ್ಯಾಹ್ನ, ರಾತ್ರಿ ಊಟ ವ್ಯವಸ್ಥೆ ಮಾಡಲಾಗಿದೆ ಎಂದು ಜಾತ್ರಾ ಸಮಿತಿ ಕಾರ್ಯಕಾರಿ ಮಂಡಳಿ ತಿಳಿಸಿದೆ.

ಮಕ್ಕಳಿಗೆ ಶಿಕ್ಷಣ ಕೊಡಿಸಿ ಅವರನ್ನೇ ಆಸ್ತಿಯನ್ನಾಗಿಸಿ


ಗುರು ವಿದ್ಯಾವಿಕಾಸ ಶಾಲೆ ವಾರ್ಷಿಕೋತ್ಸವವನ್ನು ಗಣ್ಯರು ಉದ್ಘಾಟಿಸಿದರು.

ನಂಜನಗೂಡು, ಫೆ.18– ಪೋಷಕರು ಮಕ್ಕಳಿಗೆ ಆಸ್ತಿ, ಸಂಪತ್ತು ಕೂಡಿಡುವ ಬದಲು ಉತ್ತಮ ಶಿಕ್ಷಣ, ಸಂಸ್ಕಾರ ಕಲಿಸಿ ಉತ್ತಮ ಪ್ರಜೆಯಾಗಿ ರೂಪಿಸುವ ಜೊತೆಗೆ ಅವರನ್ನೇ ಆಸ್ತಿಯನ್ನಾಗಿ ಮಾಡಬೇಕು ಎಂದು ಜೆಎಸ್‌ಎಸ್ ಸಂಸ್ಕೃತ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಸುನಂದ ಗುರುಪ್ಪ ಭೂಪಾಳಿ ತಿಳಿಸಿದರು.

ನಗರದ ಟಿಎಪಿಸಿಎಂಎಸ್ ಆವರಣದಲ್ಲಿರುವ ಗುರು ವಿದ್ಯಾವಿಕಾಸ ಶಾಲೆ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾಧನಂ ಸರ್ವಧನ ಪ್ರಧಾನಂ ಎಂಬಂತೆ ವಿದ್ಯೆ ಎಲ್ಲಾ ಸಂಪತ್ತಿಗಿಂತಲೂ ಶ್ರೇಷ್ಠವಾದ ಸಂಪತ್ತು. ಮಕ್ಕಳಿಗೆ ನೀವು ಉತ್ತಮ ವಿದ್ಯಾಭ್ಯಾಸ ನೀಡಿದಲ್ಲಿ ಅವರೇ ಎಲ್ಲಾ ಸಂಪತ್ತುಗಳನ್ನು ಗಳಿಸಿಕೊಳ್ಳುತ್ತಾರೆ. ಬರೀ ಅಕ್ಷರಾಭ್ಯಾಸ, ಅಂಕಗಳಿಕೆ ಪೈಪೋಟಿ ಶಿಕ್ಷಣವಾಗುವುದಿಲ್ಲ. ಬದಲಾಗಿ ಜೀವನ, ಸಾಮಾಜಿಕ ಮೌಲ್ಯ ಒಳಗೊಂಡ ಸಂಸ್ಕಾರಯುತ ಶಿಕ್ಷಣ ದೊರಕಿದಾಗ ಮಾತ್ರ ಶಿಕ್ಷಣಕ್ಕೆ ಅರ್ಥ ಬರುತ್ತದೆ. ಇಂದಿನ ಕಾಲಘಟ್ಟದಲ್ಲಿ ಮಕ್ಕಳು ಶಿಕ್ಷಣ ಪಡೆದು ವಿದೇಶಕ್ಕೆ ತೆರಳಿ ಸ್ವಂತ ತಂದೆ–ತಾಯಿಯನ್ನೇ ಅಪ್ಪ–ಅಮ್ಮ ಎಂದು ಕರೆಯಲು ನಾಚಿಕೆ ಪಡುವಂತಹ ಸನ್ನಿವೇಶ ಎದುರಾಗುತ್ತಿವೆ. ಆದ್ದರಿಂದ ಮಕ್ಕಳಿಗೆ ಜೀವನಮೌಲ್ಯ, ಸಂಸ್ಕಾರಯುತ ಶಿಕ್ಷಣ ದೊರಕಿಸಿ ಕೊಡಿ ಎಂದರು. ಪಟ್ಟಣ ಪೊಲೀಸ್ ಠಾಣೆ ಎಸ್‌ಐ ಪ್ರಕಾಶ್ ಮದ್ದೂರು ಮಾತನಾಡಿ, ಬಡ ಮಕ್ಕಳಿಗೆ ಉತ್ತಮ ಸಂಸ್ಕಾರಯುತ ಶಿಕ್ಷಣ ದೊರಕಬೇಕೆಂಬ ಆಶಯದೊಂದಿಗೆ ಸೋಮಶೇಖರ ಸ್ವಾಮಿಜೀಯವರು ಈ ಶಾಲೆ ತೆರೆದಿದ್ದಾರೆ. ಅವರ ಆಶಯ ಸಾರ್ಥಕವಾಗಬೇಕಾದರೆ ವಿದ್ಯಾರ್ಥಿಗಳು ಶ್ರದ್ಧೆಯಿಂದ ಓದಿ ನಿಮ್ಮ ಗುರಿ ಸಾಧಿಸಿ ಉತ್ತಮ ಪ್ರಜೆಗಳಾಗಿ ದೇಶಕ್ಕೆ ಕೊಡುಗೆ ನೀಡಿ ಎಂದರು. ಸಮಾರಂಭದಲ್ಲಿ ಮಲ್ಲನಮೂಲೆ ಮಠದ ಸಿದ್ದಲಿಂಗ ಸ್ವಾಮೀಜಿ, ಶಾಲೆ ಅಧ್ಯಕ್ಷ ಸೋಮಶೇಖರ್ ಸ್ವಾಮೀಜಿ, ಮುಖ್ಯಶಿಕ್ಷಕ ರಾಜಪ್ಪ, ಸಹ ಶಿಕ್ಷಕರಾದ ಕುಮಾರಸ್ವಾಮಿ, ಚಂದ್ರಶೇಖರ್, ಮಹದೇವಸ್ವಾಮಿ ಸೇರಿದಂತೆ ಹಲವರಿದ್ದರು.

ಛಾಯಾಗ್ರಾಹಕರ ಸಮುದಾಯ ಭವನಕ್ಕೆ ನಿವೇಶನ ನೀಡಲು ಕ್ರಮ: ಜಿ.ಡಿ.ಹರೀಶ್‌ಗೌಡ

ಹುಣಸೂರಲ್ಲಿ ನಡೆದ ಕಾರ್ಯಕ್ರಮವನ್ನು ಶಾಸಕ ಜಿ.ಡಿ. ಹರೀಶ್‌ಗೌಡ ಉದ್ಘಾಟಿಸಿದರು.



ಹುಣಸೂರು, ಫೆ.18– ಕಷ್ಟಪಟ್ಟು ದುಡಿಯುವ ಛಾಯಾಗ್ರಾಹಕರ ವೃತ್ತಿಗೆ ನಿಗದಿತ ಸಮಯವಿಲ್ಲ. ಎಲ್ಲರ ಸಂತೋಷದಲ್ಲಿ ಪಾಲ್ಗೊಳ್ಳುವ ಛಾಯಾಗ್ರಾಹಕರು ಶ್ರಮಜೀವಿಗಳು ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ನಗರದ ಜೆ.ಪಿ.ಟ್ರಸ್ಟ್ ಸಭಾಂಗಣದಲ್ಲಿ ನಡೆದ ತಾಲೂಕು ಛಾಯಗ್ರಾಹಕರ ಸಂಘದ ನೂತನ ಪದಾಧಿಕಾರಿಗಳಿಗೆ ಅಭಿನಂದನೆ ಮತ್ತು ಹಿಂದಿನ ಪದಾಧಿಕಾರಿಗಳಿಗೆ ಸನ್ಮಾನ ಮತ್ತು ಸಂಘದ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಛಾಯಾಗ್ರಾಹಕರು ತಮ್ಮ ವೃತ್ತಿ ವೇಳೆ ಬೇರೆ ಬೇರೆ ಊರುಗಳಿಗೆ ತೆರಳಿ ಹಗಲಿರುಳೆನ್ನದೇ ದುಡಿಯುವ ಶ್ರಮಜೀವಿಗಳು. ದೂರದ ಊರುಗಳಿಗೆ ತೆರಳಿ ಹುಣಸೂರಿಗೆ ಆಗಮಿಸಿ ಸ್ವಗ್ರಾಮಕ್ಕೆ ತೆರಳಲು ಸಾಧ್ಯವಾಗದೇ ಉಳಿದುಕೊಳ್ಳಲು ಸಮುದಾಯ ಭವನದ ಅವಶ್ಯಕತೆ ಇದೆ. ಹೀಗಾಗಿ ಛಾಯಾಗ್ರಾಹಕರ ಸಂಘದ ಸಮುದಾಯ ಭವನ ನಿರ್ಮಿಸಲು ನಿವೇಶನ ನೀಡಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ತಾಲೂಕಿನ ಛಾಯಾಗ್ರಾಹಕರ ಸಂಘ ಒಳ್ಳೆಯ ಕಾರ್ಯಕ್ರಮ ನಡೆಸುವ ಮೂಲಕ ಯಶಸ್ವಿಯಾಗಿ ನಡೆಯುತ್ತಿದೆ. ಸಂಘಕ್ಕೆ ನನ್ನ ಸಹಕಾರ ಸದಾ ಇರುತ್ತದೆ. ತಾಲೂಕಿನ ಸಾಕಷ್ಟು ಸಂಘಗಳಿಗೆ ನಿವೇಶನ ಸಮುದಾಯ ಭವನ ಇಲ್ಲದಿರುವುದು ನನ್ನ ಗಮನಕ್ಕೆ ಬಂದಿದೆ. ತಾಲೂಕಿನಲ್ಲಿ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿರುವ ಹಾಗೂ ನಿವೇಶನಕ್ಕೆ ಅರ್ಜಿ ಸಲ್ಲಿಸಿರುವ ಸಂಘಗಳಿಗೆ ನಿವೇಶನ ನೀಡಲು ಕ್ರಮ ವಹಿಸುತ್ತೇನೆ. ಸರ್ಕಾರ ಛಾಯಾಗ್ರಾಹಕರನ್ನು ಅಸಂಘಟಿತ ವಲಯದಲ್ಲಿ ಗುರುತಿಸಿದೆ. ಹಲವು ನಿಗಮ ಮಂಡಳಿಗಳಿದ್ದು, ಅದರಲ್ಲಿ ಛಾಯಾಗ್ರಾಹಕರಿಗೆ ವೃತ್ತಿ ಆಧಾರಿತ ನೇರ ಸಾಲ ನೀಡುವ ಸವಲತ್ತುಗಳಿದ್ದಲ್ಲಿ ಅದನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ತಿಳಿಸಿದರು.

ಛಾಯಾಗ್ರಾಹಕರ ಸಂಘದ ಅಧ್ಯಕ್ಷ ರಾಮಸ್ವಾಮಿ ಮಾತನಾಡಿದರು. ಪ್ರಭಾರ ಪೌರಾಯುಕ್ತೆ ಶರ್ಮಿಳಾ, ಜೆ.ಪಿ.ಟ್ರಸ್ಟ್ ಉಪಾಧ್ಯಕ್ಷ ಗೋವಿಂದೇಗೌಡ, ಟಿಎಪಿಸಿಎಂಎಸ್ ಅಧ್ಯಕ್ಷ ಬಸವಲಿಂಗಯ್ಯ ಸಭೆ ಉದ್ದೇಶಿಸಿ ಮಾತನಾಡಿದರು. ವಿಜಯ್ ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಛಾಯಾಗ್ರಾಹಕರ ಸಂಘದ ಗೌರವಾಧ್ಯಕ್ಷ ಜೇವಿಯರ್, ಉಪಾಧ್ಯಕ್ಷ ದಾಮೋದರ್, ಕಾರ್ಯದರ್ಶಿ ಸುರೇಶ್, ಖಜಾಂಚಿ ಅರುಣ್ ಕುಮಾರ್, ಸಹಕಾರ್ಯದರ್ಶಿ ಲಕ್ಷ್ಮಿಪತಿ, ಮಾಧ್ಯಮ ವಕ್ತಾರ ಗಜೇಂದ್ರ, ಕ್ರೀಡಾ ಕಾರ್ಯದರ್ಶಿ ಚೇತನ್, ನಿರ್ದೇಶಕರಾದ ಸುರೇಶ್, ಲೋಕೇಶ್, ಕಾಂತರಾಜು ಹಾಗೂ ಸಂಘದ ಸದಸ್ಯರು ಹಾಜರಿದ್ದರು.

ಕಡತ ನಾಪತ್ತೆ ಪ್ರಕರಣ: ಇಬ್ಬರು ಅಧಿಕಾರಿಗಳ ವಿರುದ್ಧ ದೂರು


ಪೌರಾಯುಕ್ತ ಎಂ.ರಾಜಣ್ಣ

ನಂಜನಗೂಡು, ಫೆ.18– ಸರ್ಕಾರಿ ದಾಖಲೆಗಳನ್ನು ತಿದ್ದಿ, ಕೆಲವು ಕಡತಗಳನ್ನು ನಾಪತ್ತೆ ಮಾಡಿ ನಿವೇಶನಗಳ ಖಾತೆ ಮಾಡುವ ವೇಳೆ ನಿಯಮಗಳನ್ನು ಗಾಳಿಗೆ ತೂರಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವ ನಗರಸಭೆ ಹಿಂದಿನ ಪೌರಾಯುಕ್ತ ಎಂ.ರಾಜಣ್ಣ ಹಾಗೂ ವಿಷಯ ನಿರ್ವಾಹಕ ಡಿ.ಎನ್.ನರಸಿಂಹಮೂರ್ತಿ ಅವರ ವಿರುದ್ಧ ಹಾಲಿ ಪೌರಾಯುಕ್ತ ನಂಜುಂಡಸ್ವಾಮಿ ನಂಜನಗೂಡು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ತಾಲೂಕಿನ ದೇಬೂರು ಗ್ರಾಪಂ ವ್ಯಾಪ್ತಿಯ ದೇವೀರಮ್ಮನಹಳ್ಳಿ ಸರ್ವೇ ನಂ.58, 59ರಲ್ಲಿರುವ 3.16 ಎಕರೆ ಜಮೀನು ಬಿ.ಬಸಪ್ಪ ಅವರಿಗೆ ಸೇರಿದ್ದು, ಕೈಗಾರಿಕಾ ಉದ್ದೇಶಕ್ಕಾಗಿ ಉಪ ವಿಭಾಗಾಧಿಕಾರಿಗಳು ಅನ್ಯಕ್ರಾಂತ ಮಂಜೂರು ಮಾಡಿದ್ದರು. ನಂತರ ವಸತಿ ಬಡಾವಣೆ ನಿರ್ಮಿಸಲು ಬದಲಾವಣೆ ಆದೇಶ ಮಾಡಿದ್ದಾರೆ. ವಸತಿ ಮನೆ ನಿರ್ಮಿಸಬೇಕಿದ್ದಲ್ಲಿ ಮೈಸೂರು–ನಂಜನಗೂಡು ಯೋಜನಾ ಪ್ರಾಧಿಕಾರದಿಂದ ಅಧಿಕೃತ ಬಡಾವಣೆ ನಕ್ಷೆ ಅನುಮೋದನೆ ಪಡೆಯಬೇಕಿತ್ತು. ಸಕ್ಷಮ ಪ್ರಾಧಿಕಾರದಿಂದ ನಕ್ಷೆ ಅನುಮೋದನೆ ಆಗಿಲ್ಲ. ಹಿಂದಿನ ಪೌರಾಯುಕ್ತ ಎಂ.ರಾಜಣ್ಣ ಹಾಗೂ ವಿಷಯ ನಿರ್ವಾಹಕ ಡಿ.ಎನ್.ನರಸಿಂಹಮೂರ್ತಿ ಅವರು ಸಂಖ್ಯೆ 106ರ ಆಸ್ತಿ ವಹಿಯಲ್ಲಿ ನಿವೇಶನ ಸಂಖ್ಯೆ 1 ರಿಂದ 48 ರವರೆಗೆ ವಿವಿಧ ಅಸೆಸ್‌ಮೆಂಟ್‌ಗಳಲ್ಲಿ ವಿವಿಧ ಅಳತೆಗಳನ್ನು ನಮೂದಿಸಿ, ಗಂಗಮ್ಮ ಎಂಬುವರ ಹೆಸರಿಗೆ ಖಾತೆ ಮಾಡಿದ್ದಾರೆ. ಇವೆಲ್ಲಾ ಪ್ರಕ್ರಿಯೆಗಳನ್ನು ನಡೆಸುವಾಗ ಭಾರಿ ಅಕ್ರಮ ನಡೆಸಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಅಕ್ರಮಗಳ ಪರಿಶೀಲನೆ ವೇಳೆ ಕೆಲವೆಡೆ ಹೆಸರುಗಳನ್ನು ಖಾಲಿ ಬಿಡಲಾಗಿದೆ. ಕೆಲವೆಡೆ ತಿದ್ದಿ ಬರೆದಿದ್ದಾರೆ. ಮತ್ತೆ ಕೆಲವು ಕಡತಗಳೆ ನಾಪತ್ತೆಯಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಆದೇಶದಂತೆ ಹಿಂದಿನ ಪೌರಾಯುಕ್ತ ಎಂ.ರಾಜಣ್ಣ ಹಾಗೂ ವಿಷಯ ನಿರ್ವಾಹಕ ಡಿ.ಎನ್. ನರಸಿಂಹ ಮೂರ್ತಿ ವಿರುದ್ಧ ಹಾಲಿ ಪೌರಾಯುಕ್ತ ನಂಜುಂಡಸ್ವಾಮಿ ನಂಜನಗೂಡು ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಗಾಂಜಾ ಮಾರಾಟಕ್ಕೆ ಯತ್ನಿಸುತ್ತಿದ್ದ ಆರೋಪಿ ಬಂಧನ



ಬೈಲಕುಪ್ಪೆ, ಫೆ.18– ಇಲ್ಲಿಗೆ ಸಮೀಪದ ಟಿಬೆಟಿಯನ್ ಕ್ಯಾಂಪ್ ಬಳಿ ಗಾಂಜಾ ಮಾರಾಟಕ್ಕೆ ಯತ್ನಿಸುತ್ತಿದ್ದ ಆರೋಪಿಯನ್ನು ಬಂಧಿಸುವಲ್ಲಿ ಬೈಲಕುಪ್ಪೆ ಪೊಲೀಸರು ಯಶಸ್ವಿಯಾಗಿದ್ದಾರೆ. ಗುಳ್ಳೇದಹಳ್ಳಿ ಗ್ರಾಮದ ಟೆಂಜಿನ್ ಬಂಧಿತ ಆರೋಪಿ. ಈತ ಮಂಚೇನಹಳ್ಳಿ ಬಳಿ ಗುಳ್ಳೇದಹಳ್ಳ ಕ್ಯಾಂಪ್ ರಸ್ತೆಯಲ್ಲಿ 520 ಗ್ರಾಂ ಒಣ ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಬೈಲುಕುಪ್ಪೆ ಎಸ್‌ಐ ಜಿತೇಂದ್ರ ಹಾಗೂ ಸಿಬ್ಬಂದಿ ದಾಳಿ ನಡೆಸಿ ಮಾಲು ಸಮೇತ ಆರೋಪಿ ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಸಿಬ್ಬಂದಿಗಳಾದ ಮುದ್ದುರಾಜ್, ಕುಮಾರಸ್ವಾಮಿ, ತ್ರೀಶ್, ರಾಕೇಶ್, ಅನಿತಾ, ಚಾಲಕ ಪ್ರದೀಪ್ ಇದ್ದರು.

ಯಾಚೇನಹಳ್ಳಿ ಪಿಎಸಿಎಸ್‌ಗೆ ಗೋವಾ ಅಪೆಕ್ಸ್ ಬ್ಯಾಂಕ್ ಸಿಬ್ಬಂದಿ ಭೇಟಿ

ಸಂಘದ ಕಾರ್ಯ ಚಟುವಟಿಕೆಗೆ ಶ್ಲಾಘನೆ


ಯಾಚೇನಹಳ್ಳಿ ಪಿಎಸಿಎಸ್‌ಗೆ ಗೋವಾ ಅಪೆಕ್ಸ್ ಬ್ಯಾಂಕ್ ಹಾಗೂ ನಬಾರ್ಡ್ ಆಡಳಿತ ಮಂಡಳಿ ಸಿಬ್ಬಂದಿ ಭೇಟಿ ನೀಡಿದರು.

ತಿ.ನರಸೀಪುರ, ಫೆ.18– ಯಾಚೇನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಗೋವಾ ಅಪೆಕ್ಸ್ ಬ್ಯಾಂಕ್ ಹಾಗೂ ನಬಾರ್ಡ್ ಆಡಳಿತ ಮಂಡಳಿ ಸಿಬ್ಬಂದಿ ಭೇಟಿ ನೀಡಿ ಸಂಘದಿಂದ ನಡೆಸಲಾಗುತ್ತಿರುವ ಚಟುವಟಿಕೆಗಳನ್ನು ಶ್ಲಾಘಿಸಿದರು.

ಸಂಘದಿಂದ ನಡೆಸುತ್ತಿರುವ ಜನೌಷಧಿ ಕೇಂದ್ರ, ಜನತಾ ಬಜಾರ್, ಸೋಲಾರ್ ವಿದ್ಯುತ್ ಶೇಖರಣ ಘಟಕ, ರಸಗೊಬ್ಬರ ಮಾರಾಟ ಕೇಂದ್ರ, ನಂದಿನಿ ಮಳಿಗೆ, ಶುದ್ಧ ಕುಡಿಯುವ ನೀರಿನ ಘಟಕ ಮತ್ತು ಸಂಘದ ಕಟ್ಟಡ, ಸಂಘದ ಆದಾಯದ ಬಗ್ಗೆ ಗೋವಾ ಅಪೆಕ್ಸ್ ಬ್ಯಾಂಕ್ ಹಾಗೂ ನಬಾರ್ಡ್ ಆಡಳಿತ ಮಂಡಳಿ ಸದಸ್ಯರು ಸಂಘದ ಅಧ್ಯಕ್ಷ ವೈ.ಎನ್.ಶಂಕರೇಗೌಡರಿಂದ ಮಾಹಿತಿ ಪಡೆದರು.

ಸಂಘದ ಅಧ್ಯಕ್ಷ ವೈ.ಎನ್.ಶಂಕರೇಗೌಡ ಮಾತನಾಡಿ, ಗ್ರಾಮೀಣ ರೈತರು, ಬಡವರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಅವರಿಗೆ ಉಪಯುಕ್ತವಾಗುವ ವಸ್ತುಗಳನ್ನು ಕಡಿಮೆ ಬೆಲೆಯಲ್ಲಿ ವಿತರಿಸುವ ಮೂಲಕ ಕೋಟ್ಯಾಂತರ ರೂ. ವ್ಯಾಪಾರ ವಹಿವಾಟು ನಡೆಸುತ್ತಿದ್ದೇವೆ. ಸಹಕಾರಿ ಬಂಧುಗಳು ಹಾಗೂ ಇಲ್ಲಿನ ನಮ್ಮ ಆಡಳಿತ ಮಂಡಳಿ ಸಿಬ್ಬಂದಿ ಸಹಕಾರದಿಂದ ಎಲ್ಲರೂ ಒಟ್ಟಾಗಿ ಕೆಲಸ ಮಾಡಿಕೊಂಡು ಬರುತ್ತಿದ್ದೇವೆ. ಕಟ್ಟಡ ನಿರ್ಮಾಣದಲ್ಲಿ ಗ್ರಾಮಸ್ಥರ ಸಹಕಾರ ಹಾಗೂ ಸಹಕಾರ ಸಚಿವರಾಗಿದ್ದ ದಿ.ಎಚ್.ಎಸ್. ಮಹದೇವಪ್ರಸಾದ್ ಕೊಡುಗೆ ಅಪಾರ ಎಂದರು.

ಗೋವಾ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಉಲ್ಲಾಸ್ ಮಾತನಾಡಿ, ವೈ.ಎನ್. ಶಂಕರೇಗೌಡರು ಅಧ್ಯಕ್ಷರಾಗಿ ಕುರ್ಚಿಗೆ ಅಂಟಿ ಕೂರದೇ, ಗ್ರಾಮಸ್ಥರ ಸಹಕಾರದಿಂದ ಸುಸಜ್ಜಿತ ಕಟ್ಟಡ ನಿರ್ಮಾಣ ಮಾಡಿದ್ದಾರೆ. ಅಲ್ಲದೇ ಸಂಘದಲ್ಲಿ ಉತ್ತಮವಾಗಿ ಕೆಲಸ ಮಾಡುವ ಮೂಲಕ ಸಂಘವನ್ನು ಅಭಿವೃದ್ಧಿಪಡಿಸಿದ್ದಾರೆ ಎಂದರು.

ಈ ವೇಳೆ ಗೋವಾ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಕೃಷ್ಣ ಕುಟ್ಟಿಕರ್, ವ್ಯವಸ್ಥಾಪಕ ಅನಂತ ಚೊಡಂಕಾರ್, ನಬಾರ್ಡ್ ವ್ಯವಸ್ಥಾಪಕ ನಿರ್ದೇಶಕ ಸುಶೀಲ್ ನಾಯಕ್, ಶಾಂತವೀರ್, ಸಂಘದ ಇಓ ವೈ.ಎನ್ ಕ್ಯಾತೇಗೌಡ, ನಿರ್ದೇಶಕರಾದ ವೈ.ಹೆಚ್. ಹನುಮಂತೇಗೌಡ, ವೈ.ಜಿ.ಮಹೇಂದ್ರ, ರಾಜು, ನಾಗೇಂದ್ರ ಮಲ್ಲೇಶ್, ಶಿವಕುಮಾರ್, ಪುಟ್ಟರಾಜು, ಮುಖಂಡರಾದ ರವಿಕುಮಾರ್, ಜಿಲ್ಲಾ ಬ್ಯಾಂಕ್‌ನ ಹೇಮಂತ್ ಕುಮಾರ್, ಬನ್ನೂರು ಸಹಕಾರ ಸಂಘಗಳ ಮೇಲ್ವಿಚಾರಕ ಎಂ.ರಾಜಪ್ಪ, ಶೇಖರ್, ನವನೀತ್ ಹಾಗೂ ಗ್ರಾಮಸ್ಥರು, ಡೈರಿ ಅಧ್ಯಕ್ಷರು, ಸದಸ್ಯರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	**(ದೂ: 2521923)**
5ಡಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
5ಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಒಂದು ಸರಳ ಪ್ರೇಮಕಥೆ (ಕ)	4 ಪ್ರದರ್ಶನಗಳು
ರಾಜಕಮಲ್	
ಸೈರನ್ (ತ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
5ಡಿ (ಕ)	2 ಪ್ರದರ್ಶನಗಳು
ಕೆಟಿಎಂ (ಕ)	2 ಪ್ರದರ್ಶನಗಳು
ತಿಬ್ಬಾದೇವಿ	
5ಡಿ (ಕ)	4 ಪ್ರದರ್ಶನಗಳು
ಪ್ರಭಾ	
ಇ–ಮೇಲ್ (ಕ)	2 ಪ್ರದರ್ಶನಗಳು
ಲೇಡಿಸ್ ಬಾರ್ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಶಾಖಾಹಾರಿ (ಕ): ಬೆ.10.15ಕ್ಕೆ, ಕೆಟಿಎಂ (ಕ): ಮ.1.10ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಸಂ.4.15ಕ್ಕೆ, ಅಬ್ಬಬ್ಬ (ಕ): ರಾ.7.05ಕ್ಕೆ, ಭ್ರಮಯುಗಂ (ಮ): ರಾ.10ಕ್ಕೆ.
ಸ್ಕ್ರೀನ್ 2	ತುಂಡು (ಮ): ಬೆ.10.50ಕ್ಕೆ, ಬಾಬ್ ಮಾರ್ಲೆ: ಒನ್ ಲವ್ (ಇಂ): ಮ.1.40ಕ್ಕೆ, ರಾ.10.10ಕ್ಕೆ, ಕುಚ್ ಖಟ್ಟಾ ಹೋ ಜಾಯ್ (ಹಿಂ): ಸಂ.4.20ಕ್ಕೆ, ಪ್ರೇಮಲು (ಮ): ರಾ.7ಕ್ಕೆ.
ಸ್ಕ್ರೀನ್ 3	ಮಂಡ್ಯ ಹೈದ (ಕ): ಬೆ.10.15ಕ್ಕೆ, ಸೈರನ್ (ತ): ಮ.1.15ಕ್ಕೆ, ಮೇಡಮ್ ವೆಬ್ (ಇಂ): ಸಂ.4.35ಕ್ಕೆ, ರಾ.10ಕ್ಕೆ, ಭ್ರಮಯುಗಂ (ಮ): ರಾ.7.10ಕ್ಕೆ.
ಸ್ಕ್ರೀನ್ 4	ಸಾರಾಂಶ (ಕ): ರಾ.10.20ಕ್ಕೆ, ಉಪಾಧ್ಯಕ್ಷ (ಕ): ಮ.1.05ಕ್ಕೆ, ಫೈಟರ್ (ಹಿಂ): ಸಂ.4.10ಕ್ಕೆ, ಒಂದು ಸರಳ ಪ್ರೇಮಕಥೆ (ಕ): ರಾ.7.20ಕ್ಕೆ, ಊರು ಪೇರು ಭೈರವಕೋಣ (ತೆ): ರಾ.10.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಉಪಾಧ್ಯಕ್ಷ (ಕ): ಬೆ.10.05ಕ್ಕೆ, ಮೇಡಮ್ ವೆಬ್ (ಇಂ): ಮ.1.20ಕ್ಕೆ, ರಾ.7.05ಕ್ಕೆ, ರಾ.9.40ಕ್ಕೆ, ಊರು ಪೇರು ಭೈರವಕೋಣ (ತೆ): ಮ.3.55ಕ್ಕೆ.
ಸ್ಕ್ರೀನ್ 2	ಮೇಡಮ್ ವೆಬ್ (ಇಂ): ಬೆ.9.55ಕ್ಕೆ, ಸೈರನ್ 108 (ತ): ಸಂ.4ಕ್ಕೆ, ರಾ.10.30ಕ್ಕೆ, ಉಪಾಧ್ಯಕ್ಷ (ಕ): ರಾ.7.15ಕ್ಕೆ.
ಸ್ಕ್ರೀನ್ 3	ಸೈರನ್ 108 (ತ): ಮ.12.15ಕ್ಕೆ, ಬಾಬ್ ಮಾರ್ಲೆ: ಒನ್ ಲವ್ (ಇಂ): ಸಂ.4.10ಕ್ಕೆ, ಪ್ರೇಮಲು (ಮ): ಸಂ.6.45ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಒಂದು ಸರಳ ಪ್ರೇಮಕಥೆ (ಕ): ಬೆ.10.05ಕ್ಕೆ, ಸಂ.4.20ಕ್ಕೆ, ಅಬ್ಬಬ್ಬ (ಕ): ಮ.1.15ಕ್ಕೆ, ತುಂಡು (ಮ): ರಾ.7.30ಕ್ಕೆ, ಭ್ರಮಯುಗಂ (ಮ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಫೈಟರ್ (2ಡಿ)(ಹಿಂ): ಸಂ.6.35ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.9.30ಕ್ಕೆ, ಮ.3.55ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ, ಉಪಾಧ್ಯಕ್ಷ (ಕ): ಮ.3.25ಕ್ಕೆ, ಅನ್ವೇಷಿಪಿನ್ ಕಂಡೆತುಂ (ಮ): ಸಂ.4.05ಕ್ಕೆ, ಸಾರಾಂಶ (ಕ): ಮ.1.15ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಮ.12.15ಕ್ಕೆ, ಸೈರನ್ 108 (ತ): ಬೆ.10.10ಕ್ಕೆ, ಸಂ.4.20ಕ್ಕೆ, ರಾ.10.30ಕ್ಕೆ, ಮೇಡಮ್ ವೆಬ್ (ಇಂ): ಬೆ.10.50ಕ್ಕೆ, ಮ.1.25ಕ್ಕೆ, ಸಂ.4.35ಕ್ಕೆ, ರಾ.7.10ಕ್ಕೆ, ರಾ.9.45ಕ್ಕೆ, ಪ್ರೇಮಲು (ಮ): ಮ.12.40ಕ್ಕೆ, ರಾ.7.05ಕ್ಕೆ, ರಾ.10.20ಕ್ಕೆ, ಭ್ರಮಯುಗಂ (ಮ): ರಾ.10ಕ್ಕೆ, ಅಬ್ಬಬ್ಬ (ಕ): ಮ.2.55ಕ್ಕೆ, ವಾರನಂ ಆಯಿರಂ (ತ): ಸಂ.6ಕ್ಕೆ, ರವಿಕೆ ಪ್ರಸಂಗ (ಕ): ರಾ.9.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ವಿಜೃಂಭಣೆಯ ಚೌಡೇಶ್ವರಿ ಉತ್ಸವ


ಶ್ರೀ ರಾಮಲಿಂಗ ಚೌಡೇಶ್ವರಿ ದೇವಸ್ಥಾನದ 16ನೇ ಪೂಜಾ ಮಹೋತ್ಸವ ನೆರವೇರಿತು.

ಕಂಪಲಾಪುರ, ಫೆ.18– ಗ್ರಾಮದ ದೇವಾಂಗ ಸಂಘದ ಶ್ರೀ ರಾಮಲಿಂಗ ಚೌಡೇಶ್ವರಿ ದೇವಸ್ಥಾನದ 16ನೇ ಪೂಜಾ ಮಹೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಬೆಂಗಳೂರಿನ ಪುರೋಹಿತರಾದ ಪ್ರಕಾಶ್ ಭಟ್ ನೇತೃತ್ವದಲ್ಲಿ ಧಾರ್ಮಿಕ ಪೂಜಾ ಕೈಂಕರ್ಯ ನಡೆಯಿತು. ಮಧ್ಯಾಹ್ನ ಮಹಾಮಂಗಳಾರತಿ ನೆರವೇರಿಸಿದ ಬಳಿಕ ಭಕ್ತರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು. ಶ್ರೀ ನಾಗ ವಿದ್ಯಾಸಂಸ್ಥೆ ಆವರಣದಲ್ಲಿ ಅನ್ನ ಸಂತರ್ಪಣೆ ನೆರವೇರಿತು.

ಈ ಬಾರಿ ದೇವಿಗೆ ಹೊಸದಾಗಿ ಬೆಳ್ಳಿಯ ಕವಚ ಧಾರಣೆ ಮಾಡಿದ್ದು, ನೋಡುಗರ ಕಣ್ಮನ ಸೆಳೆಯುವಂತಿತ್ತು. ದೇವಾಂಗ ಸಮುದಾಯದ ಪುಟ್ಟ ಮಕ್ಕಳಿಂದ ಹಿಡಿದು ಯುವಕರು, ಹಿರಿಯರೆಲ್ಲರೂ ಶ್ವೇತವರ್ಣದ ಉಡುಪು ಧರಿಸಿ ಪೂಜಾ ಕಾರ್ಯದಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ಮೈಸೂರಿನ ನಟರಾಜ್ ತಂಡದ ಕರಡಿವಾದ್ಯ, ಕಂಪ್ಲಾಪುರದ ಮಹದೇವ್ ತಂಡದ ಮಂಗಳವಾದ್ಯ, ಕೇರಳದ ಚಂಡೆಯೊಂದಿಗೆ ಮಡಿಕೇರಿಯ ಪೂಜಾ ಲೈಟಿಂಗ್ಸ್ ಅವರ ವಿದ್ಯುತ್ ದೀಪಾಲಂಕಾರದ ಭವ್ಯ ಮಂಟಪದಲ್ಲಿ ದೇವಿ ಮೂರ್ತಿಯನ್ನಿಟ್ಟು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಮೆರವಣಿಗೆಯುದ್ದಕ್ಕೂ ಭಕ್ತರು ಚಂಡೆ ನಾದಕ್ಕೆ ಕುಣಿದು ಕುಪ್ಪಳಿಸಿದರು. ಕೆಲವರು ಪಟಾಕಿ ಸಿಡಿಸಿ ಸಂಭ್ರಮಿಸಿದರು.

ರಾಜೇಗೌಡ ನಿಧನ



ಹಿರೀಕ್ಯಾತನಹಳ್ಳಿ, ಫೆ.18– ಗ್ರಾಮದ ನಿವಾಸಿ ರಾಜೇಗೌಡ (44) ಭಾನುವಾರ ಮುಂಜಾನೆ ನಿಧನರಾದರು. ಮೃತರು ಪತ್ನಿ, ಇಬ್ಬರು ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಧ್ಯಾಹ್ನ 1 ಗಂಟೆಗೆ ಮೃತರ ತೋಟದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

‘ಅಶೋಕಪುರಂ’ ಮಣ್ಣಿನಲ್ಲಿ ಕ್ರಾಂತಿಕಾರಕ, ಭ್ರಾತೃತ್ವ ಗುಣವಿದೆ

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅಭಿನಂದನಾ ಸಮಾರಂಭದಲ್ಲಿ ಡಾ.ತುಕಾರಾಂ ಬಣ್ಣನೆ



ಮೈಸೂರಿನ ಬುದ್ಧ ಧ್ಯಾನ ಮಂದಿರದಲ್ಲಿ ವಿನಾಯಕ ಕ್ರೀಡಾ ಹಾಗೂ ಸಮಾಜ ಸೇವಾ ಸಂಸ್ಥೆ ವತಿಯಿಂದ ನಡೆದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಮೈಸೂರು, ಫೆ.18(ಎಸ್‌ಪಿಎನ್)–ನಮ್ಮ ಜಿಲ್ಲೆಯ ಶೋಷಿತ ಸಮುದಾಯದ ನೋವು–ನಲಿವಿಗೆ ತಾಯಿ ಸ್ಥಾನದಲ್ಲಿ ನಿಂತು ಮೊದಲು ಸ್ಪಂದಿಸುವುದೇ ಮೈಸೂರು ನಗರದ ‘ಅಶೋಕ ಪುರಂ’ನ ಜನತೆ ಎಂದು ಅಭಿಪ್ರಾಯಪಟ್ಟ ಬೆಂಗಳೂರು ಕರ್ನಾಟಕ ವಸತಿ ಶಿಕ್ಷಣ ಶಾಲೆಗಳ ಸಂಸ್ಥೆ ಸಲಹೆಗಾರ ಡಾ.ಎಸ್.ತುಕಾರಾಂ, ಅಶೋಕಪುರಂನಲ್ಲಿ ಕ್ರಾಂತಿಕಾರಕ, ಭ್ರಾತೃತ್ವದ ಗುಣವಿದೆ ಎಂದರು.

ಮೈಸೂರು ನಗರದ ಅಶೋಕಪುರಂನಲ್ಲಿರುವ ದಿ.ಬಸವಲಿಂಗಪ್ಪ ವೃತ್ತದ ಕೆ.ಶಿವರಾಂ ಕ್ರೀಡಾಂಗಣದ ಆವರಣದಲ್ಲಿರುವ ಬುದ್ಧ ಧ್ಯಾನ ಮಂದಿರದಲ್ಲಿ ವಿನಾಯಕ ಕ್ರೀಡಾ ಹಾಗೂ ಸಮಾಜ ಸೇವಾ ಸಂಸ್ಥೆ ವತಿಯಿಂದ ನಡೆದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅಭಿನಂದಿಸುವ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

‘ಅಶೋಕಪುರಂ’ ಅನೇಕ ಪ್ರತಿಭಾವಂತವರಿಗೆ ಜನ್ಮ ನೀಡಿದೆ. ಈ ಬಡಾವಣೆಯಲ್ಲಿ ಓದಿದ ಅನೇಕರು ಇಂದು ಉನ್ನತ ಹುದ್ದೆಯಲ್ಲಿದ್ದಾರೆ. ಜನ ಪ್ರತಿನಿಧಿಗಳಾಗಿದ್ದಾರೆ. ಈ ಮಣ್ಣಿನಲ್ಲಿ ಕ್ರಾಂತಿಕಾರಕ ಹಾಗೂ ಭ್ರಾತೃತ್ವದ ಗುಣವಿದೆ. ಹಾಗಾಗಿ ಈ ನೆಲದಲ್ಲಿ ಅಭಿನಂದನೆಗೊಳ್ಳುತ್ತಿರುವ ವಿದ್ಯಾರ್ಥಿಗಳು ‘ಅಶೋಕಪುರಂ’ ಬಗ್ಗೆ ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು ಎಂದು ಕಿವಿ ಮಾತು ಹೇಳಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು, ಬುದ್ಧ, ಜ್ಯೋತಿಬಾಯಿ ಫುಲೆ ಮಾರ್ಗವನ್ನು ಅನುಸರಿಸಿ, ಇಂದು ವಿಶ್ವವೇ ಮೆಚ್ಚುವ ಮಹಾಜ್ಞಾನಿಯಾಗಿ ಬೆಳೆದಿದ್ದಾರೆ. ಅವರು ಬಾಲ್ಯದಲ್ಲಿ ಅನುಭವಿಸಿದ ಕಷ್ಟ, ನೋವು, ಅಸ್ಪೃಶ್ಯತೆಯನ್ನು ದಾಟಿ ಶಿಕ್ಷಣವನ್ನು ಪಡೆದರು. ಅವರು ಎಸ್‌ಎಸ್‌ಎಲ್‌ಸಿ ತೇರ್ಗಡೆಗೊಂಡಾಗ ಅವರನ್ನು ಸನ್ಮಾನಿಸುವ ಪ್ರಸಂಗ ಜರುಗುತ್ತದೆ. ಅದರಲ್ಲಿ ಕೆಲವರು ಬೇರೆ ಬೇರೆ ಬೆಲೆ ಬಾಳುವ ಉಡುಗೊರೆಗಳನ್ನು ನೀಡುತ್ತಾರೆ. ಅದರಲ್ಲೊಬ್ಬರು ಬುದ್ಧನ ಬದುಕು ಮತ್ತು ಬರಹಗಳನ್ನೊಳಗೊಂಡ ಪುಸ್ತಕವನ್ನು ನೀಡುತ್ತಾರೆ. ಅದನ್ನು ಮನೆಗೆ ಹೋದ ನಂತರ ಪೂರ್ಣ ಓದಿ ಮುಗಿಸುವ ವೇಳೆಗೆ ಬುದ್ಧನ ಅನುಯಾಯಿ ಬದಲಾಗುವ ಪ್ರಸಂಗವನ್ನು ಎಳೆಎಳೆಯಾಗಿ ವಿವರಿಸಿದರು.

ಸನ್ಮಾನ: 2022–23ನೇ ಸಾಲಿನ ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಾದ ಎಸ್.ರವಿ(ಶೇ.80.2), ಪಿ.ಪ್ರೀತಮ್ (ಶೇ.80.32), ಚಂದನ(ಶೇ.78.24), ಕೆ.ಪ್ರೀತಮ್ (ಶೇ.80.94), ಎನ್.ಪ್ರೀತಮ್ (ಶೇ.82), ಆರ್.ಯಾಮಿನಿ (ಶೆ.75), ಪಿ.ಅಜಯ್ ಭಾರದ್ವಜ್ (ಶೇ.93.28), ಕೆ.ಬಿ.ದಿವ್ಯಶ್ರೀ (ಶೇ.82.4), ಎಂ.ಎನ್.ಪ್ರಿಯಾ (ಶೇ.91.04), ಯು.ಸಂಜನ (ಶೇ.91.68), ಹೆಚ್.ಪೂರ್ವಜ್(ಶೇ.91.2), ಭುವನ ಎನ್.ಈಶ್ವರ (ಶೇ.89.28), ಎಂ.ನವ್ಯಶ್ರೀ(ಶೇ.76.96), ಆರ್.ವಿನಯ್ (ಶೇ.80), ಆರ್.ಲಕ್ಷಿತ(ಶೇ.97.6), ಎಂ.ಪಿ.ಹರ್ಷ (ಶೇ.90), ಜಿ.ಸಂಜನ(ಶೇ.91.52), ಎ.ವರ್ಷಿಣಿ (ಶೇ.88), ಎಂ.ಎಸ್.ಭವ್ಯಶ್ರೀ (ಶೇ.85), ಯು.ಗಗನಶ್ರೀ (ಶೇ.86.56) ಅವರನ್ನು ಗೌರವಿಸಲಾಯಿತು.

2023–24ನೇ ಸಾಲಿನ ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಾದ ನಾಗಲಾಂಭಿಕ (ಶೇ.85%), ಕೆ.ಸಿ.ಸೌಮ್ಯ (ಶೇ.75), ಆರ್.ಪ್ರಕೃತಿ(ಶೇ.75.33%), ಡಿ.ರಜತ(ಶೇ.75.5), ಎನ್.ಎನ್.ಚಾಣಕ್ಯ (ಶೇ.88), ವೈ.ಹರ್ಷಿತ (ಶೇ.79.83), ಪಿ.ರಚನಾ (ಶೇ.81.33), ಡಿ.ಪರಿಚಿತ (ಶೇ.88), ಚಿರಂತ ರಾಜೇಶ್ (ಶೇ.80), ಹೆಚ್.ವರ್ಷ (ಶೇ.89), ಎಸ್.ನಾಗರತ್ನ (ಶೇ.78.83), ಆರ್.ಮೊನಿಕಾ(ಶೇ.76.5%), ಎಸ್.ಸುಪ್ರಿಯಾ (ಶೇ.95.5), ಕೆ. ಪೂರ್ಣ ಚಂದ್ರ ತೇಜಸ್ವಿ (ಶೇ.80.66), ಎಸ್.ರಮ್ಯಶ್ರೀ (ಶೇ.92.5), ಎನ್.ವತ್ಸಲ (ಶೇ.83) ಅವರನ್ನು ಅಭಿನಂದಿಸಲಾಯಿತು.

ಈ ವೇಳೆ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಮೈಸೂರು ವಿವಿ ಮಾನಸಗಂಗೋತ್ರಿ ಕಾನೂನು ವಿಭಾಗದ ಪ್ರಾಧ್ಯಾಪಕ ಪ್ರೊ.ರಮೇಶ್, ಮೈಸೂರು ವಿನಾಯಕ ಕ್ರೀಡಾ ಹಾಗೂ ಸಮಾಜ ಸೇವಾ ಸಂಸ್ಥೆ ಗೌರವಾಧ್ಯಕ್ಷ ಎಂ.ಮಾದಯ್ಯ, ಅಧ್ಯಕ್ಷ ಎಸ್.ಆನಂದಮೂರ್ತಿ, ಕಾರ್ಯದರ್ಶಿ ಎಂ.ಕೆ. ರೇವಣ್ಣ ಪದಾಧಿಕಾರಿಗಳಾದ ಕೆಂಪಸಿದ್ದಯ್ಯ, ಎನ್.ಈಶ್ವರ್, ಪುರುಷೋತ್ತಮ್ ಸೇರಿದಂತೆ ಇತರರಿದ್ದರು.



ಜೈನ ಮಠದ ಆಚಾರ್ಯ ವಿದ್ಯಾಸಾಗರ್ ಮಹಾರಾಜ್ ನಿಧನ

ನವದೆಹಲಿ, ಫೆ.18– ಜೈನ ಸಮುದಾಯದ ದಾರ್ಶನಿಕ ಮುನಿ, ಆಚಾರ್ಯ ಶ್ರೀ ವಿದ್ಯಾಸಾಗರ ಮಹಾರಾಜ ಅವರು ಛತ್ತೀಸಗಢದ



ಡೊಂಗರಗಢದ ಚಂದ್ರಗಿರಿ ತೀರ್ಥದಲ್ಲಿ ನಿಧನ ಹೊಂದಿದ್ದಾರೆ. ವಿದ್ಯಾಸಾಗರ ಮಹಾರಾಜರು ಕಳೆದ ಕೆಲವು ದಿನಗಳಿಂದ ಅಸ್ವಸ್ಥರಾಗಿದ್ದರು. 3 ದಿನಗಳ ಹಿಂದೆ ಸಮಾಧಿ ಪ್ರಕ್ರಿಯೆ ಅಂದರೆ ‘ಸಲ್ಲೇಖನ’ವನ್ನು ಪ್ರಾರಂಭಿಸಿದ್ದರು. ಇದರ ಅಡಿಯಲ್ಲಿ, ಅವರು ಆಹಾರ ಮತ್ತು ನೀರನ್ನು ಸಂಪೂರ್ಣವಾಗಿ ತ್ಯಜಿಸಿದ್ದರು. ಇದಾದ ಬಳಿಕ ಶನಿವಾರ ರಾತ್ರಿ 2:35ರ ಸುಮಾರಿಗೆ ಆಚಾರ್ಯ ದೇಹ ತೊರೆದಿದ್ದಾರೆ.

ಜೈನ ಸಮುದಾಯದ ರತ್ನ ಎಂದು ಕರೆಯಲ್ಪಡುವ ಆಚಾರ್ಯ ವಿದ್ಯಾಸಾಗರ್ ಮಹಾರಾಜ್ ಅವರು 1946 ರ ಅಕ್ಟೋಬರ್ 10 ರಂದು ಶರದ್ ಪೂರ್ಣಿಮಾ ದಿನದಂದು ಕರ್ನಾಟಕದ ಸದಲಗಾ ಗ್ರಾಮದಲ್ಲಿ ಜನಿಸಿದರು.

ಮಾಹಿತಿಯ ಪ್ರಕಾರ, ಆಚಾರ್ಯ ವಿದ್ಯಾಸಾಗರ್ ಆಚಾರ್ಯ ಜ್ಞಾನಸಾಗರ್ ಅವರ ಶಿಷ್ಯರಾಗಿದ್ದರು ಮತ್ತು ಅವರು ಸಮಾಧಿಯಾದಾಗ, ಅವರು ತಮ್ಮ ಆಚಾರ್ಯ ಹುದ್ದೆಯನ್ನು ಮುನಿ ವಿದ್ಯಾಸಾಗರ್ ಅವರಿಗೆ ಹಸ್ತಾಂತರಿಸಿದರು. ನವೆಂಬರ್ 22, 1972 ರಂದು, ಮುನಿ ವಿದ್ಯಾಸಾಗರ್ ತಮ್ಮ 26 ನೇ ವಯಸ್ಸಿನಲ್ಲಿ ಆಚಾರ್ಯರಾದರು. ಅವರು ಶಾಸ್ತ್ರೀಯ (ಸಂಸ್ಕೃತ ಮತ್ತು ಪ್ರಾಕೃತ) ಮತ್ತು ಹಲವಾರು ಆಧುನಿಕ ಭಾಷೆಗಳಾದ ಹಿಂದಿ, ಮರಾಠಿ ಮತ್ತು ಕನ್ನಡದಲ್ಲಿ ಪರಿಣತರಾಗಿದ್ದರು.

mega sale never before 1 + 1 offer
BUY 1 GET 1 free
ON ALL IN-HOUSE BRANDS *
PICK THE BEST FOR UR FEET
ON GENTS & LADIES FOOTWEAR
Open On Sunday
Limited Period Offer
Rush Today
SHOE WORLD ESTD.1998
Best Brands at Your Feet...
Celebrating 25+ Years
*T&C Apply
Only At : SHIVARAMPET, OPP. MANNARS MARKET, MYSORE - 01. PH : 0821- 2424282

16ನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಜಯಮ್ಮ
ನಿಧನ :19.2.2008

ನೀವು ನಮ್ಮನ್ನಗಲಿ ಇಂದಿಗೆ 15 ವರ್ಷಗಳು ಕಳೆದರೂ ಸದಾ ನಿಮ್ಮ ನೆನಪಿನಲ್ಲೇ ಇರುವ ದುಃಖತಪ್ತರು: ಎಂ.ಪಿ. ಕೃಷ್ಣ, ಬೀನಾ ಅಕ್ಷಯ್ ಮತ್ತು ಆಶಿಕಾ

3ನೇ ವರ್ಷದ ಸವಿನೆನಪು



ಶ್ರೀಮತಿ ನಿಂಗಮ್ಮ

ನೀವು ನಮ್ಮನ್ನಗಲಿ ಇಂದಿಗೆ 3 ವರ್ಷವಾದರು ಸದಾ ನಿಮ್ಮ ಸ್ಮರಿಸುತ್ತಿರುವ – ಮಕ್ಕಳು ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಕಾರ್ಯಪಾಲಕ ಅಭಿಯಂತರರವರ ಕಛೇರಿ
ಕನನೀಸ ಮತ್ತು ಒಚ ಮಂಡಳಿ, ನಗರ ವಿಭಾಗ (ಜೆ.ಎನ್.ನರ್ಮ್)
ಜಲಭವನ, 2ನೇ ಮಹಡಿ, ಪಿ–4,10ನೇ ಮುಖ್ಯ ರಸ್ತೆ, 3ನೇ ಅಡ್ಡರಸ್ತೆ,
ಸರಸ್ವತಿಪುರಂ, ಮೈಸೂರು–570009 : 9480813129 ಇ–ಮೇಲ್: kwbmysjnee@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮೈಸೂರು ನಗರದ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಬರುವ ಹಂಚ್ಯಾ ಗ್ರಾಮದಲ್ಲಿ 1 ಸಂಖ್ಯೆಯ 2.5 ಲಕ್ಷ ಲೀಟರ್ ಸಾಮರ್ಥ್ಯದ ಮೇಲ್ಮಟ್ಟದ ಜಲಸಂಗ್ರಹಗಾರ ನಿರ್ಮಿಸುವ ಕಾಮಗಾರಿಯ ಇ–ಟೆಂಡರ್ Indent No:KUWSDB/2023-24/WT/WORK_INDENT164 ರಲ್ಲಿ ಕರೆಯಲಾಗಿದ್ದು ಟೆಂಡರಿಗಿಟ್ಟ ಮೊತ್ತ, ಶುಲ್ಕ, ಷರತ್ತು, ಇತರೆ ಹೆಚ್ಚಿನ ಮಾಹಿತಿಗೆ https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/–
ಕಾರ್ಯಪಾಲಕ ಅಭಿಯಂತರು
ನಗರ ವಿಭಾಗ (ಜೆ.ಎನ್.ನರ್ಮ್),ಮೈಸೂರು

10ನೇ ವರ್ಷದ ಪುಣ್ಯಸ್ಮರಣೆ



ಶ್ರೀ.ಬಿ.ಕೆ.ವಿಷಕಂಠು
M.N.P.M

ನೀವು ನಮ್ಮನ್ನಗಲಿ ಇಂದಿಗೆ 10 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ದುಃಖತಪ್ತರು
ಪತ್ನಿ: ಎನ್ ಜಯಶ್ರೀ, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳಾದ ಎಸ್.ರುಶಿತಾ ಪ್ರೇಮ್, ಎಸ್.ಭುವನ ಪ್ರೇಮ್ ಮತ್ತು ಕುಟುಂಬ ವರ್ಗದವರು
ಕೆ.ಆರ್.ಸಾಗರ
9880661172
9945154090

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

10ನೇ ವರ್ಷದ ಸವಿನೆನಪು



T. ಲಕ್ಷ್ಮಣ್
S/o.ಮಂಜುನಾಥ್ L

ನೀವು ನಮ್ಮನ್ನಗಲ್ಲಿ ಇಂದಿಗೆ 10 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ದುಃಖತಪ್ತರು: ಪತ್ನಿ ಬೃಂದಾಮಣಿ, ಮಕ್ಕಳು ಎಂ. ಅಖಿಲೇಶ್, ಎಂ. ನಿಖಿಲೇಶ್, ನಿಖಿತಗೌಡ.ಎಂ. ಮತ್ತು ಕುಟುಂಬವರ್ಗ

ALIENATED PRIME COMMERCIAL LAND OF 58,000 SQFT., FOR SALE

in Belawadi industrial area, Lingadevara Koppalu village, adjacent to Mysore - Bantwal NH 275. Interested persons may email:
sheik.yunus6@gmail.com
+919845250391

ಸಾರ್ವಜನಿಕರ ಗಮನಕ್ಕೆ

ನಮ್ಮ ಕಕ್ಷಿದಾರರುಗಳಾದ ಬೆಂಗಳೂರಿನಲ್ಲಿ ವಾಸವಾಗಿರುವ ಪ್ರಶಾಂತ ಆರ್. ರವರ ಧರ್ಮಪತ್ನಿಯಾದ ಶ್ರೀಮತಿ ತಾರಾ ಎಂ.ಎನ್. ಹಾಗೂ ರಾಜೀವ್ ಕುಮಾರ್ ರವರ ಧರ್ಮಪತ್ನಿಯಾದ ಶ್ರೀಮತಿ ಕವಿತಾ ಉನ್ನಿಕೃಷ್ಣನ್ ರವರುಗಳು ಷೆಡ್ಯೂಲ್ ಸ್ವತ್ತನ್ನು ಅದರ ಮಾಲೀಕರಾದ ಶ್ರೀ ವಿನಯ್ ಬಿ. ರವರಿಂದ ಖರೀದಿ ಮಾಡುವ ಸಂಬಂಧ ದಿನಾಂಕ 12–02–2024 ರಂದು ಸ್ಥಿರ ಸ್ವತ್ತಿನ ಶುದ್ಧ ಕ್ರಯದ ಕರಾರು ಪತ್ರವನ್ನು ಮಾಡಿಕೊಂಡಿರುತ್ತಾರೆ ಹಾಗೂ ಸದರಿ ಷೆಡ್ಯೂಲ್ ಸ್ವತ್ತನ್ನು ಕ್ರಯದ ನೋಂದಣಿ ಮಾಡಿಕೊಳ್ಳಲು ಸಿದ್ಧರಿರುತ್ತಾರೆ. ಆದ್ದರಿಂದ, ಸಾರ್ವಜನಿಕರು ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ತಂಟೆ ತಕರಾರುಗಳು ಹಾಗೂ ಆಕ್ಷೇಪಣೆಗಳು ಇದ್ದಲ್ಲಿ ಈ ದಿನದಿಂದ ಏಳು (07) ದಿನಗಳ ಒಳಗಾಗಿ ನಮ್ಮ ಕಕ್ಷಿದಾರರ ವಕೀಲರ ಕಛೇರಿಯ ವಿಳಾಸದಲ್ಲಿ ತಮ್ಮ ಅಹವಾಲನ್ನು ಸಲ್ಲಿಸತಕ್ಕದ್ದು.

ಷೆಡ್ಯೂಲ್ ಸ್ವತ್ತುಗಳ ವಿವರ

1) ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಬನ್ನಿಗುಪ್ಪೆ ಗ್ರಾಮದ ಸರ್ವೆ ನಂ. 11/2 ರ ವಿಸ್ತೀರ್ಣ 2 ಎಕರೆ 25 ಗುಂಟೆ ಜಮೀನಿಗೆ ಚಕ್ಕುಬಂದಿ; ಪೂರ್ವಕ್ಕೆ : ಬಂಡಿ ದಾರಿ, ಪಶ್ಚಿಮಕ್ಕೆ : ಸುಲೋಚನಮ್ಮ ರವರ ಜಮೀನು, ಉತ್ತರಕ್ಕೆ : ಸರ್ವೆ ನಂ. 12 ರ ಜಮೀನು ಹಾಗೂ ದಕ್ಷಿಣಕ್ಕೆ : ಚಂದ್ರಶೇಖರ ರವರ ಜಮೀನು.

2) ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಬನ್ನಿಗುಪ್ಪೆ ಗ್ರಾಮದ ಸರ್ವೆ ನಂ. 11/3 ರ ವಿಸ್ತೀರ್ಣ 0.03 ಗುಂಟೆ ಜಮೀನಿಗೆ ಚಕ್ಕುಬಂದಿ; ಪೂರ್ವಕ್ಕೆ : ಚಂದ್ರಶೇಖರ್ ರವರ ಜಮೀನು, ಪಶ್ಚಿಮಕ್ಕೆ : ಸುಲೋಚನಮ್ಮ ರವರ ಜಮೀನು, ಉತ್ತರಕ್ಕೆ : ವಿನಯ್ ಬಿ. ರವರ ಜಮೀನು ಹಾಗೂ ದಕ್ಷಿಣಕ್ಕೆ : ಬಿ.ಪಿ. ಮರಿಲಿಂಗಪ್ಪ ರವರ ಜಮೀನು.

ಸಹಿ/– ಸಂದೀಪ ಕೆ.ಎಸ್. ವಕೀಲರು,
No. 2166/A, 6th Cross, K-Block,
Kuvempunagar, Mysuru
Mobile No. 9844242408

BUILDING CONSTRUCTION
Starts from Rs.1699/- sqft.,
Call: 7897891986

Star Solar Renewable Energy
ಕೇವಲ 19,499/- 200 Ltr
Easy EMI
*7/15 Years Guaranty
Limited Period Offer
Old system Exchange offer available
Manufacturing : Belawadi Industrial Sub,Mysore
9945616293 / 9449966293

IN THE COURT OF THE VI ADDITIONAL CIVIL JUDGE & JMFC AT MYSURU

O.S No. 854 / 2013

Plaintiffs: Smt. Shahanaz Begum (Since Dead by LRs)

1(a) Sri. Afroze Ahmed, S/o Late. Smt. Shahanaz Begum, Aged 34 years. R/at No. 58, MIG, Hudco Colony, Bannimantap, Mysuru - 570 015.

1(b) Smt. Tabassum Fathima, D/o Late Smt. Shahanaz Begum, W/o Sri. Mohiuddin Khalendar Shariff, Aged 32 years, R/at D.No. 445, 6th Main, 8th Cross, Rajiv Nagar I Stage, Mysuru-570 019.

(Proposed LR No. 1 (b) of Original Plaintiff)

V/S

Defendants: 1) Smt. Rukmini, W/o Sri. B. Chandrashekar Aged 38 years, R/at D.No. 408, 5th Cross, II stage, Bogadi, Mysuru.

2) Sri. Umar Farooq, S/o Sri. Abdul Azeej Sait, Aged 50 years, R/at D.No.834, 1 Stage, Rajeev Nagar, N.R Mohalla, Mysuru.

3) Sri Nasrulla Khan, S/o Sri. A. Gouse Khan. Aged 38 years, R/at D.No. 2841, 8th Cross, 8th Main, Near Madegowda Circle, I Stage, Rajeev Nagar, N.R. Mohalla, Mysuru.

NOTICE

Take notice of the fact that the Plaintiffs has filed the above Suit against the Defendants seeking the Relief of Declaration that the Plaintiff is the absolute owner of Plaint Schedule Property and such other reliefs as made mention of in the Plaint. The Legal Representatives of deceased Defendant No.2 are hereby called upon to appear before the Hon'ble Court on 26-03-2024 at 11 A.M. failing which, the matter will be adjudicated by placing the said Legal Representatives of deceased Defendant No. 2 exparte.

SCHEDULE

Site bearing No. 1779, situated at Devanoor Extension, I Stage, N.R.Mohalla, Mysuru, measuring 12 mtr by East to West and 18 mtr by North to South & bounded on the: East by : Site bearing No. 1780 ; West by: Site bearing No. 1778 ; North by: Road ; South by Site bearing No. 1786.

Given under my hand and seal of the court on this day of 17-02-2024.

By Order of the Court
Sd/ Chief Ministerial Officer,
Principal Civil Judge and JMFC, Mysuru

Ranjini. J, Advocate
No. 1432/A, New No. D-9/1, “Ambasutha Sadana”
Seebaiah Road, Devaraja Mohalla, Mysuru-570 001